# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ ಮಂಗಳವಾರ, ಫೆಬ್ರವರಿ 25, 2025

ಸಂಪುಟ : 51 ಸಂಚಿಕೆ : 284 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com






# ಮೂರನೇ ದಿನವೂ ಅರ್ಧ ಹೆಲ್ಮೆಟ್ ಕಾರ್ಯಾಚರಣೆ

ದಾವಣಗೆರೆ, ಫೆ.24- ಜಿಲ್ಲಾ ಪೊಲೀಸ್ ಇಲಾಖೆ ನಗರದಲ್ಲಿ ನಡೆಸುತ್ತಿರುವ ಅರ್ಧ ಹೆಲ್ಮೆಟ್ ಕಾರ್ಯಾಚರಣೆ ಸೋಮವಾರವೂ ಮುಂದುವರೆದಿದ್ದು, ನಗರದ ಹಲವೆಡೆ ಅರ್ಧ ಹೆಲ್ಮೆಟ್‌ಗಳನ್ನು ವಶ ಪಡಿಸಿಕೊಳ್ಳಲಾಗಿದೆ.

ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿ ಅರ್ಧ ಹೆಲ್ಮೆಟ್ ಕಾರ್ಯಾಚರಣೆ ನಡೆಸಿದ ಪೊಲೀಸರು, ವಾಹನ ಸವಾರರಿಗೆ ಹೆಲ್ಮೆಟ್ ಕುರಿತು ಅರಿವು ಮೂಡಿಸಿದರು.

ಬೆಳಗಿನಿಂದಲೂ ನಗರದಲ್ಲಿ ಸಂಚಾರ ಪೊಲೀಸ್ ವಿಭಾಗದ ಹಲವು ಅಧಿಕಾರಿಗಳು, ಪೇದೆಗಳು ವಿವಿಧ ವೃತ್ತಗಳಲ್ಲಿ ವಾಹನ ಸವಾರರಿಗೆ ಸುರಕ್ಷತೆ ಸಂಚಾರಕ್ಕಾಗಿ ಜಾಗೃತಿ ಅಭಿಯಾನ ನಡೆಸಿ ವಿಶೇಷವಾಗಿ ದ್ವಿಚಕ್ರ ಸವಾರರಿಗೆ ಸಂಪೂರ್ಣ ಸುರಕ್ಷತೆ ನೀಡುವ ಶಿರಸ್ತ್ರಾಣವನ್ನು ಧರಿಸುವಂತೆ ಮನವಿ ಮಾಡುತ್ತಿದ್ದರು.

ಇತ್ತೀಚಿನ ದಿನಗಳಲ್ಲಿ ನಡೆದ ಅಪಘಾತ ಪ್ರಕರಣಗಳಲ್ಲಿ ಹೆಲ್ಮೆಟ್ ಇಲ್ಲದ ಕಾರಣ ತಲೆಗೆ ಹಾನಿಯಾಗಿ ಸಾವನ್ನಪ್ಪುವ ಪ್ರಕರಣಗಳು ಹೆಚ್ಚಾಗುತ್ತಿವೆ. ಈ ಹಿನ್ನೆಲೆಯಲ್ಲಿ ಪೂರ್ಣ ಪ್ರಮಾಣದ, ಐಎಸ್‌ಐ ಮಾರ್ಕ್ ಇರುವ ಹೆಲ್ಮೆಟ್‌ಗಳನ್ನು ಧರಿಸಿ ಪ್ರಾಣ ರಕ್ಷಿಸಿಕೊಳ್ಳುವಂತೆ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ವಿಜಯಕುಮಾರ ಎಂ. ಸಂತೋಷ್ ಕರೆ ನೀಡಿದರು.

ಪತ್ನಿ, ಮಕ್ಕಳು, ಹೆತ್ತವರು ಹೀಗೆ ಒಬ್ಬರನ್ನು ನೆಚ್ಚಿಕೊಂಡು ಕುಟುಂಬದಲ್ಲಿ ಹಲವಾರು ಸದಸ್ಯರಿರುತ್ತಾರೆ. ಹೆಲ್ಮೆಟ್ ಧರಿಸದೆ ನಿರ್ಲಕ್ಷ್ಯ ವಹಿಸಿದಾಗ ಅಪಘಾತಗಳಾದರೆ ಎಲ್ಲರೂ ಬೀದಿಗೆ ಬರಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಹೆಲ್ಮೆಟ್ ಅತ್ಯಗತ್ಯವಾಗಿದೆ ಎಂದು ವಿಜಯಕುಮಾರ್ ಅವರು ಕಳಕಳಿ ವ್ಯಕ್ತಪಡಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ಉಮಾ ಪ್ರಶಾಂತ್ ಅವರ ಮಾರ್ಗದರ್ಶನದಂತೆ ಕಳೆದ ಮೂರು ದಿನಗಳಿಂದ ವಾಹನ ಸವಾರರಿಗೆ ಹೆಲ್ಮೆಟ್ ಬಗ್ಗೆ ಅರಿವು ಮೂಡಿಸುವ ಕೆಲಸ ನಡೆಯುತ್ತಿದೆ. 5 ಸಾವಿರಕ್ಕೂ ಹೆಚ್ಚು ಹಾಫ್ ಹೆಲ್ಮೆಟ್ ವಶಪಡಿಸಿಕೊಳ್ಳಲಾಗಿದೆ. ಇನ್ನೂ ಎರಡು ದಿನ ಈ ಜಾಗೃತಿ ಕಾರ್ಯಕ್ರಮ ಮುಂದುವರಿಯಲಿದೆ. ಅದಾದ ನಂತರ ದಂಡ ವಿಧಿಸಲಾಗುವುದು ಎಂದು ಅವರು ಎಚ್ಚರಿಸಿದರು.

ಜಾಗೃತಿ ಅಭಿಯಾನದ (5ನೇ ಪುಟಕ್ಕೆ)

# ಪಕ್ಷ ಸಂಘಟನೆಗೆ ಬಡ್ತಿ

## ಕಾಂಗ್ರೆಸ್ ಕಾರ್ಯಕರ್ತರಿಗೆ ಗಿಫ್ಟ್ ಕೊಡಲು ನಿರ್ಧಾರ

ಬೆಂಗಳೂರು, ಫೆ-24- ಸ್ಥಳೀಯ ಸಂಸ್ಥೆಗಳ ಚುನಾವಣೆ ಎದುರಾಗುತ್ತಿರುವ ಹಿನ್ನೆಲೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರಿಗೆ ಭರ್ಜರಿ ಉಡುಗೊರೆ ನೀಡಲು ಸರ್ಕಾರ ಮುಂದಾಗಿದೆ.

ಪಕ್ಷ ಸಂಘಟನೆಗಾಗಿ ದುಡಿದ ಸಾವಿರಾರು ಕಾರ್ಯಕರ್ತರನ್ನು ವಿವಿಧ ನಿಗಮ-ಮಂಡಳಿ ಹಾಗೂ ಪ್ರಾಧಿಕಾರಗಳಲ್ಲಿ ಸದಸ್ಯರನ್ನಾಗಿ ನೇಮಕ ಮಾಡಲಿದೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಒಂದೆಡೆ ಸರ್ಕಾರಿ ನೇಮಕಾತಿ ಜೊತೆಗೆ ಮತ್ತೊಂದೆಡೆ ಪಕ್ಷ ಸಂಘಟನೆಯಲ್ಲೂ ಬಡ್ತಿ ನೀಡಲಾಗುವುದು ಎಂದರು.

ಯಾರಿಗೆ ಯಾವ ಅಧಿಕಾರ ನೀಡಬೇಕೆಂಬ ಬಗ್ಗೆ ಗೃಹ ಸಚಿವ ಡಾ.ಜಿ.ಪರಮೇಶ್ವರ್, ನಮ್ಮ ಪಕ್ಷದ ಶಾಸಕರು ಮತ್ತು ಸೋತ ಅಭ್ಯರ್ಥಿಗಳಿಂದ ಮಾಹಿತಿ ಪಡೆದು ಪಟ್ಟಿ ಸಿದ್ಧಪಡಿಸಿದ್ದಾರೆ.

ಆ ಪಟ್ಟಿ ಜೊತೆಗೆ ಇನ್ನೂ ಕೆಲವು ಸರ್ಕಾರದ ಸಲಹಾ ಸಮಿತಿಗಳಿಗೂ ಕಾರ್ಯಕರ್ತರನ್ನು ಸದಸ್ಯರನ್ನಾಗಿ ನೇಮಕ ಮಾಡಲಾಗುವುದು.

ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೊತೆ ಚರ್ಚೆ ಮಾಡಿ, ವಾರ ಇಲ್ಲವೇ, 10 ದಿನಗಳ ಕಾರ್ಯಕರ್ತರಿಗೆ ಅಧಿಕಾರ ನೀಡಲಾಗುವುದು ಎಂದರು.

ಕರ್ನಾಟಕದಲ್ಲಿ ಮತ್ತೆ 2028ರಲ್ಲೂ ಪಕ್ಷವನ್ನು ಅಧಿಕಾರಕ್ಕೆ ತರುವ ಹಿನ್ನೆಲೆಯಲ್ಲಿ ನಾವು ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ.

ನನಗೆ ನಾಯಕತ್ವ ಇರಲಿ, ಬಿಡಲಿ, ಚುನಾವಣೆಯ ಮುಂಚೂಣಿಯಲ್ಲಿ ನಿಂತು ಪಕ್ಷಕ್ಕಾಗಿ ಹೋರಾಡಿ ಅಧಿಕಾರಕ್ಕೆ ತರುತ್ತೇನೆ.

> **ಯಾರಿಗೆ ಯಾವ ಅಧಿಕಾರ ನೀಡಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೊತೆ ಚರ್ಚೆ ಮಾಡಿ, ವಾರ ಇಲ್ಲವೆ, 10 ದಿನದಲ್ಲಿ ಕಾರ್ಯಕರ್ತರಿಗೆ ಅಧಿಕಾರ ನೀಡಲಾಗುವುದು .**
> **- ಡಿ.ಕೆ. ಶಿವಕುಮಾರ್**

ಚುನಾವಣಾ ಪೂರ್ವಭಾವಿ ಸಿದ್ಧತೆಗಾಗಿಯೇ ಇಂದು, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪರಾಭವಗೊಂಡ ಪಕ್ಷದ ಅಭ್ಯರ್ಥಿಗಳೊಂದಿಗೆ ಚರ್ಚೆ ಮಾಡಿದ್ದೇನೆ.

86 ಕ್ಷೇತ್ರಗಳಲ್ಲಿ ನಾವು ಪರಾಭವ ಗೊಂಡಿದ್ದೇವೆ, ಅದರಲ್ಲಿ 60 ಕ್ಷೇತ್ರಗಳಲ್ಲಿ ನಮಗೆ ಗೆಲ್ಲುವ ಅವಕಾಶವಿದೆ, ಇಂತಹ ಕಡೆಗಳಲ್ಲಿ ಗೆಲ್ಲಲು ಏನು ಮಾಡಬೇಕು ಎಂಬುದನ್ನು ಇಂದಿನ ಸಭೆಯಲ್ಲಿ ತಿಳಿಸಿದ್ದೇನೆ.

ಇಂದಿನಿಂದ ಒಂದು ವಾರಗಳ ಕಾಲ ಸಿದ್ದರಾಮಯ್ಯ ಸಂಪುಟದ ಎಲ್ಲಾ ಸಚಿವರು, ತಮಗೆ ವಹಿಸಿರುವ ಉಸ್ತುವಾರಿ ಜಿಲ್ಲೆಯಲ್ಲಿನ ಪ್ರತಿ ವಿಧಾನಸಭಾ ಕ್ಷೇತ್ರದಲ್ಲೂ ಕಾರ್ಯಕರ್ತರ ಜೊತೆ ನೇರ ಸಂವಾದ ಮಾಡಬೇಕು.

ಸಂವಾದ ನಡೆಸುವುದಷ್ಟೇ ಅಲ್ಲ, ಅವರ ಸಮಸ್ಯೆಗಳನ್ನು ಆಲಿಸಿ, ಸ್ಥಳದಲ್ಲೇ ಪರಿಹರಿಸಬೇಕು. ಅಲ್ಲದೆ, ಆಯಾ ವಿಧಾನಸಭಾ (2ನೇ ಪುಟಕ್ಕೆ)

## ಪಿಎಂ ಕಿಸಾನ್ ಯೋಜನೆಯ 22 ಸಾವಿರ ಕೋಟಿ ಬಿಡುಗಡೆ

ನವದೆಹಲಿ, ಫೆ. 24 - ಪಿಎಂ ಕಿಸಾನ್ ಯೋಜನೆಯ ಅನ್ವಯ 9.8 ಕೋಟಿ ರೈತರ ಬ್ಯಾಂಕ್ ಖಾತೆಗಳಿಗೆ 22,000 ಕೋಟಿ ರೂ.ಗಳನ್ನು ಜಮಾ ಮಾಡಲಾಗಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಪಿಎಂ ಕಿಸಾನ್ ಸಮ್ಮಾನ್ ನಿಧಿ ಯೋಜನೆಯ 19ನೇ ಕಂತನ್ನು ಸೋಮವಾರ ಬಿಡುಗಡೆ ಮಾಡಿದ್ದಾರೆ. ಈ ಯೋಜನೆಯ ಅನ್ವಯ ರೈತರ ಖಾತೆಗಳಿಗೆ ವರ್ಷಕ್ಕೆ 6 ಸಾವಿರ ರೂ.ಗಳನ್ನು ಮೂರು ಕಂತುಗಳಲ್ಲಿ ಜಮಾ ಮಾಡಲಾಗುತ್ತದೆ.

## ಇಂಟರ್‌ನೆಟ್ ಬೆಲೆ ನಿಯಂತ್ರಣ ಅರ್ಜಿಗೆ ಸುಪ್ರೀಂ ಕೋರ್ಟ್ ನಕಾರ

ನವದೆಹಲಿ, ಫೆ. 24 - ಇಂಟರ್‌ನೆಟ್ ಬೆಲೆ ನಿಯಂತ್ರಿಸಬೇಕು ಎಂದು ದಾಖಲಾಗಿದ್ದ ಅರ್ಜಿ ತಳ್ಳಿ ಹಾಕಿರುವ ಸುಪ್ರೀಂ ಕೋರ್ಟ್, ಇದು ಮುಕ್ತ ಮಾರುಕಟ್ಟೆಗೆ ಬಿಟ್ಟ ವಿಷಯ ಎಂದು ತಿಳಿಸಿದೆ.

ರಜತ್ ಎಂಬುವವರು ದಾಖಲಿಸಿದ್ದ ಅರ್ಜಿಯನ್ನು ತಳ್ಳಿ ಹಾಕಿರುವ ಮುಖ್ಯ ನ್ಯಾಯ ಮೂರ್ತಿ ಸಂಜೀವ್ ಖನ್ನ ಹಾಗೂ ನ್ಯಾಯಮೂರ್ತಿ ಸಂಜಯ್ ಕುಮಾರ್ ಅವರನ್ನು ಒಳಗೊಂಡ ಪೀಠ, ಇಂಟರ್‌ನೆಟ್ ಸೇವೆಗೆ ಸಂಬಂಧಿಸಿದಂತೆ ಗ್ರಾಹಕರಿಗೆ ಹಲವು ಆಯ್ಕೆಗಳು ಲಭ್ಯವಿವೆ ಎಂದು ತಿಳಿಸಿದೆ. ಇದು ಮುಕ್ತ ಮಾರುಕಟ್ಟೆಯಾಗಿದೆ ಆಗಿದೆ. ಇಲ್ಲಿ ಹಲವು ಆಯ್ಕೆಗಳಿವೆ. ಬಿಎಸ್‌ಎನ್‌ಎಲ್ ಹಾಗೂ ಎಂಟಿಎನ್‌ಎಲ್ ಸಹ ನಿಮಗೆ ಇಂಟರ್‌ನೆಟ್ ಸೇವೆ ನೀಡುತ್ತಿವೆ ಎಂದು ಪೀಠ ಹೇಳಿದೆ.

ಬಹುತೇಕ ಇಂಟರ್‌ನೆಟ್ ಮಾರುಕಟ್ಟೆಯನ್ನು ಜಿಯೋ ಮತ್ತು ರಿಲಯನ್ಸ್ ನಿಯಂತ್ರಿಸುತ್ತಿವೆ ಎಂದು ಅರ್ಜಿದಾರರು ಹೇಳಿದ್ದರು.

ನೀವು ಕೂಟ ವರ್ತನೆಯನ್ನು ವಿರೋಧಿಸುತ್ತಿದ್ದರೆ ಭಾರತೀಯ ಸ್ಪರ್ಧಾ ಆಯೋಗದ ಬಳಿ ಮನವಿ ಸಲ್ಲಿಸಿ ಎಂದು ಪೀಠ ಹೇಳಿದೆ.

# ಬಸವತತ್ವ ಪ್ರಚಾರಕ್ಕೆ 500 ಕೋಟಿ ರೂ. ಅನುದಾನ

## ಲಿಂಗಾಯತ ಮಠಾಧೀಶರುಗಳಿಂದ ಮುಖ್ಯಮಂತ್ರಿ ಸಿದ್ಧರಾಮಯ್ಯಗೆ ಮನವಿ

ಬೆಂಗಳೂರು, ಫೆ. 24- ಸಾಮಾಜಿಕ ಕ್ರಾಂತಿಕಾರಿ ಬಸವೇಶ್ವರರ ತತ್ವ, ವಚನ ಸಂಸ್ಕೃತಿ, ಶರಣರ ಹೋರಾಟ ಕುರಿತು ಜನಮಾನಸಕ್ಕೆ ತಲುಪಿಸುವ ಸಂಬಂಧ ಸ್ವಾಮೀಜಿಗಳ ಬೇಡಿಕೆಗಳಲ್ಲಿ ಸಾಧ್ಯವಿರುವ ಯೋಜನೆಗಳನ್ನು ಹಂತ ಹಂತವಾಗಿ ಈಡೇರಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಭರವಸೆ ನೀಡಿದ್ದಾರೆ.



ಅಧಿಕೃತ ನಿವಾಸ ಕಾವೇರಿಯಲ್ಲಿ ತಮ್ಮನ್ನು ಭೇಟಿ ಮಾಡಿ, ಬೇಡಿಕೆಗಳ ಮನವಿ ಪತ್ರ ಸಲ್ಲಿಸಿದ ಲಿಂಗಾಯತ ಸಮುದಾಯದ ಸ್ವಾಮೀಜಿಗಳು, ಸಚಿವರು, ಶಾಸಕರು ಹಾಗೂ ಸಮಾಜದ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಎಂಬುದಾಗಿ ಘೋಷಿಸಿದ್ದು ಕಾಂಗ್ರೆಸ್ ಸರ್ಕಾರ ಎಂದು ಪ್ರತಿಪಾದಿಸಿದರು.

ತಾವು ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿ ಬಸವ ಜಯಂತಿಯಂದೇ ಪ್ರಮಾಣ ವಚನ ಸ್ವೀಕರಿಸಿದ್ದು, ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣನವರ ಭಾವಚಿತ್ರ ಕಡ್ಡಾಯಗೊಳಿಸಿದ್ದು ಕಾಂಗ್ರೆಸ್ ಸರ್ಕಾರ. ಬಸವಣ್ಣನವರ ವಿಚಾರ ಮತ್ತು ಹೋರಾಟ ಜಾತ್ಯತೀತ ಸಮಾಜ ನಿರ್ಮಾಣಕ್ಕೆ ಪೂರಕ, ಜಾತಿವಾದಿ ಪಟ್ಟಭದ್ರರಿಗೆ ಬಸವಣ್ಣನವರ ವಿಚಾರಗಳು ಹಿಡಿಸಲ್ಲ, ಪಟ್ಟಭದ್ರರು ಬಹಿರಂಗವಾಗಿ ಬಸವಣ್ಣನನ್ನು ವಿರೋಧಿಸಲು ಸಾಧ್ಯವಿಲ್ಲ, ಅದಕ್ಕೇ ಆಂತರಿಕವಾಗಿ ವಿರೋಧಿಸುತ್ತಿದ್ದಾರೆ.

ಜಾತಿ ವ್ಯವಸ್ಥೆ ಬಹಳ ಗಟ್ಟಿಯಾಗಿ ಬೇರೂರಿದೆ, ಇದಕ್ಕೆ ಪಟ್ಟಭದ್ರರು ನೀರು ಗೊಬ್ಬರ ಹಾಕುತ್ತಿದ್ದಾರೆ, ಜಾತ್ಯತೀತ, ಸಮಸಮಾಜ ನಿರ್ಮಾಣ ಮಾಡಲು (4ನೇ ಪುಟಕ್ಕೆ)

# ಅಕ್ರಮ-ಸಕ್ರಮ ಪ್ರೀತಿಗಲ್ಲ; ಖಾಲಿ ಖಜಾನೆ ಭರ್ತಿಗೆ

## ಕಂದಾಯ ಭೂಮಿ ನಿವೇಶನಗಳನ್ನೂ ಸಕ್ರಮಗೊಳಿಸಲು ಹೊರಟ ಸಿಎಂ: ಕುಮಾರಸ್ವಾಮಿ ಟೀಕೆ

ಬೆಂಗಳೂರು,ಫೆ.24- ಬರಿದಾಗಿರುವ ಖಜಾನೆ ತುಂಬಿಕೊಳ್ಳಲು ದಾಖಲೆಗಳಿಲ್ಲದೆ ಕಂದಾಯ ಭೂಮಿಯಲ್ಲಿ ನಿರ್ಮಾಣಗೊಂಡಿರುವ ನಿವೇಶನ ಮತ್ತು ಮನೆಗಳನ್ನು ಸಕ್ರಮಗೊಳಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹೊರಟಿದ್ದಾರೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಟೀಕಿಸಿದ್ದಾರೆ.

ಜನರ ಪ್ರೀತಿಯಿಂದ ಅಕ್ರಮ-ಸಕ್ರಮ ಮಾಡುತ್ತಿಲ್ಲ, ಸರ್ಕಾರದ ಆರ್ಥಿಕ ಸಂಕಷ್ಟ ಬಗೆಹರಿಸಿಕೊಳ್ಳಲು ಈ ಕೆಲಸಕ್ಕೆ ಕೈಹಾಕಿದ್ದಾರೆ. ಕಾನೂನಿನ ತೊಡಕುಗಳಿವೆ, ನ್ಯಾಯಾಲಯದಲ್ಲಿ ಕೆಲವು ಪ್ರಕರಣಗಳು ಇತ್ಯರ್ಥವಾಗಿಲ್ಲ, ಇದ್ಯಾವುದನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದೆ, ಮೂರು ತಿಂಗಳೊಳಗೆ ಅಕ್ರಮ ಮನೆ, ನಿವೇಶನಗಳಿಗೆ 'ಬಿ' ಖಾತಾ ನೀಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಜಿಲ್ಲಾಡಳಿತಗಳಿಗೆ ಆದೇಶ ನೀಡಿದ್ದಾರೆ.

ಸರ್ಕಾರದ ಈ ನಿರ್ಧಾರದಿಂದ ಬೊಕ್ಕಸಕ್ಕೆ ಒಮ್ಮೆಲೇ ಸಾವಿರಾರು ಕೋಟಿ ರೂ. ಸಂಗ್ರಹವಾಗಲಿದೆ, ಈ ಹಣದ ಬಹುಪಾಲು, ಸರ್ಕಾರ ಪಡೆದಿರುವ ಸಾಲದ ಮೇಲಿನ ಬಡ್ಡಿ ಕಟ್ಟಲು ಬಳಕೆ ಆಗಲಿದೆ.

ಅಧಿಕಾರಕ್ಕೆ ಬರಬೇಕೆಂಬ ಒಂದೇ ಉದ್ದೇಶದಿಂದ ಗ್ಯಾರಂಟಿ ಯೋಜನೆಗಳನ್ನು ಘೋಷಿಸಿ, ಅನುಷ್ಠಾನಕ್ಕೆ ತಂದರಾದರೂ, ಅನುಷ್ಠಾನಗೊಂಡ ಯೋಜನೆಗಳಿಗೆ ಹಣ ನೀಡಿದೇ ಇಲಾಖೆಗಳು ಆರ್ಥಿಕ ಮುಗ್ಗಟ್ಟಿನಿಂದ ನರಳುತ್ತಿವೆ.

ಕೆಲವು ಸಂಸ್ಥೆಗಳು ಮುಚ್ಚುವ ಪರಿಸ್ಥಿತಿ ಎದುರಾಗಿದೆ, ಗೃಹ ಜ್ಯೋತಿ ಯೋಜನೆ ಅನುಷ್ಠಾನ ನಂತರ ಇಂಧನ ಇಲಾಖೆಗೆ 60,000 ಕೋಟಿ ರೂ. ಬಾಕಿ ಇದೆ.

ಗೃಹಲಕ್ಷ್ಮಿ ಹಾಗೂ ಅನ್ನಭಾಗ್ಯ ಫಲಾನುಭವಿಗಳಿಗೂ ತಿಂಗಳುಗಟ್ಟಲೇ ಹಣ ಬಾಕಿ ಉಳಿಸಿಕೊಂಡಿದ್ದಾರೆ.

ಸಂಪನ್ಮೂಲ ಕ್ರೋಢೀಕರಣ ಮಾಡದೇ, ಇರುವ ಹಣವನ್ನೆಲ್ಲಾ ಗ್ಯಾರಂಟಿಗೆ ನೀಡಿ ರಾಜ್ಯದ (4ನೇ ಪುಟಕ್ಕೆ)

## ದಾರಿ ತಪ್ಪಿಸುವ ಜಾಹೀರಾತು ವಿರುದ್ಧ ದೂರಿನ ವ್ಯವಸ್ಥೆ ಬೇಕಿದೆ: ಸುಪ್ರೀಂ

ನವದೆಹಲಿ, ಫೆ. 24 - ದಾರಿ ತಪ್ಪಿಸುವ ಜಾಹೀರಾತುಗಳ ವಿರುದ್ಧ ನಾಗರಿಕರು ದೂರು ಸಲ್ಲಿಸುವ ವ್ಯವಸ್ಥೆ ರೂಪಿಸಬೇಕಿದೆ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯ ಪಟ್ಟಿದೆ.

1954ರ ಔಷಧ ಹಾಗೂ ಮಾಂತ್ರಿಕ ಪರಿಹಾರಗಳ (ಆಕ್ಷೇಪಾರ್ಹ ಜಾಹೀರಾತು) ಕಾಯ್ದೆ ಈ ದಿಸೆಯಲ್ಲಿ ಪ್ರಮುಖವಾಗಿದೆ ಎಂದು ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕ ಹಾಗೂ ಉಜ್ಜಲ್ ಭುಯಾನ್ ಅವರನ್ನು ಒಳಗೊಂಡ ಪೀಠ ಹೇಳಿದೆ.

> **ತಿಂಗಳ ಒಳಗೆ ತಪ್ಪು ಜಾಹೀರಾತು ಬಗ್ಗೆ ಕ್ರಮ ತೆಗೆದುಕೊಂಡ ವರದಿ ಸಲ್ಲಿಸಲು ಕರ್ನಾಟಕಕ್ಕೆ ಸುಪ್ರೀಂ ಕೋರ್ಟ್ ಸೂಚನೆ**

ದಾರಿ ತಪ್ಪಿಸುವ ಜಾಹೀರಾತುಗಳ ವಿರುದ್ಧ ದೂರು ಸಲ್ಲಿಸುವ ಸಲ್ಲಿಸಲು ಬಯಸುವ ನಾಗರಿಕರಿಗೆ ವ್ಯವಸ್ಥೆಯನ್ನು ರೂಪಿಸಬೇಕಿದೆ. ಈ ವಿಷಯವನ್ನು ಮಾರ್ಚ್ 7ರಂದು ಪರಿಗಣಿಸಲಾಗುವುದು ಎಂದು ಪೀಠ ಹೇಳಿದೆ.

ಔಷಧ ಮತ್ತು ಪ್ರಸಾದನ ನಿಯಮಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳು ತೆಗೆದುಕೊಂಡ ಕ್ರಮಗಳ (2ನೇ ಪುಟಕ್ಕೆ)

## ಬೊಜ್ಜು ವಿರುದ್ಧ ಹೋರಾಟಕ್ಕೆ ಸುಧಾ ಮೂರ್ತಿ ನೇಮಿಸಿದ ಪ್ರಧಾನಿ



ನವದೆಹಲಿ, ಫೆ. 24 - ಬೊಜ್ಜು ವಿರುದ್ಧ ಹೋರಾಟದ ಅಭಿಯಾನಕ್ಕೆ ದಾನಿ ಹಾಗೂ ಸಂಸದೆ ಸುಧಾ ಮೂರ್ತಿ ಸೇರಿದಂತೆ 10 ಜನರನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ನೇಮಿಸಿದ್ದಾರೆ.

ಮನ್ ಕಿ ಬಾತ್ ರೇಡಿಯೋ ಮಾಸಿಕ ಕಾರ್ಯಕ್ರಮದಲ್ಲಿ ಬೊಜ್ಜು ವಿರುದ್ಧ ಹೋರಾಟಕ್ಕೆ ಪ್ರಧಾನಿ ಕರೆ ನೀಡಿದ್ದರು. ಅದರ ಅನ್ವಯ ಬೊಜ್ಜಿನ ವಿರುದ್ಧ ಹೋರಾಟ ಹಾಗೂ ಅರಿವು ಮೂಡಿಸಲು ಸಮಾಜದ ವಿವಿಧ ವಲಯಗಳ ಹತ್ತು ಗಣ್ಯರನ್ನು ಪ್ರಧಾನಿ ನೇಮಿಸಿದ್ದಾರೆ.

ಆಹಾರದಲ್ಲಿ ಖಾದ್ಯ ತೈಲ ಬಳಕೆ ಕಡಿಮೆ ಮಾಡುವ ಬಗ್ಗೆ ಅರಿವು ಮೂಡಿಸಲು ಇವರು ಹೋರಾಟ ನಡೆಸಬೇಕು ಎಂದು ಮನವಿ ಮಾಡಿಕೊಳ್ಳುವುದಾಗಿ ಪ್ರಧಾನಿ ಹೇಳಿದ್ದಾರೆ.

ಈ ರೀತಿ ನೇಮಕಗೊಂಡವರಲ್ಲಿ ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿ ಓಮರ್ ಅಬ್ದುಲ್ಲಾ, ಉದ್ಯಮಿ ಆನಂದ್ ಮಹೀಂದ್ರ ಹಾಗೂ (4ನೇ ಪುಟಕ್ಕೆ)

# ಮಹಾಕುಂಭ ಮೇಳ : ಪ್ರಯಾಗ್‌ರಾಜ್ ವಿಮಾನ ನಿಲ್ದಾಣದಲ್ಲಿ ಹೊಸ ದಾಖಲೆಗಳು

## ಸಾಮಾನ್ಯ ದಿನಕ್ಕಿಂತ ಏಳು ಪಟ್ಟು ಹೆಚ್ಚು ವಿಮಾನಗಳ ಆಗಮನ, ದಶಕಗಳ ನಂತರ ಅಂತರರಾಷ್ಟ್ರೀಯ ವಿಮಾನಯಾನ ಸೇವೆ

ಪ್ರಯಾಗ್‌ರಾಜ್, ಫೆ. 24 – ಮಹಾಕುಂಭ ಮೇಳದ ಹಿನ್ನೆಲೆಯಲ್ಲಿ ಪ್ರಯಾಗ್‌ರಾಜ್ ವಿಮಾನ ನಿಲ್ದಾಣದಲ್ಲಿ ಬರುವ ವಿಮಾನಗಳು ಹಾಗೂ ಆಗಮಿಸುವ ಪ್ರಯಾಣಿಕರಿಂದ ಹೊಸ ದಾಖಲೆಗಳು ಸೃಷ್ಟಿಯಾಗುತ್ತಿವೆ.

ಕುಂಭಮೇಳಕ್ಕೆ ತೆರಳಲು ಪ್ರಯಾಗ್‌ರಾಜ್ ವಿಮಾನ ನಿಲ್ದಾಣ ಬಳಸಲಾಗುತ್ತದೆ. ಸಾಮಾನ್ಯ ದಿನಗಳಲ್ಲಿ ಈ ವಿಮಾನ ನಿಲ್ದಾಣಕ್ಕೆ 20ರಷ್ಟು ವಿಮಾನಗಳು ಬರುತ್ತಿದ್ದವು. ಈಗ ಸರಾಸರಿ 148 ವಿಮಾನಗಳು ಬರುತ್ತಿವೆ.

ಅಷ್ಟೇ ಅಲ್ಲದೆ ರಾಜಕೀಯ ಗಣ್ಯರು, ಉದ್ಯಮಿಗಳು ಹಾಗೂ ಪ್ರಸಿದ್ಧ ವ್ಯಕ್ತಿಗಳು ಬಳಸುವ ಖಾಸಗಿ ವಿಮಾನಗಳ ಸಂಖ್ಯೆ ದಿನಕ್ಕೆ ಸರಾಸರಿ 40ರಷ್ಟಿದೆ. ವಾರಾಂತ್ಯಕ್ಕೆ ಈ ವಿಮಾನಗಳ ಸಂಖ್ಯೆ 70ಕ್ಕೆ ತಲುಪುತ್ತಿದೆ.

ಕುಂಭಮೇಳ ಆರಂಭವಾದ ನಂತರ ವಿಮಾನ ನಿಲ್ದಾಣಕ್ಕೆ ಬಂದಿಳಿಯುವ ಹಾಗೂ ತೆರಳುವ ವಿಮಾನಗಳ ಸಂಖ್ಯೆ ಪ್ರತಿದಿನ ಹೊಸ ದಾಖಲೆಗಳನ್ನು ಬರೆಯುತ್ತಿದೆ ಎಂದು ವಿಮಾನ ನಿಲ್ದಾಣ ಪ್ರಾಧಿಕಾರದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಳೆದ ಫೆಬ್ರವರಿ 21ರಂದು ಒಂದೇ ದಿನದಲ್ಲಿ 236 ವಿಮಾನಗಳು ಆಗಮಿಸಿದ್ದವು ಹಾಗೂ ತೆರಳಿದ್ದವು. ಒಟ್ಟು 24,512 ಪ್ರಯಾಣಿಕರು ಆ ದಿನ ಆಗಮಿಸಿದ್ದರು. ಇದು ಹೊಸ ದಾಖಲೆಯಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಸಾಮಾನ್ಯ ದಿನಗಳಲ್ಲಿ ಈ ವಿಮಾನ ನಿಲ್ದಾಣದಲ್ಲಿ 20 ವಿಮಾನಗಳು ಆಗಮಿಸುತ್ತವೆ ಹಾಗೂ ಪ್ರಯಾಣಿಕರ ಸಂಖ್ಯೆ ಸಾವಿರಕ್ಕೂ ಕಡಿಮೆ ಇರುತ್ತದೆ ಎಂದವರು ಹೇಳಿದ್ದಾರೆ.

ಜನವರಿ 29ರ ಮೌನಿ ಅಮಾವಾಸ್ಯೆ ನಂತರ ಶೆಡ್ಯೂಲ್ಡ್ ಹಾಗೂ ನಾನ್ ಶೆಡ್ಯೂಲ್ಡ್ ವಿಮಾನಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದೆ. ನಮ್ಮ ನಿರೀಕ್ಷೆಗೂ ಮೀರಿ ಹೆಚ್ಚು ಜನಸಂದಣಿ ಕಂಡುಬರುತ್ತಿದೆ. ವಿಮಾನ ನಿಲ್ದಾಣದ ಕಾರ್ಯಾಚರಣೆ ಸವಾಲಿನದ್ದಾಗಿ ಪರಿಣಮಿಸಿದೆ ಎಂದು ಪ್ರಯಾಗ್‌ರಾಜ್ ವಿಮಾನ ನಿಲ್ದಾಣದ ನಿರ್ದೇಶಕ ಮುಕೇಶ್ ಚಂದ್ರ ಉಪಾಧ್ಯಾಯ್ ತಿಳಿಸಿದ್ದಾರೆ.




ರಾಷ್ಟ್ರಪತಿ ದ್ರೌಪದಿ ಮುರ್ಮು ಹಾಗೂ ಪ್ರಧಾನ ಮಂತ್ರಿ ನರೇಂದ್ರ ಮೋದಿ ಸೇರಿದಂತೆ ಹಲವು ಗಣ್ಯರು ಇಲ್ಲಿಗೆ ಆಗಮಿಸಿದ್ದಾರೆ. ರಾಜ್ಯಪಾಲರು, ಮುಖ್ಯಮಂತ್ರಿಗಳು, ಸಂಸದರು ಶಾಸಕರು, ಉದ್ಯಮದ ನಾಯಕರು, ಅಂತರರಾಷ್ಟ್ರೀಯ ನಿಯೋಗಿಗಳು, ಅಧಿಕಾರಿಗಳು ಹಾಗೂ ಸಮಾಜದ ವಿವಿಧ ವಲಯದ ತಾರೆಯರು ಕುಂಭಮೇಳಕ್ಕೆ ವಿಮಾನಗಳ ಮೂಲಕ ಆಗಮಿಸುತ್ತಾರೆ. ಬಹುತೇಕರು ಚಾರ್ಟರ್ಡ್ ಹಾಗೂ ಖಾಸಗಿ ವಿಮಾನಗಳನ್ನು ಬಳಸಿದ್ದಾರೆ ಎಂದು ಉಪಾಧ್ಯಾಯ್ ಹೇಳಿದ್ದಾರೆ.

ಪ್ರಸಕ್ತ ರಾಜಸ್ಥಾನದ 180 ರಾಜಕಾರಣಿಗಳನ್ನು ಒಳಗೊಂಡ ಚಾರ್ಟರ್ಡ್ ವಿಮಾನಗಳು ಆಗಮಿಸುತ್ತಿವೆ ಎಂದವರು ಹೇಳಿದ್ದಾರೆ.

ಉದ್ಯಮಿ ಸಹೋದರರಾದ ಮುಕೇಶ್ ಹಾಗೂ ಅನಿಲ್ ಅಂಬಾನಿ, ಹೀರೋ ಮೋಟಾರ್ ಕಾರ್ಪ್ ಅಧ್ಯಕ್ಷ ಪವನ್ ಮುಂಜಲ್, ವೇದಾಂತ ಸಮೂಹದ ಅಧ್ಯಕ್ಷ ಅನಿಲ್ ಅಗರ್ವಾಲ್ ಸೇರಿದಂತೆ ಉದ್ಯಮ ವಲಯದ ಹಲವು ಗಣ್ಯರು ಕುಂಭಮೇಳಕ್ಕೆ ಆಗಮಿಸಿದ್ದಾರೆ.

ವಿಮಾನ ನಿಲ್ದಾಣವನ್ನು ಭಾರತೀಯ ವಾಯುಪಡೆ ಹಾಗೂ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ ಜಂಟಿಯಾಗಿ ನಿರ್ವಹಿಸುತ್ತಿವೆ. 1931 ರಲ್ಲಿ ಇಲ್ಲಿನ ವಿಮಾನ ನಿಲ್ದಾಣದ ಕಾಮಗಾರಿ ಪೂರ್ಣಗೊಂಡಿತ್ತು. 2019ರಲ್ಲಿ ನಡೆದ ಕುಂಭಮೇಳಕ್ಕೆ ಮುಂಚೆ ವಿಮಾನ ನಿಲ್ದಾಣವನ್ನು ಉನ್ನತೀಕರಿಸಲಾಗಿತ್ತು. ಈ ವಿಮಾನ ನಿಲ್ದಾಣದಲ್ಲಿ ರಾತ್ರಿ ವೇಳೆ ವಿಮಾನ ಸೇವೆಗೆ ವ್ಯವಸ್ಥೆ ಕಲ್ಪಿಸಲಾಗಿದೆ.

ಸೂರ್ಯ ಮುಳುಗಿದ ನಂತರ ಇಲ್ಲಿ ಏಳರಿಂದ ಎಂಟು ವಿಮಾನಗಳು ಕಾರ್ಯನಿರ್ವಹಿಸುತ್ತವೆ ಎಂದು ಉಪಾಧ್ಯಾಯ್ ಹೇಳಿದ್ದಾರೆ.

2019ರ ಕುಂಭಮೇಳದ ಸಮಯದಲ್ಲಿ ಒಂದು ಲಕ್ಷಕ್ಕೂ ಕಡಿಮೆ ಪ್ರಯಾಣಿಕರು ಈ ವಿಮಾನ ನಿಲ್ದಾಣ ಬಳಸಿಕೊಂಡಿದ್ದರು. ಪ್ರಸಕ್ತ ಕುಂಭಮೇಳದಲ್ಲಿ ಪ್ರಯಾಣಿಕರ ಸಂಖ್ಯೆ ಈಗಾಗಲೇ 3 ಲಕ್ಷ ದಾಟಿದೆ. ಫೆಬ್ರವರಿ 26ರ ಶಿವರಾತ್ರಿ ದಿನದಂದು ಕುಂಭಮೇಳಕ್ಕೆ ತೆರೆ ಬೀಳಲಿದೆ. ಈ ಹಿನ್ನೆಲೆಯಲ್ಲಿ ಕೊನೆಯ ದಿನಗಳಲ್ಲಿ ಪ್ರಯಾಣಿಕರ ಸಂಖ್ಯೆ ಇನ್ನಷ್ಟು ಹೆಚ್ಚಾಗುವ ನಿರೀಕ್ಷೆ ಇದೆ.

ಈ ಬಾರಿಯ ಕುಂಭಮೇಳದಲ್ಲಿ ಅಂತರರಾಷ್ಟ್ರೀಯ ಚಾರ್ಟರ್ಡ್ ವಿಮಾನ ಬಂದಿಳಿದಿದ್ದು ಮತ್ತೊಂದು ಮೈಲಿಗಲ್ಲಾಗಿದೆ. ಆಪಲ್ ಕಂಪನಿಯ ಸಹಸ್ಥಾಪಕ (4ನೇ ಪುಟಕ್ಕೆ)

# ಮೈಸೂರು ಪ್ರಜಾಪ್ರತಿನಿಧಿ ಸದಸ್ಯರಾಗಿದ್ದ ಡಿ.ಜಿ. ಶಂಕರಪ್ಪಗೌಡರ ಫೋಟೋ



ಅದು ಸ್ವಾತಂತ್ರ್ಯ ಪೂರ್ವದ ಸಮಯ. ಭಾರತ ಅಂದರೆ ಏಕೀಕೃತ ಹಿಂದೂ ಸ್ಥಾನ ದೇಶದ ಮೈಸೂರು ರಾಜ್ಯ. ಅಂದರೆ ಹಿಂದಿನ ಮೈಸೂರು ಸಂಸ್ಥಾನವು ಮೈಸೂರಿನ ಯದುವಂಶದ ಅರಸರ ಅಂದರೆ ಮೈಸೂರು ಒಡೆಯರ ಒಡೆತನದಲ್ಲಿತ್ತು.

ಮೈಸೂರು ಒಡೆಯರ ಆಳ್ವಿಕೆಯ ಮೈಸೂರು ಸಂಸ್ಥಾನದಲ್ಲಿ ಪ್ರಜಾಪ್ರತಿನಿಧಿ ಸದನಕ್ಕೆ ಜನರು ತಮ್ಮ ತಮ್ಮ ತಾಲ್ಲೂಕಿನಿಂದ ಜನಪ್ರತಿನಿಧಿ ಗಳನ್ನು ಆಯ್ಕೆ ಮಾಡಿ ಕಳಿಸುವ ಪದ್ಧತಿ ಇತ್ತು. ಮೈಸೂರು ಪ್ರಜಾಪ್ರತಿನಿಧಿ ಸದನದ ಸದಸ್ಯರು ಎಂದು ಕರೆಯ ಲಾಗುತ್ತಿತ್ತು. ಇಂದಿನ ಕರ್ನಾಟಕ ವಿಧಾನಮಂಡಲದ ಕೆಳ ಸದನವಾದ ವಿಧಾನಸಭೆಯ ಸದಸ್ಯರಂತೆ ಅವರು ಸಾರ್ವಜನಿಕ ಸೇವೆಯ ಅಧಿಕಾರ ಹೊಂದಿದ್ದರು.

'ನಮ್ಮ ಅಜ್ಜನವರಾದ ಡಿ.ಜಿ.ಶಂಕ್ರಪ್ಪಗೌಡ ಅವರು 1936 ಮತ್ತು 1941ರಲ್ಲಿ ಎರಡು ಬಾರಿ ಮೈಸೂರು ಪ್ರಜಾಪ್ರತಿನಿಧಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು.' ಅವರು ಮೊದಲ ಬಾರಿ ಆಯ್ಕೆಯಾಗಿ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಅಧಿವೇಶನಕ್ಕೆ ಹೋದಾಗ ಹೊಸ ಸದಸ್ಯರೊಂದಿಗೆ ಅವರನ್ನು ಮೈಸೂರು ಮಹಾರಾಜರ ಪ್ರತಿನಿಧಿ ಸ್ವಾಗತಿಸಿದ ಸಂದರ್ಭದ ಅಪರೂಪದ ಫೋಟೋ. ಇತ್ತೀಚಿಗೆ ಹಳೆಯ ದಾಖಲೆಗಳನ್ನು ಹುಡುಕುತ್ತಿದ್ದಾಗ ಈ ಫೋಟೋ ಸಿಕ್ಕಿದ್ದು, ತುಂಬಾ ಸಂತಸವಾಗಿ ನಿಮ್ಮೆಲ್ಲರೊಂದಿಗೆ ಹಂಚಿಕೊಳ್ಳಬೇಕೆನಿಸಿತು. ಡಿ.ಜಿ. ಶಂಕ್ರಪ್ಪಗೌಡರ ಸಮುದಾಯ ಸೇವೆಯನ್ನು ಪರಿಗಣಿಸಿ, ಅಂದಿನ ಮೈಸೂರು ಮಹಾರಾಜರು ನಮ್ಮ ಅಜ್ಜನವರಿಗೆ 'ಲೋಕ ಸೇವಾ ನಿರತ' ಎಂಬ ಬಿರುದು ನೀಡಿ ಗೌರವಿಸಿದ್ದರು ಎಂಬುದನ್ನು ಈಗಲೂ ಈ ಭಾಗದ ಹಿರಿಯರು ನೆನಪಿಸಿಕೊಳ್ಳುತ್ತಾರೆ.

ನಮ್ಮ ಅಜ್ಜ ಶಂಕ್ರಪ್ಪಗೌಡರಿಗೆ ಜನಸೇವೆ ಹವ್ಯಾಸ ಮೂಡಿದ್ದು, ಅವರ ತಂದೆ - ತಾಯಿಯಿಂದ ಬಂದ ಬಳುವಳಿ. ಆ ಲೋಕಸೇವೆಯ ಅಂದರೆ ಜನಸೇವೆಯ ಪರಂಪರೆ ನಮ್ಮ ಮನೆತನದಲ್ಲಿ ಹಾಗೆಯೇ ಮುಂದುವರೆದಿದೆ ಎಂದು ಹೇಳಲು ಸಂತಸವೆನಿಸುತ್ತದೆ.

- ಡಿ.ಎಸ್.ಸುರೇಂದ್ರ
(ಶಾಸಕ ಡಿ ಜಿ ಶಾಂತನಗೌಡರ ಪುತ್ರ)
ನಿರ್ದೇಶಕರು, ಡಿಸಿಸಿ ಬ್ಯಾಂಕ್, ದಾವಣಗೆರೆ

# ಗುಡ್ ಟಚ್, ಬ್ಯಾಡ್ ಟಚ್ ಕುರಿತು ಮಕ್ಕಳಿಗೆ ಜಾಗೃತಿ ಮೂಡಿಸಿ

## ಹರಿಹರದ ಕಾರ್ಯಕ್ರಮದಲ್ಲಿ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಜಯ್ ಸಂತೋಷ್ ಕುಮಾರ್

ಹರಿಹರ, ಫೆ. 24 - ಗುಡ್ ಟಚ್, ಬ್ಯಾಡ್ ಟಚ್ (ಮಮತೆಯ ಸ್ಪರ್ಶ, ದುರ್ಭಾವನೆಯ ಸ್ಪರ್ಶ) ಕುರಿತು ಮಕ್ಕಳಿಗೆ ಪೋಷಕರು ಹಾಗೂ ಶಿಕ್ಷಕರು ಜಾಗೃತಿ ಮೂಡಿಸಬೇಕೆಂದು ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಜಯ್ ಸಂತೋಷ್ ಕುಮಾರ್ ಹೇಳಿದರು.

ನಗರದ ಸಂತ ಅಲೋಶಿಯಸ್ ಇಂಟರ್ ನ್ಯಾಷನಲ್ ಶಾಲೆಯಲ್ಲಿ 2024-25ನೇ ಸಾಲಿನ ಶಿಶುವಿಹಾರ ವಿದ್ಯಾರ್ಥಿಗಳ ಪದವಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತ ನಾಡಿದ ಅವರು, ಮುದ್ದು ಮಾಡುವ ನೆಪದಲ್ಲಿ ದುರ್ಭಾವನೆಯಿಂದ ಮಕ್ಕಳ ಖಾಸಗಿ ಭಾಗಗಳಿಗೆ ಸ್ಪರ್ಶಿಸುವುದನ್ನು ತಪ್ಪಿಸಬೇಕಿದೆ ಎಂದರು.

ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯ ಪ್ರಕರಣಗಳಲ್ಲಿ ಆರೋಪಿತರು ಬಹುತೇಕ ಸಂಬಂಧಿಗಳು ಅಥವಾ ಪರಿಚಯಸ್ಥರೇ ಇರುತ್ತಾರೆ. ದುರ್ಭಾವನೆಯ ಸ್ಪರ್ಶವಾದಾಗ ಅದನ್ನು ಪ್ರತಿರೋಧಿಸುವುದನ್ನು ಮಕ್ಕಳಿಗೆ ಕಲಿಸುವ ಅಗತ್ಯವಿದೆ ಎಂದು ತಿಳಿಸಿದರು.



ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ದಾವಣಗೆರೆ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಮಾಜಿ ಸದಸ್ಯ ಇನಾಯತ್ ಉಲ್ಲಾ ಟಿ. ಮಾತನಾಡಿ, ಗುಣಮಟ್ಟದ ಪ್ರಾಥಮಿಕ ಶಿಕ್ಷಣ ದೊರೆತರೆ, ಮಕ್ಕಳು ಶೈಕ್ಷಣಿಕವಾಗಿ ಪ್ರಬಲರಾಗಿ ಬೆಳೆಯುತ್ತಾರೆ. ಮನೆಯಲ್ಲಿ ಪೋಷಕರು ಕೂಡ ಮಕ್ಕಳು ಶಾಲೆಯಲ್ಲಿ ಕಲಿತು ಬಂದದ್ದನ್ನು ಪುನರ್ ಮನನ ಮಾಡಿಸಬೇಕೆಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆ ನಿರ್ದೇಶಕ ಫಾ. ಎರಿಕ್ ಮಥಾಯಸ್ ಮಾತನಾಡಿ, ಅತ್ಯುತ್ತಮ ಮೈದಾನ, ಕಟ್ಟಡ, ಕಲಿಕೋಪಕರಣ, ಗುಣಮಟ್ಟದ ಶಿಕ್ಷಕರು, ಶೈಕ್ಷಣಿಕ ವಾತಾವರಣ ಈ ಶಾಲೆಯಲ್ಲಿದೆ. ಪೋಷಕರಿಂದ ಪಡೆದ ಶುಲ್ಕವನ್ನು ಶಾಲಾಭಿವೃದ್ಧಿ, ಶೈಕ್ಷಣಿಕ ಗುಣಮಟ್ಟ ಸುಧಾರಣೆಗೆ ಬಳಕೆ ಮಾಡಲಾಗುತ್ತಿದೆ ಎಂದರು.

ಪ್ರಾಂಶುಪಾಲರಾದ ಸಿಸ್ಟರ್ ಶಾಂತಿ ಡೇವಿಡ್, ಪುಷ್ಪಲತಾ ಅರಸ್ ಹಾಗೂ ಉಪ ಪ್ರಾಂಶುಪಾಲ ಫಾ. ಎ.ಜೆ. ವಿನೋದ್, ಸಂಸ್ಥೆ ಆಡಳಿತಾಧಿಕಾರಿ ಫಾದರ್ ಜಾನ್ ಬ್ಯಾಪ್ಟಿಸ್ಟ್, ಶಿಕ್ಷಕ ಅಬ್ದುಲ್ ರೆಹಮಾನ್, ಮೌಸಿನ್ ಉಲ್ಲಾ, ಎಲ್.ಎಸ್. ಮಂಜುನಾಥ್ ಉಪಸ್ಥಿತರಿದ್ದರು.

# ಮನೆ ಮನೆಗೆ ಔಷಧಿ ತಲುಪಿಸುವ ವ್ಯವಸ್ಥೆ ರದ್ದುಗೊಳಿಸಲು ಆಗ್ರಹ

ದಾವಣಗೆರೆ, ಜ. 21- ಮನೆಗೆ ಮನೆಗೆ ಔಷಧಿ ತಲುಪಿಸುವ ವ್ಯವಸ್ಥೆ ರದ್ದು ಮಾಡಬೇಕೆಂದು ದಾವಣಗೆರೆ ಜಿಲ್ಲಾ ಔಷಧಿ ವ್ಯಾಪಾರಿಗಳ ಸಂಘ ಆಗ್ರಹಿಸಿದೆ.

ಕೋವಿಡ್-19 ಸಂದರ್ಭದಲ್ಲಿ ಕೇಂದ್ರ ಸರ್ಕಾರ ಮಾರಕ ಸಾಂಕ್ರಾಮಿಕ ರೋಗ ನಿಯಂತ್ರಣ ಮಾಡುವ ಉದ್ದೇಶದಿಂದ ಕೆಲವು ನಿಬಂಧನೆಗೆ ಒಳಪಟ್ಟು ಆನ್‌ಲೈನ್ ಮೂಲಕ ಮನೆ ಮನೆಗೆ ಔಷಧಿ ಸರಬರಾಜು ಮಾಡಲು ಅವಕಾಶ ನೀಡಿತ್ತು.

ಆದರೆ ಕೆಲವು ಸಂಸ್ಥೆಗಳು ದುರುಪಯೋಗ ಪಡಿಸಿಕೊಂಡು ಆನ್‌ಲೈನ್ ಹೆಸರಿನಲ್ಲಿ ಸಂಸ್ಥೆ ರಚಿಸಿಕೊಂಡು ಯಾವುದೇ ಔಷಧಿ ಬೇಕಾದರೂ ಯಾವ ನಿಬಂಧನೆ, ಅಡೆತಡೆ ಇಲ್ಲದೆ ಮನೆ ಮನೆಗೆ ತಲುಪಿಸಿ ಯುವ ಪೀಳಿಗೆಗೆ ವ್ಯಸನದ ಅಭ್ಯಾಸ ಮಾಡಿಸಿದ್ದು, ಮತ್ತು ಬರುವ ಔಷಧಿ ಮುಕ್ತವಾಗಿ ಸಿಗುವಂತಾಗಿದೆ.

ಈ ಬಗ್ಗೆ ಅಖಿಲ ಭಾರತ ಔಷಧಿ ವ್ಯಾಪಾರಿಗಳ ಸಂಘ ಮತ್ತು ಕರ್ನಾಟಕ ರಾಜ್ಯ ಔಷಧಿ ವ್ಯಾಪಾರಿಗಳ ಸಂಘವು ಆರೋಗ್ಯ ಇಲಾಖೆ ಕಾರ್ಯದರ್ಶಿ ಮತ್ತು ಸಚಿವರಿಗೆ ಮನವಿ ಸಲ್ಲಿಸಿ ದರೂ ಯಾವುದೇ ಪ್ರಯೋಜನವಾಗಿಲ್ಲ. ಕೂಡಲೇ ಮನೆ ಮನೆಗೆ ಔಷಧಿ ತಲುಪಿಸುವ ವ್ಯವಸ್ಥೆ ರದ್ದುಗೊಳಿಸಬೇಕೆಂದು ಸಂಘದ ಅಧ್ಯಕ್ಷ ಪೋಪಟ್ ಲಾಲ್ ಎಂ.ಜೈನ್, ಗೌರವ ಕಾರ್ಯದರ್ಶಿ ಎನ್. ಪಿ.ಪ್ರಸನ್ನಕುಮಾರ್ ಆಗ್ರಹಿಸಿದ್ದಾರೆ.

# ಜಾಹೀರಾತು ವಿರುದ್ಧ ದೂರಿನ ವ್ಯವಸ್ಥೆ ಬೇಕಿದೆ: ಸುಪ್ರೀಂ

(1ನೇ ಪುಟದಿಂದ) ಬಗ್ಗೆಯೂ ಪೀಠ ಪರಿಶೀಲನೆ ನಡೆಸಿತು.

ದಾರಿ ತಪ್ಪಿಸುವ ಜಾಹೀರಾತುಗಳಿಗೆ ಸಂಬಂಧಿಸಿದಂತೆ ದಾಖಲಾದ 25 ಪ್ರಕರಣಗಳಲ್ಲಿ ಸಾಕ್ಷಿಗಳ ಕೊರತೆ ಇದೆ. ಈ ಹಿನ್ನೆಲೆಯಲ್ಲಿ ಕ್ರಮ ತೆಗೆದುಕೊಂಡಿಲ್ಲ ಎಂದು ಪೀಠಕ್ಕೆ ಕರ್ನಾಟಕ ಸರ್ಕಾರ ತಿಳಿಸಿತ್ತು.

ನಮ್ಮ ಪ್ರಕಾರ, ಕರ್ನಾಟಕ ಸರ್ಕಾರ ನೆಪಗಳನ್ನು ಹೇಳುತ್ತಿದೆ. ಸರ್ಕಾರ ತನ್ನದೇ ಆದ ಪೊಲೀಸ್ ವ್ಯವಸ್ಥೆ ಹಾಗೂ ಸೈಬರ್ ದಳ ಹೊಂದಿದೆ. ಈ ಜಾಹೀರಾತುಗಳ ಮೂಲ ಪತ್ತೆ ಮಾಡುವುದು ತುಂಬಾ ಸುಲಭ. ಆದರೆ ಸರ್ಕಾರಕ್ಕೆ ಈ ಬಗ್ಗೆ ಇಚ್ಛಾಶಕ್ತಿ ಇರಬೇಕು ಎಂದು ಪೀಠ ತಿಳಿಸಿತು.

ತಪ್ಪು ಮಾಡಿದವರನ್ನು ಸರ್ಕಾರ ಗುರುತಿಸಬೇಕು ಹಾಗೂ ಈ ಬಗ್ಗೆ ತಿಂಗಳ ಒಳಗೆ ಕ್ರಮ ತೆಗೆದುಕೊಂಡ ವರದಿ ಸಲ್ಲಿಸಬೇಕು ಎಂದು ಪೀಠ ಹೇಳಿತು.

# ಇಟಗಿ ಹಾಲಸ್ವಾಮಿ ರಥೋತ್ಸವ



ರಾಣೇಬೆನ್ನೂರು,ಫೆ.24- ತಾಲ್ಲೂಕಿನ ಇಟಗಿ ಗ್ರಾಮದ ಶ್ರೀ ಹಾಲೇಶ್ವರ ಸ್ವಾಮಿ ರಥೋತ್ಸವವ ನಿನ್ನೆ ಸಂಜೆ ವಿಜೃಂಭಣೆಯಿಂದ ನಡೆಯಿತು. ರಥ ಸಂಚರಿಸುವ ಬೀದಿ ಉದ್ದಕ್ಕೂ ವಿದ್ಯುತ್ ದೀಪಗಳ ಅಲಂಕಾರ ಉತ್ಸವಕ್ಕೆ ಮೆರಗು ತಂದಿತ್ತು. ಜಿಪಂ ಮಾಜಿ ಅಧ್ಯಕ್ಷ ಎಸ್. ಎಸ್. ರಾಮಲಿಂಗಣ್ಣನವರ, ಸ್ವಾಮಿಗೆ ವಿವಿಧ ಸೇವೆ ಸಲ್ಲಿಸಿದ ಹೆಚ್.ಎಸ್. ಮಂಜನಗೌಡ, ಅಕ್ಕಮ್ಮ ಕರೇಗೌಡ್ರ, ಶಾಂತಾ ಪಾಟೀಲ, ಸುಭಾಸ ರಾಮಲಿಂಗಣ್ಣನವರ, ಶಾಂತವ್ವ ಎರೇಸೀಮಿ, ತಿರುಕಪ್ಪ ಅನ್ವೇರಿ, ಗುತ್ತೆಮ್ಮ ಡೊಂಬರಮತ್ತೂರ ಸೇರಿದಂತೆ ಗ್ರಾಮದ ಭಕ್ತರು ಪಾಲ್ಗೊಂಡಿದ್ದರು.

# ಮೋದಿ ಸರ್ಕಾರ ನವ ಫ್ಯಾಸಿಸ್ಟ್ ಅಲ್ಲ : ಸಿಪಿಐ (ಎಂ)

ನವದೆಹಲಿ, ಫೆ. 24 - ಕೇಂದ್ರದ ನರೇಂದ್ರ ನವದೆಹಲಿ, ಫೆ. 24 - ಕೇಂದ್ರದ ನರೇಂದ್ರ ಮೋದಿ ಸರ್ಕಾರ ನವ ಫ್ಯಾಸಿಸ್ಟ್ ಅಲ್ಲ. ಆದರೆ ಸರ್ಕಾರ ನವ ಫ್ಯಾಸಿಸಂನ ಕೆಲ ಗುಣಗಳನ್ನು ಹೊಂದಿದೆ ಎಂದು ಸಿಪಿಐ(ಎಂ) ಹೇಳಿದೆ.

ಇದು ಎಡ ಪಕ್ಷದ ಸಾಂಪ್ರದಾಯಿಕ ನಿಲುವಿಗಿಂತ ಭಿನ್ನವಾಗಿದೆ. ಕೇಂದ್ರದ ಮೋದಿ ಸರ್ಕಾರ ಫ್ಯಾಸಿಸ್ಟ್ ಸ್ವರೂಪದ್ದು ಎಂದು ಪಕ್ಷ ಟೀಕಿಸುತ್ತಾ ಬಂದಿತ್ತು.

ಕೇಂದ್ರ ಸರ್ಕಾರದ ಬಗ್ಗೆ ತಾನು ಹೊಂದಿರುವ ನಿಲುವು ಇತರೆ ಎಡಪಕ್ಷಗಳಾದ ಸಿಪಿಐ ಹಾಗೂ ಸಿಪಿಐ(ಎಂಎಲ್)ಗಳಿಗಿಂತ ಭಿನ್ನವಾಗಿದೆ ಎಂದು ಸಿಪಿಐ(ಎಂ) ರಾಜ್ಯ ಘಟಕಗಳಿಗೆ ಪತ್ರ ಬರೆದಿದೆ.

ಕೇಂದ್ರದ ಬಿಜೆಪಿ ಸರ್ಕಾರ ಫ್ಯಾಸಿಸ್ಟ್ ಎಂದು ಸಿಪಿಐ ಹೇಳಿತ್ತು. ಕೇಂದ್ರದ ಮೋದಿ ಸರ್ಕಾರ ಭಾರತೀಯ ಫ್ಯಾಸಿಸ್ಟ್ ಎಂದು ಸಿಪಿಐ (ಎಂಎಲ್) ಟೀಕಿಸಿತ್ತು. ಹಿಂದುತ್ವ - ಕಾರ್ಪೊರೇಟ್ ಸರ್ವಾಧಿಕಾರದ ಕಾರಣದಿಂದಾಗಿ ನವ ಫ್ಯಾಸಿಸಂ ಕಡೆ ತೆರಳುವ ಅಪಾಯ ಇದೆ. ಬಿಜೆಪಿ ಹಾಗೂ ಆರ್‌ಎಸ್‌ಎಸ್ ವಿರುದ್ಧ ಹೋರಾಟ ನಡೆಸಿ ಅವುಗಳನ್ನು ನಿಲ್ಲಿಸದೆ ಹೋದರೆ ಸಮಸ್ಯೆ ಎದುರಾಗಲಿದೆ. ಆದರೆ ಮೋದಿ ಸರ್ಕಾರ ನವ ಫ್ಯಾಸಿಸ್ಟ್ ಎಂದು ಕರೆಯಲಾಗದು ಎಂದು ಸಿಪಿಐ(ಎಂ) ತಿಳಿಸಿದೆ.

# ನಗರದಲ್ಲಿ ಇಂದು ಓಶೋ ಧ್ಯಾನ ಶಿಬಿರ

ಓಶೋ ಸನ್ನಿಧಿ ಇನ್‌ಸೈಟ್ ಫೌಂಡೇಶನ್ ವತಿಯಿಂದ ಆಲೂರು ಕನ್ವೆನ್ಷನ್ ಹಾಲ್‌ನಲ್ಲಿ ಇಂದಿನಿಂದ ಬರುವ ಮಾರ್ಚ್ 2ರ ವರೆಗೆ ಪ್ರತಿದಿನ ಬೆಳಗ್ಗೆ 6ರಿಂದ 7.30ರ ವರೆಗೆ 'ಓಶೋ ಧ್ಯಾನ ಶಿಬಿರ' ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : 9738572318, 9036719573.

# ಜಗತ್ತಿನ ಅತ್ಯಂತ ಪ್ರಾಚೀನ ದೇಶ ಭಾರತ

## ಕುಟುಂಬ ಪ್ರಬೋಧನ್ ದಕ್ಷಿಣ ಪ್ರಾಂತ ಸಹ ಸಂಯೋಜಕ ಕೆ.ಎಸ್.ರಮೇಶ್



ದಾವಣಗೆರೆ, ಜ. 24 - ಜಗತ್ತು ಕಣ್ಣು ತೆರೆಯುವ ಮೊದಲೇ ಭಾರತ ದೇಶದ ಉಗಮವಾಗಿತ್ತು. ಆದ್ದರಿಂದ ಜಗತ್ತಿನ ಅತ್ಯಂತ ಪ್ರಾಚೀನವಾದ ದೇಶ ನಮ್ಮ ಭಾರತ ದೇಶ ಎಂದು ಕುಟುಂಬ ಪ್ರಬೋಧನ್ ದಕ್ಷಿಣ ಪ್ರಾಂತ ಸಹ ಸಂಯೋಜಕ ಕೆ.ಎಸ್. ರಮೇಶ್ ಅಭಿಪ್ರಾಯಪಟ್ಟರು.

ನಗರದ ಎಸ್.ಕೆ.ಪಿ. ವಿದ್ಯಾಪೀಠ, ಆರ್.ವಿ.ಜಿ.ಕೆ. ಕನ್ನಡ ಮಾಧ್ಯಮ ಪ್ರೌಢಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ಕುಟುಂಬ ಪ್ರಬೋಧನ್ ನಗರ ಶಾಖೆ ವತಿಯಿಂದ 'ಭಾರತ ಮಾತಾ ಪೂಜನಾ' ಎಂಬ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಮ್ಮ ದೇಶವು ಮೂಲ ಸಿಂಧು ನಾಗರಿಕತೆಯ ಸಂಸ್ಕೃತಿಯಿಂದ ಬಂದಿದ್ದು, ಸಿಂಧೂ ಎನ್ನುವ ಪರಿ ಭಾಷೆಯು ಪರಕೀಯರ ಭಾಷೆಯಿಂದಾಗಿ ಹಿಂದೂ ಎಂದು ಸಂಭೋದಿಸಲ್ಪಟ್ಟು ಹಿಂದೂ, ಹಿಂದೂಸ್ತಾನ್ ಎಂದು ಕರೆಯಲ್ಪಟ್ಟಿತು. ಹಿಂದೂ ಎಂದರೆ ಕೇವಲ ಜಾತಿ, ಮತ, ಪಂಥಗಳ ಪ್ರಭೇದಗಳಲ್ಲಿ ಇದು ಸಮಾನತೆಯ, ಶ್ರದ್ಧೆಯ, ನಂಬಿಕೆಯ, ಅವಿನಾಭಾವ ಸಂಬಂಧವನ್ನು ಉಳಿಸಿ ಬೆಳೆಸುವ ದೇಶವಾಗಿದೆ. ಭರತ ಚಕ್ರವರ್ತಿಯು ಆಳಿದ ಸುಸಂಸ್ಕೃತದಿಂದ ಕೂಡಿದ ದೇಶ ನಮ್ಮದು. ನಮ್ಮ ಪರಂಪರೆ, ಜೀವನ ಶೈಲಿ ಇವು ಹಿಂದುತ್ವದಿಂದ ಕೂಡಿದೆ. ಭಾರತ ಮಾತೆ ನಮ್ಮೆಲ್ಲರ ದೇವರು. ಅದು ಪೂಜ್ಯ ಭಾವನೆಯನ್ನು ತಂದು ಕೊಡುತ್ತದೆ. ಇಂದಿನ ಮಕ್ಕಳು ಈ ಸತ್ಯ ವನ್ನು ತಿಳಿದು ಭಾರತ ಮಾತೆಯನ್ನು ಪೂಜಿಸಿ ಭಾರತೀಯ ಸನಾತನ ಸಂಸ್ಕಾರ, ಸಂಸ್ಕೃತಿಗಳನ್ನು ಅಳವಡಿಸಿಕೊಂಡಲ್ಲಿ ದೇಶವು ಸದೃಢವಾಗಬಲ್ಲದು. ಗಣಿತ, ವಿಜ್ಞಾನ ಅಪಾರ ಜ್ಞಾನ ಭಂಡಾರ, ಯೋಗ ಶಾಸ್ತ್ರಗಳಂತಹ ಅಧ್ಯಾತ್ಮಿಕ ವಿಚಾರಗಳನ್ನು ಪ್ರಪಂಚಕ್ಕೆ ಕೊಡುಗೆಯಾಗಿ ಕೊಟ್ಟ ಮಹಾನ್ ದೇಶ ನಮ್ಮದು ಎಂದು ತಿಳಿಸುತ್ತಾ, ಸ್ವಾಮಿ ವಿವೇಕಾನಂದರ ದೇಶ ಪ್ರೇಮದ ಕಥೆ ಭೂಮಿ, ಆಕಾಶ, ನೀರು, ಗಾಳಿ, ವಿಜ್ಞಾನ ಹೀಗೆ ಇನ್ನೂ ಮುಂತಾದ ಪ್ರಾಕೃತಿಕ ಕೊಡುಗೆಗಳ ಆದರ ಈ ದೇಶ ಎಂಬುದರ ಬಗ್ಗೆ ಬೆಳಕು ಚೆಲ್ಲಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಲಾ ಮುಖ್ಯೋಪಾಧ್ಯಾಯ ನಿರಂಜನ ಕೆ.ಸಿ. ಅವರು, ನಮ್ಮ ಶರೀರವಿರುವುದು ಪರೋಪಕಾರಕ್ಕಾಗಿ. ನಮಗೆ ಅನ್ನ, ನೀರು, ಗಾಳಿ, ಜೀವನವನ್ನು ಕೊಟ್ಟ ಭಾರತ ಮಾತೆಯನ್ನು ಸದಾ ಪೂಜಿಸಿ ಸ್ಮರಿಸಬೇಕು. ಉಪಕಾರ ಸ್ಮರಣೆಯಿಂದ ದೇಶ ಪ್ರೇಮಿಗಳಾಗಬೇಕು ಎಂದು ಮಕ್ಕಳಿಗೆ ಕಿವಿಮಾತು ಹೇಳಿದರು.

ಅಂತರರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ಯೋಗ ತಜ್ಞ ರಾಘವೇಂದ್ರ ಗುರೂಜಿ ಉಪಸ್ಥಿತರಿದ್ದರು.

10ನೇ ತರಗತಿ ಕು. ತೇಜಸ್ವಿನಿ, ಭಾಗ್ಯ ತಂಡದವರು ಪ್ರಾರ್ಥನಾ ಗೀತೆ ಹಾಡಿದರು. ನಂತರ ಕುಟುಂಬ ಪ್ರಬೋಧನಾ ನಗರ ಶಾಖೆಯ ಮುಖ್ಯ ಸಂಚಾಲಕರಾದ ಶ್ರೀಮತಿ ಗೀತಾ ಬಾಲಚಂದರ್ ಮತ್ತು ಸಂಗಡಿಗರು ಭಾರತ ಮಾತೆಯ ಗೀತೆಯನ್ನು ಹಾಡಿ ಮಕ್ಕಳಿಗೆ ಹೇಳಿಕೊಟ್ಟರು.

ದೈಹಿಕ ಶಿಕ್ಷಕ ವಿ. ಸುರೇಶ್ ಕಾರ್ಯಕ್ರಮವನ್ನು ನಿರೂಪಿಸಿದರು. ಶಿವಮೊಗ್ಗ ವಿಭಾಗದ ಸಹ ಸಂಯೋಜಕ ಮಂಜುನಾಥ ಅಖಂಡ್ ಶಾಂತಿ ಮಂತ್ರ ಹೇಳಿಕೊಟ್ಟರು. ಶಾಲಾ ಸಿಬ್ಬಂದಿ ವರ್ಗ ಹಾಗೂ ಕುಟುಂಬ ಪ್ರಬೋಧನ್‌ನ ಕಾರ್ಯಕರ್ತ ಶ್ರೀಮತಿ ಶೋಭಾ ರಾಯ್ಕರ್, ಮಂಜುಳಾ, ಪ್ರತಿಮಾ ಭಟ್ ಇನ್ನೂ ಮುಂತಾದವರು ಭಾಗವಹಿಸಿದ್ದರು.

# ಜನ್ಮದಿನದ ಪ್ರಯುಕ್ತ ರಕ್ತದಾನ ಶಿಬಿರ




ದಾವಣಗೆರೆ, ಫೆ. 24 - ನಗರದ ಸಪ್ತಗಿರಿ ಶಾಲೆ ಹತ್ತಿರ ಇರುವ ಅಶ್ವಿನಿ ಕ್ಲಿನಿಕ್‌ನಲ್ಲಿ ಸುಜಲಾನ್ ಸಂಸ್ಥೆಯ ಸಂಸ್ಥಾಪಕ ತುಳಸಿ ತಂತಿ ಅವರ ಹುಟ್ಟುಹಬ್ಬದ ಪ್ರಯುಕ್ತ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ದಾವಣಗೆರೆ ಲಯನ್ಸ್ ಕ್ಲಬ್, ರೋಟರಿ ಸಂಸ್ಥೆ ದಾವಣಗೆರೆ ಸೌತ್, ರೆಡ್‌ಕ್ರಾಸ್, ರಿದ್ದಿ ಫೌಂಡೇಷನ್, ಗೋಗ್ರೀನ್ ಫೌಂಡೇಷನ್ ಇವರ ಸಹಭಾಗಿತ್ವದಲ್ಲಿ ನಡೆದ ರಕ್ತದಾನ ಶಿಬಿರದಲ್ಲಿ ಉಪಸ್ಥಿತರಿದ್ದರು. ಲಯನ್ಸ್ ಕ್ಲಬ್ ಅಧ್ಯಕ್ಷ ಎಸ್.ಜಿ. ಉಳುವಯ್ಯ ಮಾತನಾಡಿದರು.

# ಸಂಘಟನೆಗೆ ಬಡ್ತಿ

(1ನೇ ಪುಟದಿಂದ) ಕ್ಷೇತ್ರಗಳಲ್ಲಿ ಪಕ್ಷದ ಕಚೇರಿ ಇಲ್ಲದಿದ್ದರೆ, ಹೊಸ ಕಟ್ಟಡ ನಿರ್ಮಾಣಕ್ಕೆ ಚಾಲನೆ ನೀಡುವಂತೆ ಪಕ್ಷದ ಅಧ್ಯಕ್ಷನಾಗಿ ಸಲಹೆ ನೀಡಿದ್ದೇನೆ.

ಸ್ವಾತಂತ್ರ್ಯ ಪೂರ್ವದ ಬೆಳಗಾವಿ ಕಾಂಗ್ರೆಸ್ ಅಧಿವೇಶನಕ್ಕೆ 100 ವರ್ಷ ತುಂಬಿರುವ ಹಿನ್ನೆಲೆ ಯಲ್ಲಿ ಪಕ್ಷದ ಕಚೇರಿ ಇಲ್ಲದ ಕಡೆಗಳಲ್ಲಿ 100 ಕಚೇರಿಗಳ ನಿರ್ಮಾಣಕ್ಕೆ ತೀರ್ಮಾನ ಕೈಗೊಳ್ಳ ಲಾಗಿದೆ. ಸ್ಥಳೀಯ ಸಂಸ್ಥೆಗಳಿಂದ ಜಾಗ ಪಡೆದು ಕೊಂಡು ಕಟ್ಟಡ ನಿರ್ಮಾಣ ಆರಂಭಿಸಿ, ಇಲ್ಲವೇ ಜಾಗ ಖರೀದಿ ಮಾಡಿ ಪಕ್ಷಕ್ಕೆ ಸಣ್ಣ ಕಚೇರಿಯನ್ನಾದರೂ ನಿರ್ಮಿಸಿ ಎಂದು ಪ್ರತಿ ಕ್ಷೇತ್ರದ ಮುಖಂಡರಿಗೂ ಆದೇಶಿಸಿರುವುದಾಗಿ ತಿಳಿಸಿದರು.

# ಹರಪನಹಳ್ಳಿ : ಕಟ್ಟಡ ಕಾರ್ಮಿಕರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ

ಹರಪನಹಳ್ಳಿ, ಫೆ. 24 - ಕಟ್ಟಡ ಕಾರ್ಮಿಕರು ಉಚಿತ ಆರೋಗ್ಯ ತಪಾಸಣೆಯ ಸದುಪಯೋಗ ಪಡೆದುಕೊಂಡು ಆರೋಗ್ಯವಾಗಿರಿ ಎಂದು ಪುರಸಭೆ ಸದಸ್ಯ ಜಾಕೀರ್ ಸರ್ಖಾವಾಸ್ ಹೇಳಿದರು.

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ವತಿಯಿಂದ ಪಟ್ಟಣದ ಮೇನ್ ಶಾಲೆಯ ಆವರಣದಲ್ಲಿ ಆಯೋಜಿಸಿದ್ದ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಹಾಗೂ ಅವರ ಅವಲಂಬಿತರಿಗೆ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ಕಟ್ಟಡ ಕಾರ್ಮಿಕರು ದಿನ ನಿತ್ಯ ದುಡಿಮೆ ಮಾಡಿ ಜೀವನ ಸಾಗಿಸುತ್ತಾ ಆಸ್ಪತ್ರೆಗೆ ಹೋಗಲು ನಿರ್ಲಕ್ಷ್ಯ ವಹಿಸುತ್ತಾರೆ. ಯಾವುದೇ ತಪಾಸಣೆ ಮಾಡಿಕೊಳ್ಳುವುದಿಲ್ಲ. ಆದ್ದರಿಂದ ಪ್ರತಿಯೊಬ್ಬರು ಆರೋಗ್ಯವಾಗಿ ಇರಬೇಕು ಎಂಬ ಉದ್ದೇಶದಿಂದ ಕರ್ನಾಟಕ ಸರ್ಕಾರ ತಮ್ಮ ಮನೆ ಬಾಗಿಲಿಗೆ ವೈದ್ಯರನ್ನು ಕಳುಹಿಸಿ ದ್ದಾರೆ. ಇದರ ಸದುಪಯೋಗವನ್ನು ಕಾರ್ಮಿಕರು ಪಡೆದುಕೊಳ್ಳಬೇಕು. ಅಧಿಕ ರಕ್ತದೊತ್ತಡ, ಸಕ್ಕರೆ ಕಾಯಿಲೆ, ಹೃದಯಾಘಾತದಂತಹ ರೋಗಗಳು ಹೆಚ್ಚುತ್ತಿವೆ. ಆರೋಗ್ಯದತ್ತ ಪ್ರತಿಯೊಬ್ಬರೂ ಕಾಳಜಿ ವಹಿಸಬೇಕು ಎಂದರು.

# ಕಲಿಕಾ ಹಂತದಲ್ಲಿ ಶಿಸ್ತು ಮುಖ್ಯ : ಶ್ರೀ



**ರಾಣೇಬೆನ್ನೂರು**


ರಾಣೇಬೆನ್ನೂರು, ಫೆ.24- ಕಲಿಕಾ ಹಂತದಲ್ಲಿ ಶಿಸ್ತು, ಸಂಯಮ, ನೈತಿಕತೆ, ಸಂಸ್ಕಾರ, ಸಂಸ್ಕೃತಿಯನ್ನು ವಿದ್ಯಾರ್ಥಿಗಳು ಅಳವಡಿಸಿಕೊಂಡರೆ ಮಾದರಿ ಬದುಕು ನಡೆಸಬಹುದು ಎಂದು ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಮಾರುತಿ ನಗರದ ಸರ್ಕಾರಿ ಶಾಲೆಯ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದ ಸ್ವಾಮೀಜಿ, ಈ ದಿಶೆಯಲ್ಲಿ ಶಿಕ್ಷಕರ, ಪಾಲಕರ ಪಾತ್ರ ಬಹಳಷ್ಟಿದೆ ಹಾಗೂ ಕಲಿಕಾ ಸಾಮರ್ಥ್ಯ ಹೆಚ್ಚಿಸುವಲ್ಲಿಯೂ ಸಹ ಅವರ ಪಾತ್ರ ಮುಖ್ಯವಾದುದು ಎಂದು ಹೇಳಿದರು. ನಗರಸಭೆ ಸದಸ್ಯ ಶೇಖಪ್ಪ ಹೊಸಗೌಡ್ರ, ಪುಟ್ಟಪ್ಪ ಮರಿಯಮ್ಮನವರ, ಆರ್. ಟಿ. ತಾಂಬೆ. ಮುಖ್ಯೋಪಾಧ್ಯಾಯ ಬಿ.ಪಿ. ಸಿಡೇನೂರ, ಬಿಇಓ ಶಾಮಸುಂದರ ಅಡಿಗ, ಆರ್. ಸೋಮಶೇಖರ್, ಸಮನ್ವಯಾಧಿಕಾರಿ ಮಂಜಾನಾಯ್ಕ ಮತ್ತಿತರರಿದ್ದರು.

# ಮಲೇಕುಂಬಳೂರಿನಲ್ಲಿ ಇಂದು

ಹೊನ್ನಾಳಿ ತಾ. ಮಲೇಕುಂಬಳೂರು ಗ್ರಾಮದ ಶ್ರೀ ಆಂಜನೇಯ ಸ್ವಾಮಿಯ ಮಹಾ ರಥೋತ್ಸವದ ಪ್ರಯುಕ್ತ ಇಂದು ಅಮೃತ ಸ್ನಾನ (ಓಕುಳಿ), ಭೂತನ ಸೇವೆ ಹಾಗೂ ಕಂಕಣ ವಿಸರ್ಜನೆ ಕಾರ್ಯಕ್ರಮಗಳು ನಡೆಯಲಿವೆ.


## ಜೆ.ಕೆ.ಮಲ್ಲಿಕಾರ್ಜುನ್ ನಿಧನ



ಬೆಂಗಳೂರು ಕೋರಮಂಗಲ ನ್ಯಾಷನಲ್ ಗೇಮ್ಸ್ ವಿಲೇಜ್ ವಾಸಿ ದಿವಂಗತ ಸೂರಡ್ಡಿಹಳ್ಳಿ ಬಾಂಬೆ ಜವಳಿ ಕೊಟ್ರಪ್ಪನವರ ಹಿರಿಯ ಮಗ

**ಜೆ.ಕೆ.ಮಲ್ಲಿಕಾರ್ಜುನ್ (79)**

(ನಿವೃತ್ತ ಕೃಷಿ ಅಧಿಕಾರಿ, ದಾವಣಗೆರೆ) ಇವರು ದಿನಾಂಕ 24.02.2025ರ ಸೋಮವಾರ ತಮ್ಮ ಬೆಂಗಳೂರಿನ ನಿವಾಸದಲ್ಲಿ ಬೆಳಿಗ್ಗೆ 6.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 25.2.2025ರ ಮಧ್ಯಾಹ್ನ 2 ಗಂಟೆಗೆ ಬೆಂಗಳೂರಿನ ಬನಶಂಕರಿ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖ ತಪ್ತರು : ಪತ್ನಿ, ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ಸಹೋದರ, ಸಹೋದರಿಯರು ಮತ್ತು ಜವಳಿ ವಂಶಸ್ಥರು ಹಾಗೂ ಬಂಧು ಬಳಗದವರು.**



## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ದಾವಣಗೆರೆ ವಿಭಾಗ, ದಾವಣಗೆರೆ

ಸಂಖ್ಯೆ.ಕರಾಸಾ/ದಾವಿ/ಸಂಚಾರ/ವಾಣಿಜ್ಯ/3415/2024–25 ದಿನಾಂಕ:24.02.2025

## ಇ–ಟೆಂಡರ್ ಪ್ರಕಟಣೆ ಸಂಖ್ಯೆ: 13/2024–25

**(ಸ್ಮಾರ್ಟ್ ಸಿಟಿ ದಾವಣಗೆರೆ ಬಸ್ ನಿಲ್ದಾಣದ ಹೊರ ಆವರಣದ ಜಾಹೀರಾತುಗಳಿಗೆ ಪ್ಯಾಕೇಜ್ ಮಾದರಿಯಲ್ಲಿ)**

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ದಾವಣಗೆರೆ ವಿಭಾಗದ ವ್ಯಾಪ್ತಿಗೆ ಬರುವ, ಸ್ಮಾರ್ಟ್ ಸಿಟಿ ಅಡಿಯಲ್ಲಿ ನೂತನವಾಗಿ ನಿರ್ಮಾಣವಾಗಿರುವ ದಾವಣಗೆರೆ ಬಸ್ ನಿಲ್ದಾಣದ ಹೊರಭಾಗದಲ್ಲಿ ಜಾಹೀರಾತು ಆಳವಡಿಸಲು ಹೋರ್ಡಿಂಗ್ಸ್ ಪ್ಯಾಕೇಜ್ ಸಂಖ್ಯೆ–02ಕ್ಕೆ ಬಸ್ ನಿಲ್ದಾಣದ ಹೊರ ಭಾಗದ ಜಾಹೀರಾತು ಸ್ಥಳಗಳಿಗೆ ಪರವಾನಗಿದಾರರನ್ನು ಆಯ್ಕೆ ಮಾಡಲು ಇ–ಪ್ರಕ್ಯೂರ್‌ಮೆಂಟ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಸದರಿ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್"https://kppp.karnatak.gov.in" ಹಾಗೂ ನಿಗಮದ ವೆಬ್‌ಸೈಟ್ ksrtc.karnataka.gov.in ನಲ್ಲಿ ದಿನಾಂಕ: 24.02.2025 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ ಕ.ರಾ.ರ.ಸಾ ನಿಗಮ, ದಾವಣಗೆರೆ ವಿಭಾಗ–577002 ಇಲ್ಲಿ ಕಚೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/- ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ ನಿಗಮ, ದಾವಣಗೆರೆ ವಿಭಾಗ

ವಾಸಸಂಇ/ಸಿಪಿ/ಎಎಎ/5267/2024–25


# ಮಾ. 1ರಂದು ಎಐಡಿಎಸ್‌ಓ ಪ್ರತಿಭಟನಾ ರಾಜ್ಯ ಸಮಾವೇಶ

ದಾವಣಗೆರೆ, ಫೆ. 24- ಪದವಿ, ಇಂಜಿನಿಯರಿಂಗ್, ಸ್ನಾತಕೋತ್ತರ, ಪದವಿ ಹಾಗೂ ಮೆಡಿಕಲ್ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಿಸಲು ಆಗ್ರಹಿಸಿ ಮತ್ತು ಸಂಯೋಜನೆಯ ಹೆಸರಿನಲ್ಲಿ 6000ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ಮುಚ್ಚುವ ಸರ್ಕಾರದ ನಿರ್ಧಾರವನ್ನು ಖಂಡಿಸಿ ರಾಜ್ಯಮಟ್ಟದ ಸಮಾವೇಶವನ್ನು ಮಾರ್ಚ್ 1 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಹಮ್ಮಿಕೊಳ್ಳಲಾಗಿದೆ.

ಕಳೆದ ಮೂರು ವರ್ಷಗಳಿಂದ ಹಿಂದುಳಿದ ವರ್ಗಗಳ ಹಾಗೂ ಹಲವು ಪರಿಶಿಷ್ಟ ಜಾತಿ, ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಪೂರ್ಣ ಪ್ರಮಾಣದಲ್ಲಿ ಬಿಡುಗಡೆಗೊಂಡಿಲ್ಲ. ರಾಜ್ಯದಲ್ಲಿ 10 ಲಕ್ಷಕ್ಕೂ ಹೆಚ್ಚು ಉನ್ನತ ಶಿಕ್ಷಣ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನದ ಮೇಲೆ ಅವಲಂಬಿತರಾಗಿದ್ದು, ಅವರ ಶೈಕ್ಷಣಿಕ ಜೀವನ ಬಿಕ್ಕಟ್ಟಿಗೆ ಸಿಲುಕಿದೆ.

ಮತ್ತೊಂದೆಡೆ 'ಸಂಯೋಜನೆ' ಹೆಸರಿನಲ್ಲಿ ರಾಜ್ಯ ಸರ್ಕಾರ 6 ಸಾವಿರಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ಮುಚ್ಚಲು ಹೊರಟಿರುವುದರಿಂದ 50 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಅತಂತ್ರರಾಗಲಿದ್ದಾರೆ.

ಈ ಗಂಭೀರ ವಿಷಯಗಳ ಕುರಿತು ನಡೆಯುತ್ತಿರುವ ಸಮಾವೇಶದಲ್ಲಿ ಸಾವಿರಾರು ವಿದ್ಯಾರ್ಥಿಗಳು ಭಾಗವಹಿಸಲಿದ್ದು, ಸಮಾವೇಶಕ್ಕೆ ಭಾಷಣಕಾರರಾಗಿ ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ, ಹಂಪಿ ಕನ್ನಡ ವಿವಿಯ ವಿಶ್ರಾಂತ ಉಪ ಕುಲಪತಿ ಪ್ರೊ. ಎ. ಮುರಿಗೆಪ್ಪ, ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯಾಧ್ಯಕ್ಷ ಮಾವಳ್ಳಿ ಶಂಕರ್, ಸಾಮಾಜಿಕ ಹೋರಾಟಗಾರ ಉಗ್ರನರಸಿಂಹಗೌಡ ಆಗಮಿಸಲಿದ್ದಾರೆ.

ಎಐಡಿಎಸ್‌ಓ ರಾಜ್ಯ ಖಜಾಂಚಿ ಸುಭಾಷ್ ಮಾತನಾಡಲಿದ್ದು, ರಾಜ್ಯ ಉಪಾಧ್ಯಕ್ಷೆ ಅಭಯ ದಿವಾಕರ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಜಿಲ್ಲಾ ಕಾರ್ಯದರ್ಶಿ ಟಿ.ಎಸ್.ಸುಮನ್ ತಿಳಿಸಿದ್ದಾರೆ.

# ನಿಟ್ಟೂರಿಗೆ ಆದಿಚುಂಚನಗಿರಿ ಸ್ವಾಮೀಜಿ ಭೇಟಿ



ಮಲೇಬೆನ್ನೂರು, ಫೆ.24- ಶ್ರೀ ಕ್ಷೇತ್ರ ಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧ್ಯಕ್ಷರಾದ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿ ಅವರು ಸೋಮವಾರ ನಿಟ್ಟೂರು ಗ್ರಾಮಕ್ಕೆ ಆಗಮಿಸಿದ್ದ ವೇಳೆ ಗ್ರಾಮಸ್ಥರು ಭಕ್ತಿಪೂರ್ವಕವಾಗಿ ಸ್ವಾಗತಿಸಿದರು.

ಗ್ರಾಮದ ಅತಿದೊಡ್ಡ ಅವಿಭಕ್ತ ಕುಟುಂಬ ಎಂಬ ಹೆಗ್ಗಳಿಕೆ ಪಡೆದಿದ್ದ ಕೆ. ರಾಮಪ್ಪ ಮತ್ತು ಕೆ.ಸಂಜೀವ ಮೂರ್ತಿ ಅವರ ಮನೆಗಳಿಗೆ ಶ್ರೀಗಳು ಸೌಹಾರ್ದ ಭೇಟಿ ನೀಡಿದ್ದ ವೇಳೆ, ಕಳೆದ 15 ವರ್ಷಗಳಿಂದ ಆದಿಚುಂಚನ ಗಿರಿ ಗೋಶಾಲೆಗೆ ಉಚಿತವಾಗಿ ಪ್ರತಿ ಬೆಳೆಯ ಹುಲ್ಲು ನೀಡುತ್ತಿರುವ ನಿಟ್ಟೂರು, ಜಿಗಳಿ, ಕುಂಬಳೂರು ಮತ್ತು ವಿನಾಯಕ ನಗರ ಕ್ಯಾಂಪಿನ ದಾನಿಗಳನ್ನು ಅಭಿನಂದಿಸಿ, ಅವರ ಸೇವೆಯನ್ನು ಕೊಂಡಾಡಿದರು.

ಚಿತ್ರದುರ್ಗದ ಶ್ರೀ ಕಬೀರಾನಂದ ಆಶ್ರಮದ ಶ್ರೀ ಶಿವಲಿಂಗಾನಂದ ಸ್ವಾಮೀಜಿ, ಶಾಸಕ ಬಿ.ಪಿ.ಹರೀಶ್, ಮಾಜಿ ಶಾಸಕ ಹೆಚ್.ಎಸ್.ಶಿವಶಂಕರ್, ಎಪಿಎಂಸಿ ಮಾಜಿ ಅಧ್ಯಕ್ಷ ಜಿ.ಮಂಜುನಾಥ್ ಪಟೇಲ್, ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ನಿಟ್ಟೂರು ಗ್ರಾಮದ ಮುಖಂಡರಾದ ಕೆ. ರಾಮಪ್ಪ, ಕೆ.ಸಂಜೀವಮೂರ್ತಿ, ಕೆ.ಏಕಾಂತಪ್ಪ, ಎನ್.ಜಿ. ಬಸವನಗೌಡ್ರು, ಇ.ಎಂ.ಮರುಳಸಿದ್ದೇಶ್, ಬಿ.ಜಿ.ಧನಂಜಯ್, ಎಸ್.ಜಿ.ಪ್ರಭುದೇವ್, ಅಬ್ಬಾರಾವ್, ಎ.ಅಂಜಿನಪ್ಪ, ಕೆ.ತಿಪ್ಪೇಶ್, ಹರಳಹಳ್ಳಿಯ ಕೃಷ್ಣಪ್ಪ, ಕುಂಬಳೂರಿನ ಬಿ.ಶಂಭುಲಿಂಗಪ್ಪ, ಜಿಗಳಿಯ ಬಿ.ಎಂ.ದೇವೇಂದ್ರಪ್ಪ, ಮುದ್ದಪ್ಪ ಮಂಜುನಾಥ್, ಪತ್ರಕರ್ತ ಪ್ರಕಾಶ್, ಮಲೇಬೆನ್ನೂರಿನ ಪಿ.ಹೆಚ್.ಶಿವಕುಮಾರ್, ಪೂಜಾರ್ ಮಹೇಶ್ ಸೇರಿದಂತೆ ಇನ್ನೂ ಅನೇಕರು ಈ ಸಂದರ್ಭದಲ್ಲಿ ಹಾಜರಿದ್ದರು.

# ರೈತರ ಅಭ್ಯುದಯವೇ ಕೃಷಿ ವಿ.ವಿ ಗಳ ಮೂಲ ಆಶಯ

## ವಿ.ವಿ ಉಪಕುಲಪತಿಗಳು, ಅಧಿಕಾರಿಗಳ ಸಭೆಯಲ್ಲಿ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ

ಬೆಂಗಳೂರು,ಫೆ.24- ರೈತರ ಅಭ್ಯುದಯವೇ ಕೃಷಿ ವಿಶ್ವವಿದ್ಯಾಲಯಗಳ ಮೂಲ ಆಶಯವಾಗಿದ್ದು, ಇದಕ್ಕೆ ಪೂರಕವಾಗಿ ಪರಸ್ಪರ ಸಮನ್ವಯತೆಯಿಂದ ಕಾರ್ಯನಿರ್ವಹಿಸುವಂತೆ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಇಂದಿಲ್ಲಿ ಸೂಚಿಸಿದ್ದಾರೆ.

ವಿವಿಧ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳ ಉಪಕುಲಪತಿಗಳು ಹಾಗೂ ಇಲಾಖಾ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಸ್ವಹಿತಾಸಕ್ತಿ ಬದಿಗೊತ್ತಿ ಸಾರ್ವಜನಿಕ ಪ್ರಾಮುಖ್ಯತೆಗೆ ಆದ್ಯತೆ ನೀಡಬೇಕು ಎಂದರು.

ವಿದ್ಯಾರ್ಥಿಗಳು, ರೈತರು ಹಾಗೂ ಕೃಷಿ ವಿಶ್ವವಿದ್ಯಾಲಯಗಳ ಹಿತದೃಷ್ಟಿಯಿಂದ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳ ಪುನರ್ವಿಂಗಡಣೆ ಬಗ್ಗೆ ಚಿಂತನೆ ನಡೆಸಿ, ಸಮಿತಿ ರಚಿಸಲಾಗಿದೆ, ವರದಿ ಆಧರಿಸಿ ಸಚಿವ ಸಂಪುಟದ ಸಭೆಯಲ್ಲಿ ಚರ್ಚಿಸಿ ಸರ್ಕಾರ ನಿರ್ಧಾರ ಕೈಗೊಳ್ಳಲಿದೆ.

ಎಲ್ಲಾ ಜಿಲ್ಲೆಗಳು ಮತ್ತು ವಿಶ್ವವಿದ್ಯಾಲಯಗಳ ಹಿತಾಸಕ್ತಿಗೆ ಗಮನಹರಿಸಿ ಸರ್ಕಾರ ನಿರ್ಧಾರ ಕೈಗೊಳ್ಳಲಿದೆ.

ಕೃಷಿ ವಿಶ್ವವಿದ್ಯಾಲಯಗಳು ಸಂಶೋಧನೆ ಮತ್ತು ಪ್ರಾತ್ಯಕ್ಷಿಕೆಗಳಿಗೆ ಹೆಚ್ಚು ಆದ್ಯತೆ ನೀಡಬೇಕು, ರೈತರನ್ನು ತಾಂತ್ರಿಕವಾಗಿ ಸಶಕ್ತರನ್ನಾಗಿಸಿ ಕೃಷಿ ಕ್ಷೇತ್ರ ಸದೃಢಗೊಳಿಸಬೇಕು, ನಿಶ್ಚಿತ ಲಾಭದಾಯಕ ಉದ್ಯಮವನ್ನಾಗಿ ಪರಿವರ್ತಿಸಬೇಕು.

ವಿಶ್ವವಿದ್ಯಾಲಯಗಳು ಎದುರಿಸುತ್ತಿರುವ ತಾಂತ್ರಿಕ, ಆಡಳಿತಾತ್ಮಕ ಮತ್ತು ಆರ್ಥಿಕ ಸಮಸ್ಯೆ ಹಾಗೂ ಸವಾಲುಗಳ ಕುರಿತು ಆದ್ಯತೆ ಮೇರೆಗೆ ಪಟ್ಟಿ ಮಾಡಿ ಪ್ರಸ್ತಾವನೆ ಸಿದ್ಧಪಡಿಸಿದರೆ, ಮಾರ್ಚ್ ನಂತರ ಮುಖ್ಯಮಂತ್ರಿ ಹಾಗೂ ಸಂಬಂಧಪಟ್ಟ ವರೊಂದಿಗೆ ಚರ್ಚಿಸುವುದಾಗಿ ತಿಳಿಸಿದರು.

ಮಂಡ್ಯ ವಿ.ಸಿ. ಫಾರಂನಲ್ಲಿ ಹೊಸದಾಗಿ ಪ್ರಾರಂಭಿಸಲು ಉದ್ದೇಶಿಸಿರುವ ಸಮಗ್ರ ವಿಶ್ವವಿದ್ಯಾಲಯ ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಕಾರ್ಯಾರಂಭ ಮಾಡಲಿದೆ, ಅದಕ್ಕಾಗಿ ಈಗಾಗಲೇ ಎಲ್ಲಾ ತಯಾರಿ ನಡೆಯುತ್ತಿದೆ, ಇದೇ ರೀತಿ ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳನ್ನು ಬಲಪಡಿಸುವುದು ಸರ್ಕಾರದ ಉದ್ದೇಶವಾಗಿದೆ, ಅದಕ್ಕಾಗಿ ತಜ್ಞರ ಸಮಿತಿ ರಚಿಸಲಾಗುತ್ತಿದೆ ಎಂದರು.

# ಮೈಕ್ರೋ ಫೈನಾನ್ಸ್‌ಗಳ ಸಾಲ ವಸೂಲಾತಿ ದೌರ್ಜನ್ಯ ಖಂಡಿಸಿ ರೈತರ ಪ್ರತಿಭಟನೆ



ಜಗಳೂರು

ಜಗಳೂರು, ಫೆ. 24 - ಮೈಕ್ರೋ ಫೈನಾನ್ಸ್ ಗಳ ಸಾಲ ವಸೂಲಾತಿ ದೌರ್ಜನ್ಯ ಖಂಡಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ (ಹುಚ್ಚವ್ವನಹಳ್ಳಿ ಮಂಜುನಾಥ್) ಬಣದ ನೇತೃತ್ವದಲ್ಲಿ ರೈತರು ಪ್ರತಿಭಟನೆ ನಡೆಸಿದರು.


ಸೋಮವಾರ ಪಟ್ಟಣದ ಪ್ರವಾಸಿ ಮಂದಿರದಿಂದ ಹೊರಟ ಪ್ರತಿಭಟನಾಕಾರರು ಮಹಾತ್ಮಗಾಂಧಿ ವೃತ್ತ, ಅಂಬೇಡ್ಕರ್ ವೃತ್ತದ ಮೂಲಕ ಫೈನಾನ್ಸ್ ಗಳ ವಿರುದ್ಧ ದಿಕ್ಕಾರ ಕೂಗುತ್ತಾ ತಾಲ್ಲೂಕು ಕಛೇರಿ ಮುಂಭಾಗ ಜಮಾಯಿಸಿ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿದರು.

ತಾಲ್ಲೂಕಿನಲ್ಲಿ ಮೈಕ್ರೋ ಫೈನಾನ್ಸ್ ಸಂಸ್ಥೆಗಳಾದ ಎಲ್ ಎನ್ ಟಿ, ಚೈತನ್ಯ, ಡಿಸಿಬಿ, ಧರ್ಮಸ್ಥಳ, ಎಸ್ ಕೆಎಸ್, ಬೇಲ್ ಸ್ಟಾರ್, ಗ್ರಾಮೀಣ ಕೂಟ, ನಬಾರ್ಡ್, ಮುತ್ತೂಟ್ ಸೇರಿದಂತೆ ಇನ್ನಿತರೆ ಖಾಸಗಿ ಫೈನಾನ್ಸ್‌ಗಳ ವಸೂಲಿಗಾರರು ರೈತರಿಂದ ಬಲವಂತವಾಗಿ ಹಣ ವಸೂಲಿ ಮಾಡುತ್ತಿರುವುದರಿಂದ ಮನ ನೊಂದು ರೈತರು ಆತ್ಮಹತ್ಯೆಯತ್ತ ಮುಖ ಮಾಡುತ್ತಿದ್ದಾರೆ ಎಂದು ಸಂಘಟನೆ ಜಿಲ್ಲಾ ಕಾರ್ಯದರ್ಶಿ ಗೌಡಗೊಂಡನಹಳ್ಳಿ ಸತೀಶ್ ತಿಳಿಸಿದರು.

ಟ್ರ್ಯಾಕ್ಟರ್ ಗಳನ್ನು ಗೂಂಡಾಗಳನ್ನು ಬಿಟ್ಟು ಸೀಜ್ ಮಾಡಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಅತಿವೃಷ್ಟಿಯಿಂದ ರೈತ ಕಾರ್ಮಿಕರು, ಮಹಿಳೆಯರು ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದು, ಬದುಕು ದುಸ್ತರವಾಗಿದೆ. ಉದ್ಯೋಗ ಅರಸಿ ಗುಳೆ ಹೋಗುತ್ತಿದ್ದಾರೆ. ಈ ಮಧ್ಯೆ ಫೈನಾನ್ಸ್ ಗಳ ಸಾಲ ವಸೂಲಾತಿ ಕಿರುಕುಳಕ್ಕೆ ಕೂಡಲೇ ಕಡಿವಾಣ ಹಾಕಬೇಕು, ಕಾಲಾವಕಾಶ ನೀಡಬೇಕು ಎಂದು ಒತ್ತಾಯಿಸಿದರು.

ಸಂಘಟನೆ ತಾಲ್ಲೂಕು ಅಧ್ಯಕ್ಷ ಚಿರಂಜೀವಿ ಸಿಎಂ ಹೊಳೆ, ತಾಲ್ಲೂಕು ಪ್ರಧಾನ ಕಾರ್ಯದರ್ಶಿ ರಾಜನಹಟ್ಟಿ ರಾಜು, ಪದಾಧಿಕಾರಿಗಳಾದ ಕಾನನಕಟ್ಟೆ ತಿಪ್ಪೇಸ್ವಾಮಿ, ಅಂಜಿನಪ್ಪ, ಅನಿಲ್ ಕುಮಾರ್, ಹುಸೇನ್ ಪೀರ್, ಬಸವರಾಜ್, ಮಲ್ಲೇಶ್, ವೀರೇಶ್, ಪರಶುರಾಮಪ್ಪ ಮುಂತಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# ಮಾವಿನಹೊಳೆಯಲ್ಲಿ ಶ್ರೀ ಗುರು ಮಹಾರುದ್ರಸ್ವಾಮಿ ಮಹಾಶಿವರಾತ್ರಿ ಮಹೋತ್ಸವ



ಚನ್ನಗಿರಿ, ಫೆ.24- ಚನ್ನಗಿರಿ ತಾಲ್ಲೂಕು ಸುಕ್ಷೇತ್ರ ಮಾವಿನಹೊಳೆ ಶ್ರೀ ಗುರು ಮಹಾರುದ್ರಸ್ವಾಮಿ ಮಹಾಶಿವರಾತ್ರಿ ಮಹೋತ್ಸವ ಕಾರ್ಯಕ್ರಮವು ನಾಡಿದ್ದು ದಿನಾಂಕ 26 ರಿಂದ 28 ರವರೆಗೆ ನಡೆಯಲಿದೆ.

ದಿನಾಂಕ 26ರ ಬುಧವಾರ ರಾತ್ರಿ ಶ್ರೀ ರೇಣುಕಾ ಶಿವಾಚಾರ್ಯ ಸ್ವಾಮೀಜಿ ತಾವರಗೆರೆ, ಶಿಲಾಮಠಾಧ್ಯಕ್ಷರು ಅವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಗುರುಮಹಾರುದ್ರಸ್ವಾಮಿ, ಅಡ್ಡಪಲ್ಲಕ್ಕಿ ಉತ್ಸವವು ಬಾಣ ಬಿರುಸು, ಮಂಗಳವಾದ್ಯ, ಡೊಳ್ಳು ಕುಣಿತ, ವೀರಗಾಸೆ ನೃತ್ಯಗಳೊಂದಿಗೆ ಶ್ರೀ ಮಠಕ್ಕೆ ಆಗಮಿಸುವುದು. ನಂತರ ಬೆಳಗಿನ ಜಾವ ಶ್ರೀ ಮಲ್ಲಿಕಾರ್ಜುನ ಸ್ವಾಮಿಗೆ ಮಹಾ ರುದ್ರಾಭಿಷೇಕ, ಅಷ್ಟೋತ್ತರ, ಸಹಸ್ರ ಬಿಲ್ವಾರ್ಚನೆ ಪಾದ ಪೂಜೆ ಪ್ರಸಾದ ವಿನಿಯೋಗ ಕಾರ್ಯಕ್ರಮ ನಡೆಯುವವು. ದಿನಾಂಕ 27ರ ಗುರುವಾರ ಬೆಳಿಗ್ಗೆ 8 ಗಂಟೆಗೆ ಶ್ರೀ ಗುರುಮಹಾರುದ್ರಸ್ವಾಮಿ ಅಭಿಷೇಕ, ಮಹಾಪೂಜೆ, ಮಂಗಳಾರತಿ ಮತ್ತು ಪ್ರಸಾದ ವಿನಿಯೋಗ ಜರುಗುವವು. ದಿನಾಂಕ 28ರ ಶುಕ್ರವಾರದಂದು ಬೆಳಿಗ್ಗೆ 11.30 ರಿಂದ ಭದ್ರಕಾಳಿ ಅಮ್ಮನವರ ಜಾತ್ರೆ ಮತ್ತು ಪ್ರಸಾದ ವಿನಿಯೋಗವಿರುತ್ತದೆ.

# ಗೋವಾದ ಶ್ರೀ ವಿಮಲೇಶ್ವರ ಸಮಿತಿಗೆ ಉಪಾಧ್ಯಕ್ಷರಾಗಿ ರೇವಣಕರ್ ಆಯ್ಕೆ



ದಾವಣಗೆರೆ, ಫೆ. 24- ಗೋವಾದ ರೇವಣದ ಶ್ರೀ ವಿಮಲೇಶ್ವರ ದೇವಸ್ಥಾನದ ಸಭಾಂಗಣದಲ್ಲಿ ಇತ್ತೀಚೆಗೆ ನಡೆದ ಸರ್ವ ಸದಸ್ಯರ ಮಹಾಸಭೆ ಯಲ್ಲಿ ದಾವಣಗೆರೆಯ ಡಾ. ಅರುಣಾಚಲ ಎನ್.ರೇವಣಕರ್ ಅವರು ಸರ್ವಾನುಮತದಿಂದ ಅವಿರೋಧವಾಗಿ ಉಪಾಧ್ಯಕ್ಷರಾಗಿ ಪುನರಾಯ್ಕೆಯಾಗಿದ್ದಾರೆ ಎಂದು ಸಮಿತಿಯ ಅಧ್ಯಕ್ಷ ರಾಮನಾಥ ಪ್ರಭು ದೇಸಾಯಿ ತಿಳಿಸಿದ್ದಾರೆ.

ದೈವಜ್ಞ ಸಮಾಜದ ರೇವಣಕರ ಪರಿವಾರದ ಪದಾಧಿಕಾರಿಗಳು, ಸರ್ವ ಸದಸ್ಯರು ಅಭಿನಂದನೆ ಸಲ್ಲಿಸಿದ್ದಾರೆ.

ಸರ್ವ ಸದಸ್ಯರ ಮಹಾಸಭೆಯಲ್ಲಿ ಸಮಿತಿಯ ಪ್ರಧಾನ ಕಾರ್ಯದರ್ಶಿ ದಿಗಂಬರ ಪ್ರಭು ದೇಸಾಯಿ, ಖಜಾಂಚಿ ನಾರಾಯಣ ಜಿ.ಪ್ರಭು ದೇಸಾಯಿ, ಸಹ ಕಾರ್ಯದರ್ಶಿ ಮಧುರ ಎನ್.ಪ್ರಭು ದೇಸಾಯಿ, ಸಮಿತಿ ಸದಸ್ಯರಾದ ಜಯಂತ್ ಪ್ರಭು ದೇಸಾಯಿ, ಮಹೇಲ ಕೆ.ರೇವಣಕರ್, ದಾವಣಗೆರೆಯ ನಲ್ಲೂರು ಲಕ್ಷ್ಮಣರಾವ್ ನರಹರಿ ರೇವಣಕರ್ ಮುಂತಾದವರು ಉಪಸ್ಥಿತರಿದ್ದರು.

# ಚಂದ್ರಶೇಖರ ಶ್ರೀಗಳ ಅಗಲಿಕೆಗೆ ರಂಭಾಪುರಿ ಜಗದ್ಗುರುಗಳ ಸಂತಾಪ



ಬಾಳೆಹೊನ್ನೂರು, ಫೆ. 24- ಹಾಸನ ಜಿಲ್ಲೆ ಕರ್ಪೂರವಳ್ಳಿ ಜಂಗಮ ಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ತಮ್ಮ 69ನೇ ವಯಸ್ಸಿನಲ್ಲಿ ಹಠಾತ್ತಾಗಿ ಹೃದಯಾಘಾತದಿಂದ ಶಿವೈಕ್ಯರಾಗಿರುವುದಕ್ಕೆ ಬಾಳೆಹೊನ್ನೂರು ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಧಾರ್ಮಿಕ ಶೈಕ್ಷಣಿಕ ಸಾಮಾಜಿಕ ಕ್ಷೇತ್ರಗಳಲ್ಲಿ ಉತ್ತಮ ಕಾರ್ಯ ಮಾಡಿದ ಕೀರ್ತಿ ಶ್ರೀಗಳಿಗೆ ಸಲ್ಲುತ್ತದೆ. ಕರ್ಪೂರವಳ್ಳಿ ಜಂಗಮ ಮಠವು ಶ್ರೀ ರಂಭಾಪುರಿ ಪೀಠದ ಶಾಖಾ ಮಠವಾಗಿದ್ದು, ಅವರ ಉತ್ತರಾಧಿಕಾರಿ ನೇಮಕದ ಬಗ್ಗೆ ತಮ್ಮೊಂದಿಗೆ ಇತ್ತೀಚೆಗೆ ಚರ್ಚಿಸಿ ದೃಢಪಡಿಸಿದ್ದರು.

ಶ್ರೀಗಳು ಶ್ರೀ ರಂಭಾಪುರಿ ಪೀಠದ ಮೇಲೆ ಅಪಾರ ಅಭಿಮಾನ ಹೊಂದಿದವರಾಗಿದ್ದು, ಶ್ರೀ ಪೀಠದ ಹಲವಾರು ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದರು. ವೀರಶೈವ-ಗುರು ಪೀಠ ಪರಂಪರೆಯಂತೆ ಅವರ ಕ್ರಿಯಾ ಸಮಾಧಿ ಹಾಗೂ ಉತ್ತರಾಧಿಕಾರಿ ನಿಯುಕ್ತಿ ಮಾಡಲಾಗುವುದೆಂದು ಅವರು ತಿಳಿಸಿದ್ದಾರೆ.

# ಮಲೇಕುಂಬಳೂರಿನಲ್ಲಿ ರಥೋತ್ಸವ ಸಾಮೂಹಿಕ ವಿವಾಹ



ಹೊನ್ನಾಳಿ, ಫೆ.24- ನೂತನ ದಂಪತಿಗಳು ಸಾಮರಸ್ಯದಿಂದ ಜೀವನ ಸಾಗಿಸಬೇಕು. ಇಬ್ಬರು ಸಮಾನವಾಗಿ ಚಿಂತನೆ ನಡೆಸಿ ಮುಂದೆ ನಡೆಯಬೇಕು. ಸಣ್ಣ-ಪುಟ್ಟ ವಿಷಯಗಳಿಗೆ ವೈಮನಸ್ಸು ತಂದುಕೊಳ್ಳಬಾರದೆಂದು ಮಲೇಕುಂಬಳೂರು ಗ್ರಾಮದ ಮುಖಂಡ ಕೆ.ಬಿ.ರಾಜಶೇಖರ್ ಹೇಳಿದರು.

ತಾಲ್ಲೂಕಿನ ಮಲೇಕುಂಬಳೂರು ಗ್ರಾಮದ ಶ್ರೀ ಆಂಜನೇಯ ಸ್ವಾಮಿ ರಥೋತ್ಸವದ ಅಂಗವಾಗಿ ದೇವಸ್ಥಾನದ ಅವರಣದಲ್ಲಿ ನಡೆದ 2 ಜೊತೆ ಸರಳ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರತಿ ವರ್ಷ ನಮ್ಮ ಗ್ರಾಮದಲ್ಲಿ ಶ್ರೀ ಆಂಜನೇಯ ಸ್ವಾಮಿ ರಥೋತ್ಸವ ನಡೆಯುತ್ತದೆ.

ಗ್ರಾಮದ ಹಿರಿಯರೆಲ್ಲಾ ಸೇರಿ ಗ್ರಾಮದ ಜನರಿಗೆ ಅನುಕೂಲವಾಗಲೆಂದು ಸರಳ ಸಾಮೂಹಿಕ ವಿವಾಹ ಕಾರ್ಯಕ್ರಮ ನಡೆಸಲು ತೀರ್ಮಾನಿಸಿದ್ದು, ಅದರಂತೆ ಪ್ರತಿ ವರ್ಷ ವಿವಾಹ ಕಾರ್ಯಕ್ರಮ ನಡೆಯುತ್ತದೆ. ಇದರಲ್ಲಿ ಗ್ರಾಮದವರು ನೂತನ ವಧು-ವರರಿಗೆ ತಾಳಿ, ಬಟ್ಟೆಯನ್ನು ದೇಣಿಗೆ ರೂಪದಲ್ಲಿ ನೀಡುತ್ತಾರೆಂದರು.

ಶ್ರೀ ಮಾರುತಿ ಯುವಕರ ಅನ್ನ ದಾಸೋಹ ಟ್ರಸ್ಟ್ ಕಮಿಟಿಯಿಂದ ಬಂದ ಭಕ್ತರಿಗೆ ದಾಸೋಹದ ವ್ಯವಸ್ಥೆ ಮಾಡಲಾಗಿತ್ತು. ಈ ಸಂದರ್ಭದಲ್ಲಿ ಗ್ರಾಮದ ಹಿರಿಯ ಮುಖಂಡರಾದ ಕೆ.ಆರ್.ವರದರಾಜ್, ಎನ್.ಹೆಚ್. ಕೃಷ್ಣಪ್ಪ, ಬಿ.ಹೆಚ್.ವಾಗೀಶ್, ಜಿ.ಆರ್.ಪ್ರಕಾಶ್, ಎಚ್.ಬಿ.ಸೋಮಶೇಖರ್, ಸುಧಾಕರ್, ಅಣ್ಣಪ್ಪ, ಟಿ.ಎಸ್.ಕೃಷ್ಣಪ್ಪ, ಟಿ.ಲಕ್ಷ್ಮೀಪತಿ, ಗೋವಿಂದರಾಜು, ಕೆ.ಎಸ್.ರಂಗನಾಥಸ್ವಾಮಿ, ಜಿ.ಶ್ರೀನಿವಾಸ್, ತಿಪ್ಪೇಸ್ವಾಮಿ, ಷಣ್ಮುಖಪ್ಪ, ಹನುಮಂತಪ್ಪ ಇನ್ನಿತರರಿದ್ದರು.

# ಗೋವಿನಹಾಳ್ : ಮಕ್ಕಳ ಕಲಿಕಾ ಹಬ್ಬ

ಮಲೇಬೆನ್ನೂರು ಸಮೀಪದ ಗೋವಿನಹಾಳ್ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇಂದು ಬೆಳಗ್ಗೆ 11 ಗಂಟೆಗೆ ಕೊಕ್ಕನೂರು ಕ್ಲಸ್ಟರ್ ಮಟ್ಟದ ಎಫ್.ಎಲ್.ಎನ್ ಕಲಿಕಾ ಹಬ್ಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಿಆರ್‌ಪಿ ಬಸವರಾಜಯ್ಯ ಮತ್ತು ಶಾಲಾ ಶಿಕ್ಷಕ ಸಿದ್ದಪ್ಪ ಸಂಗಣ್ಣನವರ್ ತಿಳಿಸಿದ್ದಾರೆ.

# ರೆಡ್ ಕ್ರಾಸ್‌ನಿಂದ ಇನ್ನೂ ಹೆಚ್ಚಿನ ಸಮಾಜಮುಖಿ ಕಾರ್ಯಗಳು ನಡೆಯಲಿ

ದಾವಣಗೆರೆ, ಫೆ. 24- ದಾವಣಗೆರೆ ವಾಣಿಜ್ಯ ನಗರವಾಗಿದೆ. ದಾನಿಗಳೂ ಸಹಾ ಇದ್ದಾರೆ. ಇಲ್ಲಿ ಕೂಡಾ ಸಾಕಷ್ಟು ಬಡವರು, ಅಸಹಾಯಕರು, ನೆರವು ಕೇಳುವಂತಹ ಜನರು ಇದ್ದಾರೆ. ಅವರನ್ನು ದೃಷ್ಟಿಯಲ್ಲಿಟ್ಟುಕೊಂಡು ನಾವು ರೆಡ್‌ಕ್ರಾಸ್ ಸಂಸ್ಥೆಯಿಂದ ಮುಂದೆ ಯಾವ ರೀತಿಯ ಕಾರ್ಯ ಯೋಜನೆ ರೂಪಿಸಿಕೊಳ್ಳಬೇಕು. ಈ ಜಿಲ್ಲೆಗೆ ಒಳ್ಳೆಯದಾಗುವಂತಹ ಕೆಲಸವನ್ನು ಮಾಡಬೇಕೆನ್ನುವುದರ ಬಗ್ಗೆ ನಾವು, ನೀವು ಚಿಂತನೆ ಮಾಡುವುದು ತುಂಬಾ ಅಗತ್ಯವಿದೆ ಎಂದು ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್ ಹೇಳಿದರು.

ನಗರದ ಎಂಸಿಸಿ ಬಿ ಬ್ಲಾಕ್‌ನಲ್ಲಿರುವ ಐಎಂಎ ಸಭಾಂಗಣದಲ್ಲಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಜಿಲ್ಲಾ ಶಾಖೆಯ ವಾರ್ಷಿಕ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಸೇವಾ ಕಾರ್ಯಗಳ ಮೂಲಕ ಇಡೀ ದೇಶವಲ್ಲದೇ, ರಾಷ್ಟ್ರದಾದ್ಯಂತ ಉತ್ತಮ ಹೆಸರು ಗಳಿಸಿದೆ. ರೆಡ್ ಕ್ರಾಸ್ ಸಂಸ್ಥೆ ಜಾಗತಿಕ ಮಹಾಯುದ್ಧಗಳು ನಡೆದ ಸಂದರ್ಭದಲ್ಲಿ ನಿರಾಶ್ರಿತರಾದವರು, ಅಸಹಾಯಕರಿಗೆ ನೆರವು ನೀಡುವ ಉದ್ದೇಶದಿಂದ ಹೆನ್ರಿ ಡ್ಯುನಾಂಟ್ ಸ್ಥಾಪಿಸಿದ ಸಂಸ್ಥೆ ಇದಾಗಿದೆ. ನಮ್ಮಿಂದ ಈ ಸಮಾಜಕ್ಕೆ ಎಷ್ಟು ಸಾಧ್ಯವೋ ಅಷ್ಟು ಸೇವೆ ಸಲ್ಲಿಸುವುದು ಈ ಸಂಸ್ಥೆ ಸದಸ್ಯರ ಉದ್ದೇಶವಾಗಿದೆ. ಯಾವ ಧ್ಯೇಯೋದ್ದೇಶಗಳನ್ನು ಇಟ್ಟುಕೊಂಡು ಈ ಸಂಸ್ಥೆಯನ್ನು ಕಟ್ಟಲಾಗಿದೆಯೋ, ಆ ನಿಟ್ಟಿನಲ್ಲಿ ಎಲ್ಲರ ಭಾವನೆಗಳಿಗೆ ಗೌರವ ನೀಡಿ, ಎಲ್ಲರೂ ಸೇರಿ ಒಂದು ಇತ್ಯರ್ಥಕ್ಕೆ ಬಂದು, ಎಲ್ಲರೂ ಒಮ್ಮನಸ್ಸಿನಿಂದ ಮುಂದುವರೆಸಿಕೊಂಡು ಹೋಗೋಣ ಎಂದು ಆಶಿಸಿದರು.

ರೆಡ್‌ಕ್ರಾಸ್ ಸಂಸ್ಥೆ ಹಿರಿಯ ಸದಸ್ಯ, ದೂಡಾ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ಮಾತನಾಡಿ, ಇಡೀ ದೇಶದಲ್ಲಿ ಒಂದು ಒಳ್ಳೆಯ ಕೆಲಸ ಆಗುತ್ತೆ ಎಂದರೆ ಅದು ರೆಡ್ ಕ್ರಾಸ್ ನಿಂದ ಎಂದು ತಿಳಿದಿದ್ದಾರೆ. ನಾನೂ ಕೂಡಾ ಲಿಯೋ ಸಂಸ್ಥೆಯಲ್ಲಿ ಒಂದು ಟೀಂ ಮಾಡಿಕೊಂಡು ರಕ್ತದಾನ ಇರಬಹುದು ಇತರೆ ಸೇವಾ ಕಾರ್ಯಗಳಿಗೆ ಎಲ್ಲರೂ ಕೈ ಜೋಡಿಸಿ ಸೇವೆ ಮಾಡಿಕೊಂಡು ಬಂದಿದ್ದೇವೆ. ನಾನೂ ಸಹಾ 62 ಬಾರಿ ರಕ್ತದಾನ ಮಾಡಿದ್ದೇನೆ. ರಕ್ತದಾನದ ಬಗ್ಗೆ ಜಾಗೃತಿ ಇರಬಹುದು, ಇತರೆ ಆರೋಗ್ಯಕರ ಸೇವಾ ಕಾರ್ಯಗಳನ್ನು ಬಡವರಿಗೆ, ಸಾರ್ವಜನಿಕರಿಗೆ ರೆಡ್‌ಕ್ರಾಸ್ ಸಂಸ್ಥೆ ಮಾಡುತ್ತಾ ಬಂದಿದೆ. ಒಳ್ಳೆಯ ಕೆಲಸಗಳನ್ನು ಮಾಡಿದಾಗ ಕೇಂದ್ರ ರೆಡ್‌ಕ್ರಾಸ್ ಶಾಖೆ, ಸ್ಮಾರ್ಟ್ ಸಿಟಿ, ಪಾಲಿಕೆ, ಜೊತೆಗೆ ನಮ್ಮ ದೂಡಾದಿಂದ ನಾವು ಸಹಕಾರ ನೀಡಲು ಮುಂದೆ ಬರುತ್ತಾರೆ. ಅದನ್ನು ಉಳಿಸಿಕೊಂಡು ಹೋಗುವಂತಹ ಕೆಲಸ ನಿಮ್ಮಿಂದ ಆಗಬೇಕು ಎಂದು ಹೇಳಿದರು.



## ಜಿಲ್ಲಾ ರೆಡ್ ಕ್ರಾಸ್ ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್ ಆಶಯ

ಸಂಸ್ಥೆ ಸಭಾಪತಿ ಡಾ.ಎ.ಎಂ. ಶಿವಕುಮಾರ ಪ್ರಾಸ್ತಾವಿಕವಾಗಿ ಮಾತನಾಡಿ, ಇಲ್ಲಿಯವರೆಗೆ ರೆಡ್ ಕ್ರಾಸ್ ಸಂಸ್ಥೆ ರಕ್ತದಾನ, ರಕ್ತದಾನ ಕುರಿತು ಅರಿವು, ರಕ್ತದ ಗುಂಪು ತಪಾಸಣೆ, ಪ್ರಥಮ ಚಿಕಿತ್ಸೆ, ಆರೋಗ್ಯ ಶಿಬಿರ, ಕೋವಿಡ್ ಸಂದರ್ಭದಲ್ಲಿ ಮಾಸ್ಕ್ ವಿತರಣೆ, ಆಹಾರ, ದಿನಸಿ ಕಿಟ್ ವಿತರಣೆ, ಆಹಾರ ಪ್ಯಾಕೇಟ್ ವಿತರಣೆ ಸೇರಿದಂತೆ ಹಲವಾರು ಸಮಾಜಮುಖಿ ಕಾರ್ಯಗಳನ್ನು ಮಾಡುತ್ತಾ ಬಂದಿದೆ. ನಮ್ಮ ಸಂಸ್ಥೆಯ ಚಟುವಟಿಕೆಗಳನ್ನು ನೋಡಿ ಸ್ಮಾರ್ಟ್ ಸಿಟಿಯಿಂದ ನಮ್ಮ ರಕ್ತನಿಧಿ ಕೇಂದ್ರಕ್ಕೆ ಹೊಸ ತಂತ್ರಜ್ಞಾನದ ಯಂತ್ರಗಳನ್ನು ನೀಡಲಾಗಿದೆ. ನಮ್ಮ ಸಂಸ್ಥೆಯಿಂದ ರಕ್ತವನ್ನು ರಿಯಾಯಿತಿ ದರದಲ್ಲಿ, ಕೆಲವರಿಗೆ ಉಚಿತವಾಗಿ ನೀಡುತ್ತಾ ಬಂದಿದ್ದೇವೆ. ಹಲವಾರು ಸಂಘ-ಸಂಸ್ಥೆ, ಹಳೆ ವಿದ್ಯಾರ್ಥಿಗಳ ಸಂಘದವರು ಆಂಬ್ಯುಲೆನ್ಸ್ ವ್ಯಾನ್, ಆಕ್ಸಿಜನ್ ಕಾನ್ಸಂಟ್ರೇಟರ್‌ಗಳನ್ನು ನೀಡಿದ್ದಾರೆ. ಜನರ ಸೇವೆಗೆ ರೆಡ್ ಕ್ರಾಸ್ ಸಂಸ್ಥೆ ಸದಾ ಇರುತ್ತದೆ ಎಂದು ತಿಳಿಸಿದರು.

ಪಾಲಿಕೆ ಮೇಯರ್ ಕೆ.ಚಮನ್‌ಸಾಬ್, ಜಿಪಂ ಯೋಜನಾ ನಿರ್ದೇಶಕರಾದ ರೇಷ್ಮಾ ಕೌಸರ್, ರೆಡ್‌ಕ್ರಾಸ್ ಸಂಸ್ಥೆಯ ಹಿರಿಯ ಸದಸ್ಯೆ ಕಿರುವಾಡಿ ಗಿರಿಜಮ್ಮ, ರಾಜ್ಯ ಸಮಿತಿ ಸದಸ್ಯ ಶಕೀಂ, ಕಾರ್ಯದರ್ಶಿ ಆನಂದ ಜ್ಯೋತಿ, ಖಜಾಂಚಿ ಅನಿಲ್ ಬಾರೆಂಗಳ್ ಮತ್ತು ಇತರರು ಉಪಸ್ಥಿತರಿದ್ದರು.

# ಟ್ರಂಪ್ ಆಡಳಿತದಿಂದ ಯುಎಸ್‌ಏಡ್ ಸಿಬ್ಬಂದಿ ವಜಾ

ವಾಷಿಂಗ್ಟನ್, ಫೆ. 24 - ಅಮೆರಿಕದ ಅಂತರರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆ (ಯುಎಸ್‌ಏಡ್) ಬಹುತೇಕ ಸಿಬ್ಬಂದಿಯನ್ನು ಟ್ರಂಪ್ ಆಡಳಿತ ವಜಾಗೊಳಿಸುವ ಇಲ್ಲವೇ ರಜೆಯ ಮೇಲೆ ಕಳಿಸುವ ಆದೇಶ ಹೊರಡಿಸಿದೆ.

ಆರು ದಶಕಗಳ ಹಳೆಯ ಈ ಯೋಜನೆಯನ್ನು ರದ್ದುಗೊಳಿಸಲು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಗೂ ಅಮೆರಿಕದ ಆಡಳಿತ ದಕ್ಷತಾ ಇಲಾಖೆಯ ಎಲಾನ್ ಮಸ್ಕ್ ತೆಗೆದುಕೊಂಡ ದೊಡ್ಡ ಕ್ರಮ ಇದಾಗಿದೆ.

ಅಮೆರಿಕ ಸರ್ಕಾರದ ಆಡಳಿತ ವೆಚ್ಚವನ್ನು ಗಣನೀಯವಾಗಿ ಕಡಿಮೆ ಮಾಡುವುದಾಗಿ ಟ್ರಂಪ್ ಹೇಳಿದ್ದರು.

ಅಮೆರಿಕ ಹಾಗೂ ವಿಶ್ವದಾದ್ಯಂತ ಇರುವ ಯುಎಸ್‌ಏಡ್ ಸಿಬ್ಬಂದಿಯನ್ನು ವಜಾಗೊಳಿಸಲು ಅಮೆರಿಕದ ಫೆಡರಲ್ ನ್ಯಾಯಾಧೀಶರು ಶುಕ್ರವಾರ ಅನುಮತಿ ನೀಡಿದ್ದರು. ವಜಾಗೊಳಿಸುವ ಅಮೆರಿಕ ಸರ್ಕಾರದ ನಿರ್ಧಾರವನ್ನು ತಾತ್ಕಾಲಿಕವಾಗಿ ತಡೆಯಬೇಕು ಎಂದು ಸಂಸ್ಥೆಯ ಸಿಬ್ಬಂದಿ ಮಾಡಿಕೊಂಡ ಮನವಿಯನ್ನು ತಳ್ಳಿ ಹಾಕಲಾಗಿತ್ತು.

ಸಂಸ್ಥೆಗೆ ಸಂಬಂಧಿಸಿದ ಮಹತ್ವದ ಕಾರ್ಯಗಳನ್ನು ನಿರ್ವಹಿಸುವ, ನಾಯಕತ್ವದ ಹುದ್ದೆಯಲ್ಲಿರುವ ಹಾಗೂ ನಿರ್ದಿಷ್ಟವಾಗಿ ರೂಪಿಸಲಾದ ಯೋಜನೆಗಳಲ್ಲಿ ಇರುವ ಸಿಬ್ಬಂದಿ ಹೊರತುಪಡಿಸಿ ಉಳಿದವರನ್ನು ಕೈ ಬಿಡಲಾಗಿದೆ.

ವಿದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಮೆರಿಕದ ಸಿಬ್ಬಂದಿ ಹಾಗೂ ಅವರ ಕುಟುಂಬದವರನ್ನು ವಾಪಸ್ ಕರೆಸುವ ಸಲುವಾಗಿ 600 ಉದ್ಯೋಗಿಗಳನ್ನು ಮಾತ್ರ ಮುಂದುವರೆಸಲಾಗುವುದು ಎಂದು ಸಂಸ್ಥೆಯ ಉಪ ಆಡಳಿತ ಅಧಿಕಾರಿ ಪೀಟ್ ಮೊರಾಕೋ ತಿಳಿಸಿದ್ದಾರೆ.


## ತಾಲ್ಲೂಕು ಪಂಚಾಯಿತಿ ಕಾರ್ಯಾಲಯ, ಹರಿಹರ–577602

ಫೋನ್ 08192–200836. eo_tp_har@yahoo.com

ಸಂ.ತಾಪಂಹ:ಅನಿಅನು/ಟೆಂ.ಪ್ರಕಟಣೆ/ಸಿಆರ್–1/2024–25
ದಿನಾಂಕ:19.02.2025

### ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ ಹರಿಹರ ಇವರಿಂದ 2024–25ನೇ ಸಾಲಿನ ಲೆಕ್ಕ ಶೀರ್ಷಿಕೆ: 2515–00–101–0–62–059ರಲ್ಲಿ ವೆಚ್ಚಭರಿಸಿ ತಾಲ್ಲೂಕು ಪಂಚಾಯತಿ ರಾಜ್ಯ ಹಣಕಾಸು ಆಯೋಗದ ಅನಿರ್ಬಂಧಿತ ಅನುದಾನ ಕ್ರಿಯಾ ಯೋಜನೆಯಡಿ ಅನುಮೋದನೆಯಾದ ಕಾರ್ಯಕ್ರಮ ಹರಿಹರ ತಾಲ್ಲೂಕಿನ ವಿವಿಧ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಗ್ರಾಮ ಪಂಚಾಯಿತಿಗಳ ಸಾರ್ವಜನಿಕ ಗ್ರಂಥಾಲಯಗಳಿಗೆ ಪಿಠೋಪಕರಣಗಳ ಸರಬರಾಜು ಮಾಡಲು ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ ಇ–ಟೆಂಡರ್‌ಗಾಗಿ ಇ–ಪ್ರಕ್ಯೂರ್‌ಮೆಂಟ್ ಸೆಲ್‌ನಲ್ಲಿ ನೋಂದಾಯಿಸಲ್ಪಟ್ಟ ಸರಬರಾಜುದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು Standard Tender Documents for E-Procurement/kppp portal of Goods/K/G-1 ನಮೂನೆಯಲ್ಲಿ ಉಲ್ಲೇಖದಂತೆ ಆಹ್ವಾನಿಸಲಾಗಿದೆ. ಇ–ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್ ಸೈಟ್ https://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

(1) ಇ–ಪ್ರೋಕ್ಯೂರ್‌ಮೆಂಟ್ ಪ್ರಕಟಣೆ ಪತ್ರ ಸಂಖ್ಯೆ, ಸಂ:ತಾಪಂಹ:ಟೆಂಡರ್ ಪ್ರಕಟಣೆ:ಸಿಆರ್–1:2024–25 ದಿನಾಂಕ: 19/02/2025 (2) ಇ–ಟೆಂಡರ್ (e-Procurement)ಗೆ ಸಂಬಂಧಿಸಿದ ದಾಖಲೆಗಳನ್ನು ಜಾಲಕ್ಕೆ ರವಾನಿಸಲು (upload) ಮಾಡಲು ಪ್ರಾರಂಭ ಮತ್ತು ಅಂತಿಮ ದಿ: 19–02–2025 ರಿಂದ ದಿನಾಂಕ: 01–03–2025ರ ಸಂಜೆ 5 ಗಂಟೆವರೆಗೆ. (3) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: 03–03–2025 ಬೆಳಿಗ್ಗೆ 11:00 ಗಂಟೆಗೆ ಸ್ಥಳ: ತಾಲ್ಲೂಕು ಪಂಚಾಯತಿ ಕಛೇರಿ ಹರಿಹರ (4) ಆರ್ಥಿಕ ಲಕೋಟೆಯನ್ನು ತೆರೆಯುವ ದಿನಾಂಕ ಮತ್ತು ಸ್ಥಳ:–ತಾಲ್ಲೂಕು ಪಂಚಾಯತಿ ಕಛೇರಿ ಹರಿಹರ (ತಾಂತ್ರಿಕ ಲಕೋಟೆಯ ಪರಿಶೀಲನೆಯ ನಂತರ ತೆರೆಯಲಾಗುವುದು) (5) ಟೆಂಡರ್‌ಗೆ ಮೀಸಲಿರಿಸಿದ ಅನುದಾನ ರೂ.13,34,997/– (6) ಇ.ಎಂ.ಡಿ ಮೊತ್ತ (2.5%) ರೂ. 33,375/– (7) ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಹರಿಹರ. ಮೊ: 9480863110: ಇ–ಮೇಲ್:– eo_tp_har@yahoo.com ಮೇಲಿನ ದಿನಾಂಕಗಳಂದು ಸಾರ್ವತ್ರಿಕ ರಜೆ ಇದ್ದಲ್ಲಿ/ಸಾರ್ವತ್ರಿಕ ರಜೆ ಎಂದು ಘೋಷಣೆಯಾದಲ್ಲಿ ಮುಂದಿನ ದಿನಾಂಕಗಳನ್ನು ಪರಿಗಣಿಸುವುದು.

ವಾಸಾಇ/ದಾವಣಗೆರೆ/786/ಕೆಎಸ್‌ಎಂಸಿಎ/2024–25

ಸಹಿ/– ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಹರಿಹರ.


# 1911ರ ಕುಂಭದಲ್ಲಿ ವಿಶ್ವದ ಮೊದಲ ವಿಮಾನ ಅಂಚೆ ವಿತರಣೆ

ಪ್ರಯಾಗ್‌ರಾಜ್, ಫೆ.24 - ಫೆಬ್ರವರಿ 18, 1911 ರಲ್ಲಿ ವಿಶ್ವದ ಮೊದಲ ವೈಮಾನಿಕ ಅಂಚೆ ಸೇವೆಯನ್ನು ಕುಂಭಮೇಳದ ಸಮಯದಲ್ಲಿ ಆರಂಭಿಸಲಾಗಿತ್ತು. ಫ್ರಾನ್ಸ್ ಪೈಲಟ್ ಹೆನ್ರಿ ಪಿಕ್ವೆಟ್ ಅವರು 6,500 ಅಂಚೆ ಪತ್ರಗಳನ್ನು ವಿಮಾನದ ಮೂಲಕ ಕುಂಭಮೇಳದ ಸ್ಥಳಕ್ಕೆ ತಲುಪಿಸಿದ್ದರು.


ಇದು ವಿಶ್ವದ ಮೊದಲ ಅಧಿಕೃತ ಏರ್‌ಮೇಲ್ ಆಗಿತ್ತು. 114 ವರ್ಷಗಳ ಹಿಂದೆ ಕುಂಭಮೇಳ ನಡೆಯುತ್ತಿದ್ದ ಸಂದರ್ಭದಲ್ಲೇ ವಿಮಾನದ ಮೂಲಕ ಅಂಚೆ ವಿತರಿಸುವ ಸಾಧನೆ ಮಾಡಲಾಗಿತ್ತು.

ಮೊದಲ ಐತಿಹಾಸಿಕ ವಿಮಾನ ಹಾರಾಟ 5 ಮೈಲಿ ದೂರಕ್ಕೆ ನಡೆದಿತ್ತು. ಯಮುನಾ ನದಿ ದಾಟಿ ಕುಂಭಮೇಳ ನಡೆಯುತ್ತಿದ್ದ ನೈನಿ ಜೈಲ್ ಸಮೀಪದ ಸ್ಥಳಕ್ಕೆ ತಲುಪಲಾಗಿತ್ತು. ಸುಮಾರು 13 ನಿಮಿಷಗಳ ಕಾಲ ವಿಮಾನ ಹಾರಾಟ ನಡೆದಿತ್ತು.

ಯುವ ಜವಾಹರಲಾಲ್ ನೆಹರು ಹಾಗೂ ಬ್ರಿಟನ್ ದೊರೆ ಐದನೇ ಜಾರ್ಜ್ ಸೇರಿದಂತೆ ಹಲವರು ಏರ್‌ಮೇಲ್ ಪಡೆದಿದ್ದರು. ರಾಜರಿಂದ ಹಿಡಿದು ಜನಸಾಮಾನ್ಯರವರೆಗೆ ಈ ಸೌಲಭ್ಯ ಕಲ್ಪಿಸಲಾಗಿತ್ತು.

ಪ್ರತಿಯೊಂದು ಪತ್ರದ ಮೇಲೆ ವಿಮಾನದ ವಿಶೇಷ ಗುರುತು ಮುದ್ರಿಸಲಾಗಿತ್ತು. 1911ರ ಕುಂಭಮೇಳದ ಪ್ರದರ್ಶನದ ವೇಳೆ ಮೊದಲ ಏರ್‌ಪೋಸ್ಟ್ ಕಳಿಸಿದ ಬಗ್ಗೆ ಇದರಲ್ಲಿ ನಮೂದಿಸಲಾಗಿತ್ತು.

ಎರಡು ಸೀಟುಗಳ ಹಂಬರ್ ಬೈಪ್ಲೇನ್ ಮೂಲಕ ಅಂಚೆ ಕಾರ್ಡುಗಳನ್ನು ರವಾನಿಸಲಾಗಿತ್ತು. ಈ ಅಂಚೆ ಕಾರ್ಡುಗಳನ್ನು ರವಾನಿಸುವ ಹೊಣೆ ಹೊತ್ತಿದ್ದ ಪಿಕ್ವೆಟ್ ಅವರ ಸಹಿ ಹಾಗೂ ವಿಮಾನದ ಚಿತ್ರ ಇರುವ ವಿಶೇಷ ಅಂಚೆ



ಕಾರ್ಡುಗಳನ್ನು ಬಿಡುಗಡೆ ಮಾಡಲಾಗಿತ್ತು. ಇದು ವಿಶ್ವದಾದ್ಯಂತ ಅಂಚೆ ಸಂಗ್ರಹಕಾರರಿಗೆ ಅಮೂಲ್ಯವಾಗಿದೆ.

1911 ರಲ್ಲಿ ತ್ರಿವೇಣಿ ಸಂಗಮದಲ್ಲಿ ದೊಡ್ಡ ಸಂಖ್ಯೆಯಲ್ಲಿ ಜನರು ಸೇರಿದ್ದರು. ಈಗ ಪ್ರಯಾಗ್‌ರಾಜ್ ಎಂದು ಕರೆಯಲಾಗುವ ನಗರ ಆ ಸಂದರ್ಭದಲ್ಲಿ ಅಲಹಾಬಾದ್ ಆಗಿತ್ತು.

ಪಿಕ್ವೆಟ್ ಅವರ ವಿಮಾನ ನಿಗದಿತ ಸ್ಥಳಕ್ಕೆ ತಲುಪಿದಾಗ ಹೆಚ್ಚೇನು ಸಂಭ್ರಮದ ವಾತಾವರಣ ಇರಲಿಲ್ಲ. ಪಿಕ್ವೆಟ್ ಅವರು ಒಂದು ಚೀಲದಲ್ಲಿ ಅಂಚೆಗಳನ್ನು ತುಂಬಿಕೊಂಡು ನಿಗದಿತ ಸ್ಥಳಕ್ಕೆ ತಲುಪಿಸಿದ್ದರು. ನಂತರ ಈ ಅಂಚೆಗಳನ್ನು ರಸ್ತೆ, ಹಡಗು ಇಲ್ಲವೇ ರೈಲು ಮಾರ್ಗಗಳ ಮೂಲಕ ಸಂಬಂಧಿಸಿದವರಿಗೆ ತಲುಪಿಸಲಾಗಿತ್ತು.

ನನ್ನ ಮುತ್ತಾತ ಅಶರ್ಫಿ ಲಾಲ್ ಅವರು ಮೊದಲ ಅಂಚೆ ಪಡೆದವರಲ್ಲಿ ಒಬ್ಬರಾಗಿದ್ದಾರೆ ಎಂದು ಪ್ರಯಾಗ್ ರಾಜ್ ನಿವಾಸಿ ಹಾಗೂ ಇತಿಹಾಸ ಉಪನ್ಯಾಸಕ ಅಕ್ಷತ್ ಲಾಲ್ ಹೇಳಿದ್ದಾರೆ.

ಕುಂಭಮೇಳ ನಡೆಯುತ್ತಿದ್ದ ಸಂದರ್ಭದಲ್ಲಿ ವಿಶ್ವದ ಮೊದಲ ಏರ್‌ಮೇಲ್ ಸೇವೆ ಒದಗಿಸಿದ್ದು ಅತ್ಯಂತ ಮಹತ್ವ ಪಡೆದಿದೆ. ಕುಂಭಮೇಳ ಸ್ಥಳದಿಂದ ಬಿಹಾರಕ್ಕೂ ಕೆಲ ಅಂಚೆಗಳನ್ನು ಕಳಿಸಲಾಗಿತ್ತು ಎಂದು ಪಾಟ್ನಾದ ಅಂಚೆ ಸಂಗ್ರಹಕ ಪ್ರದೀಪ್ ಜೈನ್ ತಿಳಿಸಿದ್ದಾರೆ.

ಜೈನ್ ಅವರು ಭಾರತದ ಏರ್‌ಮೇಲ್ ಅಭಿವೃದ್ಧಿ ಹಾಗೂ ಬೆಳವಣಿಗೆ ಹಾಗೂ ಕಾರ್ಯಾಚರಣೆಗಳ ಬಗ್ಗೆ 2002ರಲ್ಲಿ ಪುಸ್ತಕ ಒಂದನ್ನು ಬರೆದಿದ್ದರು.

ಈ ಐತಿಹಾಸಿಕ ವಿಮಾನ ಹಾರಾಟಕ್ಕೆ 50 ವರ್ಷ ತುಂಬಿದ ಹಿನ್ನೆಲೆಯಲ್ಲಿ 1961ರಲ್ಲಿ ವಿಶೇಷ ಅಂಚೆ ಚೀಟಿ ಬಿಡುಗಡೆ ಮಾಡಲಾಗಿತ್ತು. 2011 ರಲ್ಲಿ ನೂರು ವರ್ಷ ತುಂಬಿದಾಗ ಕೇಂದ್ರ ಸರ್ಕಾರದಿಂದ ಅಂಚೆ ಕಾಗದದ ಮಾದರಿಯೊಂದನ್ನು ಬಿಡುಗಡೆ ಮಾಡಲಾಗಿತ್ತು.

1911ರ ಈ ಘಟನೆಯನ್ನು ದಾಖಲಿಸಲು ಅಲಿಘಡದಲ್ಲಿ ಉತ್ಪಾದಿಸಲಾದ ವಿಶೇಷ ಮಸಿಯನ್ನು ಬಳಸಲಾಗಿತ್ತು. ಪಿಕ್ವೆಟ್ ಅವರು ಪೂರೈಸಿದ ಅಂಚೆಚೀಟಿಗಳ ವಿಶೇಷತೆ ಕಾಯ್ದುಕೊಳ್ಳುವ ಸಲುವಾಗಿ ನಂತರದಲ್ಲಿ ಈ ಮಸಿಯನ್ನು ನಾಶಗೊಳಿಸಲಾಗಿತ್ತು. ಆಗ ಪೂರೈಸಿದ ಅಂಚೆ ಚೀಟಿಗಳು ಈಗಲೂ ಅಪರೂಪದ ಸಂಗ್ರಹವಾಗಿ ಉಳಿದುಕೊಂಡಿವೆ.

# ಬೊಜ್ಜು ಸಮಸ್ಯೆಗಳ ಆಗರ : ಪ್ರಧಾನಮಂತ್ರಿಯ ಅಭಿಯಾನಕ್ಕೆ ಪರಿಣಿತರ ಬೆಂಬಲ

ನವದೆಹಲಿ, ಫೆ. 24 – ಬೊಜ್ಜಿನಿಂದಾಗಿ ಹಲವಾರು ಆರೋಗ್ಯ ಸಮಸ್ಯೆಗಳು ಉಂಟಾಗುತ್ತವೆ ಹಾಗೂ ಆಹಾರದಲ್ಲಿ ತೈಲದ ಬಳಕೆ ಕಡಿಮೆ ಮಾಡಬೇಕಿದೆ ಎಂದು ಹೇಳಿರುವ ಪ್ರಮುಖ ಆರೋಗ್ಯ ಪರಿಣಿತರು, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಬೊಜ್ಜು ವಿರೋಧಿ ಅಭಿಯಾನಕ್ಕೆ ಬೆಂಬಲಿಸಿದ್ದಾರೆ.

ಮಾಸಿಕ 'ಮನ್ ಕಿ ಬಾತ್' ರೇಡಿಯೋ ಕಾರ್ಯಕ್ರಮದಲ್ಲಿ ಮಾತನಾಡಿದ್ದ ಪ್ರಧಾನಮಂತ್ರಿ ನರೇಂದ್ರ ಮೋದಿ, ಜನರು ಖಾದ್ಯ ತೈಲದ ಬಳಕೆಯನ್ನು ಶೇ.10ರಷ್ಟು ಕಡಿಮೆ ಮಾಡಬೇಕು ಎಂದು ಕರೆ ನೀಡಿದ್ದರು.

ಅತಿಯಾದ ದೇಹದ ತೂಕದಿಂದ ಮೊಣಕಾಲ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ನಿದ್ರೆ ಸಮಸ್ಯೆ ಹಾಗೂ ಕೆಲ ಮಾನಸಿಕ ಆರೋಗ್ಯ ಸಮಸ್ಯೆಗಳು ಉಂಟಾಗುತ್ತವೆ ಎಂದು ದೆಹಲಿಯ ಎಐಐಎಂಎಸ್ ವೈದ್ಯಕೀಯ ವಿಭಾಗದ ಹೆಚ್ಚುವರಿ ಉಪನ್ಯಾಸಕ ಡಾ. ನೀರಜ್ ನಿಶ್ಚಲ್ ತಿಳಿಸಿದ್ದಾರೆ.

ಕಳಪೆ ಆಹಾರ ಹಾಗೂ ದೈಹಿಕ ಚಟುವಟಿಕೆಗಳ ಕೊರತೆಗಳು ಬೊಜ್ಜಿಗೆ ಪ್ರಮುಖ ಕಾರಣಗಳಾಗಿವೆ ಎಂದವರು ಹೇಳಿದ್ದಾರೆ. ಖಾದ್ಯ ತೈಲದಲ್ಲಿ ಕೊಬ್ಬಿನ ಪ್ರಮಾಣ ಹೆಚ್ಚಾಗಿರುತ್ತದೆ. ಇದನ್ನು ಮಿತವಾಗಿ ಬಳಸಿದಾಗ ಹೃದಯದ ಆರೋಗ್ಯ ಹಾಗೂ ಚಯಾಪಚಯಕ್ಕೆ ಅನುಕೂಲವಾಗುತ್ತದೆ. ಆದರೆ ಇವುಗಳಲ್ಲಿ ಕ್ಯಾಲೋರಿ ಪ್ರಮಾಣ ಹೆಚ್ಚಾಗಿರುತ್ತದೆ. ಹೀಗಾಗಿ ಅತಿಯಾದ ಸೇವನೆ ಬೊಜ್ಜುತನಕ್ಕೆ ಕಾರಣವಾಗುತ್ತದೆ. ಈ ಹಿನ್ನೆಲೆಯಲ್ಲಿ ಬೊಜ್ಜು ಕರಗಿಸಬೇಕಾದರೆ ತೈಲದ ಬಳಕೆ ಕಡಿಮೆ ಇರಬೇಕು ಎಂದು ಡಾ. ನಿಶ್ಚಲ್ ಹೇಳಿದ್ದಾರೆ.

ದೇಶದ ಶೇ. 40ರಷ್ಟು ಜನರು ಬೊಜ್ಜಿನ ಸಮಸ್ಯೆ ಎದುರಿಸುತ್ತಿದ್ದಾರೆ. ದಕ್ಷಿಣ ಭಾರತೀಯರಲ್ಲಿ ಹಾಗೂ ಪುರುಷರಲ್ಲಿ ಬೊಜ್ಜಿನ ಸಮಸ್ಯೆ ಹೆಚ್ಚಾಗಿದೆ. ಜೀವನ ಶೈಲಿಯಲ್ಲಿ ಬದಲಾವಣೆ ತರುವುದು ಹಾಗೂ ಆರೋಗ್ಯಕರ ಪಥ್ಯದಿಂದ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಿದೆ ಎಂದು ದೆಹಲಿಯ ಫೋರ್ಟಿಸ್ ಆಸ್ಪತ್ರೆಯ ಬ್ಯಾರಿಯಟ್ರಿಕ್ ಹಾಗೂ ಎಂಐಎಸ್ ವಿಭಾಗದ ಮುಖ್ಯಸ್ಥ ಡಾ.ಪ್ರದೀಪ್ ಕುಮಾರ್ ತಿಳಿಸಿದ್ದಾರೆ.

ಬೊಜ್ಜು ನಿಯಂತ್ರಣಕ್ಕಾಗಿ ತೈಲ ಬಳಕೆ ಕಡಿಮೆ ಮಾಡಬೇಕು ಎಂದು ಪ್ರಧಾನಮಂತ್ರಿ ನೀಡಿರುವ ಸಲಹೆ ಉಪಯುಕ್ತವಾಗಿದೆ ಎಂದು ದೆಹಲಿಯ ಮೇದಾಂತ ಆಸ್ಪತ್ರೆಯ ಹೃದಯ ವಿಭಾಗದ ಮುಖ್ಯಸ್ಥ ಡಾ. ಪ್ರವೀಣ್ ಚಂದ್ರ ಹೇಳಿದ್ದಾರೆ.

ಕ್ಯಾಲೊರಿ ಸೇವನೆ ಕಡಿಮೆ ಮಾಡಲು ಖಾದ್ಯ ತೈಲದ ಬಳಕೆ ಮಿತವಾಗಿರಬೇಕು. ಕರಿದ ಪದಾರ್ಥಗಳಿಂದ ದೂರ ಇರಬೇಕು ಎಂದವರು ಸಲಹೆ ನೀಡಿದ್ದಾರೆ.

2023ರಲ್ಲಿ ನಡೆಸಲಾದ ಸಮೀಕ್ಷೆಯ ಪ್ರಕಾರ ದೇಶದ ಶೇ. 13.85 ರಷ್ಟು ಜನರಲ್ಲಿ ಬೊಜ್ಜಿನ ಸಮಸ್ಯೆ ಇದೆ. ಶೇ. 57 ರಷ್ಟು ಜನರು ಹೊಟ್ಟೆಯ ಬೊಜ್ಜಿನ ಸಮಸ್ಯೆ ಎದುರಿಸುತ್ತಿದ್ದಾರೆ ಎಂದು ಡಾ. ಚಂದ್ರ ತಿಳಿಸಿದ್ದಾರೆ.

ಬೊಜ್ಜಿನಿಂದ ಹೃದಯ ಹಾಗೂ ಲಿವರ್ ಸಮಸ್ಯೆಗಳು ಹೆಚ್ಚಾಗುತ್ತವೆ. ನಗರ ಹಾಗೂ ಗ್ರಾಮೀಣ ಎರಡೂ ಕಡೆಗಳಲ್ಲಿ ಬೊಜ್ಜಿನ ಸಮಸ್ಯೆ ಹೆಚ್ಚಾಗುತ್ತಿದೆ. ಆಧುನಿಕ ಆಹಾರದಲ್ಲಿ ಕಾರ್ಬೋಹೈಡ್ರೇಟ್ ಪ್ರಮಾಣ ಹೆಚ್ಚಾಗಿದೆ. ಕರಿದ ತಿಂಡಿ ಹಾಗೂ ಸಂಸ್ಕರಿತ ಆಹಾರಗಳು ಸಮಸ್ಯೆಗೆ ಕಾರಣವಾಗಿವೆ. ಕಾಳು, ಬೇಳೆ, ಹಣ್ಣು ಹಾಗೂ ತರಕಾರಿಗಳ ಸೇವನೆ ಕಡಿಮೆಯಾಗಿರುವುದು ಬೊಜ್ಜಿನ ಸಮಸ್ಯೆ ವ್ಯಾಪಕವಾಗಲು ಕಾರಣ ಎಂದು ಸರ್ ಗಂಗಾ ರಾಮ್ ಆಸ್ಪತ್ರೆಯ ಗ್ಯಾಸ್ಟ್ರೋಎಂಟರಾಲಜಿ ವಿಭಾಗದ ಉಪಾಧ್ಯಕ್ಷ ಡಾ. ಪಿಯೂಶ್ ರಂಜನ್ ಹೇಳಿದ್ದಾರೆ.

ನಿದ್ರೆ ಗುಣಮಟ್ಟ ಕಡಿಮೆಯಾಗಿರುವುದು, ಹೆಚ್ಚಿನ ಒತ್ತಡ ಹಾಗೂ ನಿಷ್ಕ್ರಿಯ ಜೀವನ ಶೈಲಿಗಳಿಂದಾಗಿ ಬೊಜ್ಜು ಸಮಸ್ಯೆ ಹೆಚ್ಚಾಗುತ್ತಿದೆ. ಕುರುಕಲು ತಿಂಡಿಗಳು, ಉಪ್ಪು ಹಾಗೂ ಸಕ್ಕರೆ ಇರುವ ಆಹಾರದ ಸೇವನೆ ಸಮಸ್ಯೆ ಉಲ್ಬಣಿಸುತ್ತಿದೆ ಎಂದು ಎಐಐಎಂಎಸ್‌ನ ಉಪನ್ಯಾಸಕಿ ಡಾ. ರೀಮಾ ದಾದಾ ಹೇಳಿದ್ದಾರೆ.

## ಹರಿಹರ: ವಿದ್ಯುತ್ ಟ್ರಾನ್ಸ್‌ಫಾರ್ಮರ್ ಸ್ಥಳಾಂತರಕ್ಕೆ ಆಗ್ರಹ




ಹರಿಹರ, ಫೆ. 24- ನಗರದ ಹಳೇ ಪಿ.ಬಿ. ರಸ್ತೆಯಲ್ಲಿರುವ ಐಡಿಎಸ್‌ಎಂಟಿ ವಾಣಿಜ್ಯ ಸಂಕೀರ್ಣದ ಮುಂಭಾಗದಲ್ಲಿರುವ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಅನ್ನು ಸ್ಥಳಾಂತರಿಸುವಂತೆ ಆಗ್ರಹಿಸಿ, ಮಲ್ಟಿಪರ್ಪಸ್ ಟೆಕ್ನೀಷಿಯನ್ಸ್ ಅಸೋಸಿಯೇಷನ್ ವತಿಯಿಂದ ಉಪ ತಹಶೀಲ್ದಾರ್ ಪುಷ್ಪಾ ಅವರಿಗೆ ಮನವಿ ಸಲ್ಲಿಸಲಾಯಿತು.

ಈ ವೇಳೆ ಅಸೋಸಿಯೇಷನ್ ಅಧ್ಯಕ್ಷ ಎಸ್.ಆರ್. ಕಣವಿ ಮಾತನಾಡಿ, ಬೇರೆಡೆಯಿಂದ ತಂದು ಈ ಜಾಗದಲ್ಲಿ ಅಳವಡಿಸಿರುವ ಈ ವಿದ್ಯುತ್ ಟ್ರಾನ್ಸ್ ಫಾರ್ಮರ್‌ನಿಂದಾಗಿ ರಸ್ತೆ ಬದಿ ಓಡಾಡುವ ಸಾರ್ವಜನಿಕರಗೂ, ವಾಹನ ಸವಾರರಿಗೂ ಮತ್ತು ವಾಣಿಜ್ಯ ಸಂಕೀರ್ಣದ ಬಾಡಿಗೆದಾರರಿಗೂ ಸಹ ತೊಂದರೆ ಉಂಟಾಗಿದ್ದು, ಮುಂದಿನ ದಿನಗಳಲ್ಲಿ ಮಳೆ ಗಾಳಿಗೆ ಹಾನಿಯಾಗುವ ಸಾಧ್ಯತೆಗಳು ಇರುವುದರಿಂದ ಈ ಕೂಡಲೇ ಅದನ್ನು ಬೇರೆಡೆಗೆ ವರ್ಗಾಯಿಸಬೇಕೆಂದು ಆಗ್ರಹಿಸಿದರು.

ಒಂದು ವೇಳೆ ಮುಂದಿನ ದಿನಗಳಲ್ಲಿ ಈ ಟ್ರಾನ್ಸ್‌ಫಾರ್ಮರ್‌ನಿಂದ ಸಾರ್ವಜನಿಕರಿಗೆ ಯಾವುದೇ ರೀತಿ ತೊಂದರೆಯಾದಲ್ಲಿ ಅದಕ್ಕೆ ಬೆಸ್ಕಾಂ ಸೇರಿದಂತೆ ಸಂಬಂಧಪಟ್ಟ ಇಲಾಖೆಯವರೇ ನೇರ ಹೊಣೆಗಾರರಾಗಿರುತ್ತಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕೆ. ರಮೇಶ್, ಹಿದಾಯತ್, ನಾಗರಾಜ್, ಬಸವರಾಜ್, ರಂಜಿತ್, ಜಬಿಉಲ್ಲಾ, ಆನಂದ್, ಮುಲ್ಲಾ, ಇ ಬಸವರಾಜ್, ಅಕ್ಷಯ್, ಸಾಧಿಕ್, ಪಾನಿಪುರಿ ರಮೇಶ್, ಗೋಬಿ ರಮೇಶ್ ಇತರರು ಇದ್ದರು.

## ಕಠಿಣ ಪರಿಶ್ರಮದಿಂದ ದೇಹದಾರ್ಢ್ಯತೆ ಸಾಧ್ಯ

**ಕೆಪಿಸಿಸಿ ಎಸ್.ಟಿ. ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಡಿ.ಕೀರ್ತಿಕುಮಾರ್**

ಜಗಳೂರು, ಫೆ. 24 - ನಿರಂತರ ಕಠಿಣ ಪರಿಶ್ರಮದಿಂದ ದೇಹದಾರ್ಢ್ಯತೆ ಗಳಿಸಲು ಸಾಧ್ಯ ಎಂದು ಕೆಪಿಸಿಸಿ ಎಸ್.ಟಿ. ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಡಿ.ಕೀರ್ತಿಕುಮಾರ್ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ಬಯಲು ರಂಗಮಂದಿರದಲ್ಲಿ ಕಮಾಂಡೋ ಮಲ್ಟಿ ಜಿಮ್ ಮತ್ತು ಜಗಳೂರು ಫ್ರೆಂಡ್ಸ್ ಗ್ರೂಪ್ ವತಿಯಿಂದ ಆಯೋಜಿಸ ಲಾಗಿದ್ದ ದ್ವಿತೀಯ ಬಾರಿಗೆ ಅಂತರ್ ಜಿಲ್ಲಾ ಮಟ್ಟದ ದೇಹದಾರ್ಢ್ಯ ಸ್ಪರ್ಧೆ, ಎತ್ತರ ವಿಭಾಗ, ಮಿಸ್ಟರ್ ಜಗಳೂರು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸ್ಪರ್ಧೆಯಲ್ಲಿ ಗೆಲುವಿಗಿಂತ ಭಾಗವಹಿಸುವುದು ಮುಖ್ಯ. ಪ್ರತಿಯೊಬ್ಬ ಪಟುವಿನ ಪ್ರದರ್ಶನಗಳು ರೋಮಾಂಚನಕಾರಿಯಾಗಿವೆ. ದೇಹದಾರ್ಢ್ಯತೆ ಪ್ರದರ್ಶನಕ್ಕೆ ಸಿಕ್ಕ ಒಂದೇ ನಿಮಿಷದಲ್ಲಿ ಅವರು ಶಕ್ತಿಮೀರಿ ಮೈನವಿರೇಳಿಸಿ ವಿವಿಧ ಭಂಗಿಗಳನ್ನು ಪ್ರದರ್ಶಿಸಿ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕೆಪಿಸಿಸಿ ಎಸ್.ಟಿ. ಘಟಕದ ಮಾಜಿ ರಾಜ್ಯಾಧ್ಯಕ್ಷ ಕೆ.ಪಿ.ಪಾಲಯ್ಯ ಮಾತನಾಡಿ, ಬರ ಮತ್ತು ಬಡ ತಾಲ್ಲೂಕಿನಲ್ಲಿ ಎರಡನೇ ಬಾರಿಗೆ ದೇಹದಾರ್ಢ್ಯ ಸ್ಪರ್ಧೆ ಆಯೋಜನೆ ಸಂತಸದ ಸಂಗತಿ, ಅತ್ಯುತ್ತಮವಾಗಿ ತರಬೇತಿ ಪಡೆದ ಪಟುಗಳು ರಾಜ್ಯದ ಮೂಲೆ ಮೂಲೆಗಳಿಂದ ಭಾಗವಹಿಸಿರುವುದು ಸ್ವಾಗತಾರ್ಹ. ಈ ಮೂಲಕ ಜಗಳೂರಿನ ಕ್ರೀಡಾಸಕ್ತಿಯ ಕೀರ್ತಿ ರಾಜ್ಯ ವ್ಯಾಪಿ ಪಸರಿಸಲಿ ಎಂದು ಶುಭ ಕೋರಿದರು.

ಸಂದರ್ಭದಲ್ಲಿ ಕಮಾಂಡೋ ಮಲ್ಟಿ ಜಿಮ್ ಮಾಲೀಕ ಜಾಕಿ ಪ್ರಕಾಶ್, ಬಿಜೆಪಿ ಯುವ ಮುಖಂಡ ಬಿಸ್ತುವಳ್ಳಿ ಬಾಬು, ಪಿಂಜಾರ ಸಮಾಜದ ತಾಲೂಕು ಅಧ್ಯಕ್ಷ ಬಂಗ್ಲೆ ಫರ್ವೀಜ್, ಜೈಭಾರತ್ ಟ್ರಸ್ಟ್ ಮುಖ್ಯಸ್ಥ ಬರ್ಕತ್ ಅಲಿ, ವಾಸೀಂ, ಜಿಮ್ ಟ್ರೈನರ್‌ಗಳಾದ ಅಶೋಕ್, ಪ್ರವೀಣ್ ಕುಮಾರ್, ದೇಹದಾರ್ಢ್ಯ ಸ್ಪರ್ಧೆ ರಾಜ್ಯಮಟ್ಟದ ವಿಜೇತ ಶಿಕ್ಷಕ ಓಬಳೇಶ್, ಮುಖಂಡರಾದ ಬಿ.ಲೋಕೇಶ್, ಎನ್. ಎಚ್.ರಮೇಶ್, ಸಂತೋಷ್ ಕುಮಾರ್, ಕೆಳಗೋಟೆ ಜಗದೀಶ್, ಮಾರುತಿ, ಮಂಜುನಾಥ್, ಆದರ್ಶ, ಎಲ್ಲಪ್ಪ, ಪೈಲ್ವಾನ್ ಮಾರಪ್ಪ, ಕೇಶವ, ರತನ್, ಸಂತೋಷ್ ನಾಯ್ಕ ಸೇರಿದಂತೆ ಇತರರು ಭಾಗವಹಿಸಿದ್ದರು.



# ಬಸವತತ್ವ ಪ್ರಚಾರಕ್ಕೆ 500 ಕೋಟಿ ರೂ. ಅನುದಾನ

(1ನೇ ಪುಟದಿಂದ) ಬಸವಣ್ಣನವರ ಹೋರಾಟ ಪೂರಕ. ನಮ್ಮ ಜಾತಿ ವ್ಯವಸ್ಥೆಗೆ ಚಲನೆ ಇಲ್ಲ, ಜಾತಿ ಜಡತ್ವ, ಆರ್ಥಿಕ ಜಡತ್ವ ಇರುವ ಸಮಾಜದಲ್ಲಿ ಚಲನೆ ಸಾಧ್ಯವಿಲ್ಲ.

ಬಸವಣ್ಣನವರ ವಿಚಾರಗಳೇ ಡಾ. ಅಂಬೇಡ್ಕರ್ ವಿಚಾರಗಳಾಗಿದ್ದು, ಇವೆಲ್ಲವೂ ಸಂವಿಧಾನದಲ್ಲಿ ಅಡಕವಾಗಿವೆ. ಗೊರುಚ ಅಧ್ಯಕ್ಷತೆಯಲ್ಲಿ ಅನುಭವ ಮಂಟಪ ಪುನರುಜ್ಜೀವನಕ್ಕೆ ಮುಂದಾಗಿದ್ದು, ಅನುಭವ ಮಂಟಪ ಮೊದಲ ಪ್ರಜಾಪ್ರಭುತ್ವದ ವೇದಿಕೆ, ಯಾರ ಒತ್ತಾಯವೂ ಇಲ್ಲದ ವೇಳೆಯಲ್ಲೇ ನಮ್ಮ ಸರ್ಕಾರ ಅನುಭವ ಮಂಟಪ ಪುನರುಜ್ಜೀವನಕ್ಕೆ ಮುಂದಾಗಿತ್ತು ಎಂದರು.

ಇದಕ್ಕೂ ಮುನ್ನ ಬಾಲ್ಕಿ ಮಠದ ಬಸವ ಲಿಂಗ ಪಟ್ಟದೇವರು ಸ್ವಾಮೀಜಿ ಮಾತನಾಡಿ, ನಾಡಿನ ಸಾಂಸ್ಕೃತಿಕ ನಾಯಕ, ವಿಶ್ವ ಗುರು ಬಸವೇಶ್ವರರ ವಿಚಾರಧಾರೆಯನ್ನು ಪರಿಣಾಮ ಕಾರಿಯಾಗಿ ಜನ ಮಾನಸಕ್ಕೆ ತಲುಪಿಸುವಲ್ಲಿ ಮುಂಬರುವ ಬಜೆಟ್‌ನಲ್ಲಿ 100 ಕೋಟಿ ರೂ. ನೀಡಬೇಕಲ್ಲದೆ, ಮುಂದಿನ ನಾಲ್ಕು ವರ್ಷ ಗಳಲ್ಲೂ ಬಜೆಟ್‌ನಲ್ಲಿ ತಲಾ 100 ಕೋಟಿ ರೂ. ನಂತೆ ಒಟ್ಟು 500 ಕೋಟಿ ರೂ. ಅನುದಾನ ನೀಡಬೇಕು ಎಂದು ಒತ್ತಾಯಿಸಿದರು.

ಯುವ ಪೀಳಿಗೆಗೆ ಬಸವಣ್ಣನವರನ್ನು ಪರಿಚಯಿಸುವಲ್ಲಿ ಸರ್ಕಾರ ಕೆಲವು ಮಹತ್ವದ ಕ್ರಮ ಕೈಗೊಳ್ಳಬೇಕೆಂಬುದಾಗಿ ಇತ್ತೀಚೆಗೆ ಚಿತ್ರದುರ್ಗದಲ್ಲಿ ನಡೆದ 13ನೇ ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನದಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ.

ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯಲ್ಲಿ ಬಸವಣ್ಣನ ಬೃಹತ್ ಪ್ರತಿಮೆ ಪ್ರತಿಷ್ಠಾಪಿಸಬೇಕು, ಬೆಂಗಳೂರಿನಲ್ಲಿ 25 ಎಕರೆ ಪ್ರದೇಶದಲ್ಲಿ ಅಕ್ಷರಧಾಮ ಮಾದರಿ ಬೃಹತ್ 'ಶರಣ ದರ್ಶನ' ಕೇಂದ್ರ ಸ್ಥಾಪಿಸಿ, ಅದರಲ್ಲಿ ಉದ್ಯಾನ, ಗ್ರಂಥಾಲಯ, ಅತಿಥಿ ಕೇಂದ್ರ, ದಾಸೋಹ ಭವನ, ಸಭಾಂಗಣ ನಿರ್ಮಿಸಿ ಪ್ರವಾಸಿ ತಾಣವನ್ನಾಗಿಸಬೇಕು.

ಎಲ್ಲ ಶರಣರ ಜನ್ಮಸ್ಥಳ, ಐಕ್ಯಸ್ಥಳ ಹಾಗೂ ಇತರೆ ಸ್ಮಾರಕಗಳ ರಕ್ಷಣೆಗೆ 'ಪ್ರತ್ಯೇಕ ಶರಣ ಸ್ಮಾರಕ ರಕ್ಷಣೆ ಪ್ರಾಧಿಕಾರ' ರಚಿಸಬೇಕು.

ಬಸವಕಲ್ಯಾಣದಲ್ಲಿ ನಿರ್ಮಾಣವಾಗುತ್ತಿರುವ ಅನುಭವ ಮಂಟಪ ಸದ್ಬಳಕೆಗೆ ಅಲ್ಲಿಯೇ 'ವಚನ ವಿಶ್ವವಿದ್ಯಾಲಯ' ಮತ್ತು ಸಂಶೋಧನಾ ಕೇಂದ್ರ ಆರಂಭಿಸಬೇಕು.

ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ 'ಬಸವ ಭವನ' ನಿರ್ಮಿಸಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನಿರಂತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಬೇಕು.

ವಚನ ಸಾಹಿತ್ಯ ಸಂಗ್ರಹ, ಪ್ರಕಟಣೆ, ಮರು ಪ್ರಕಟಣೆ, ಹಸ್ತಪ್ರತಿಗಳ ದಾಖಲೀಕರಣ, ಶರಣ ಕ್ಷೇತ್ರಗಳ ಅಧ್ಯಯನ ಮತ್ತು ದಾಖಲೀಕರಣ, ವಿಚಾರಸಂಕಿರಣ, ಸಮ್ಮೇಳನಗಳು, ವಚನಾ ಧಾರಿತ ಸಾಂಸ್ಕೃತಿಕ ಕಾರ್ಯಕ್ರಮಗಳು ಇತ್ಯಾದಿ ಚಟುವಟಿಕೆ ನಡೆಸಲು ಶರಣ ಸಾಹಿತ್ಯ ಮತ್ತು ಸಂಸ್ಕೃತಿ ಪ್ರಸಾರಕ್ಕಾಗಿಯೇ ಇರುವ ಸಂಸ್ಥೆಗಳಿಗೆ ಅನುದಾನ ಒದಗಿಸಬೇಕು ಎಂದರು.

## ಸ್ವಾಮಿ ವಿವೇಕರು ಪ್ರಭಾವಶಾಲಿ ತತ್ವಜ್ಞಾನಿ



ದಾವಣಗೆರೆ, ಫೆ. 24 - ಸ್ವಾಮಿ ವಿವೇಕಾನಂದರು ಭಾರತದ ಅತ್ಯಂತ ಪ್ರಸಿದ್ಧ ಮತ್ತು ಪ್ರಭಾವಶಾಲಿ ತತ್ವಜ್ಞಾನಿಗಳಲ್ಲಿ ಒಬ್ಬರು ಎಂದು ಸಿಪಿಐ ಮುಖಂಡ ಆವರಗೆರೆ ವಾಸು ತಿಳಿಸಿದರು.

ಸಮೀಪದ ಆವರಗೆರೆಯಲ್ಲಿ ಭಾನುವಾರ ನಡೆದ ಸ್ವಾಮಿ ವಿವೇಕಾನಂದರ 162ನೇ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸ್ವಾಮಿ ವಿವೇಕಾನಂದರು ಆಶಾವಾದ ಮತ್ತು ಸಾಮಾಜಿಕ ಸಮಸ್ಯೆಗಳ ಬಗೆಗಿನ ವಿಶಾಲ ದೃಷ್ಟಿಯ ಸಂಕೇತವಾಗಿ ಕಂಗೊಳಿಸುತ್ತಿದ್ದಾರೆ. ಇಂತಹ ಯುಗ ಪುರುಷರ ಜನ್ಮ ದಿನವನ್ನು ಯುವಕರ ದಿನವನ್ನಾಗಿ ಆಚರಿಸುತ್ತಾರೆ ಎಂದು ವಿವರಿಸಿದರು.

ಈ ವೇಳೆ ಎಸ್. ಚಂದ್ರಣ್ಣ, ಹನುಮಂತಪ್ಪ ಗೋಶಾಲೆ, ಹಾಲಮ್ಮ ಪಾರ್ವತಮ್ಮ ಕವಿತಾ, ಗಂಗಮ್ಮ ಮಂಜಮ್ಮ ಮಂಜುಳಾ, ಆಶಾ, ಸಂಗೀತಾ, ಪಲ್ಲವಿ ಭಾಗವಹಿಸಿದ್ದರು.

## ಅಕ್ರಮ-ಸಕ್ರಮ ಪ್ರೀತಿಗಲ್ಲ; ಖಾಲಿ ಖಜಾನೆ ಭರ್ತಿಗೆ

(1ನೇ ಪುಟದಿಂದ) ಅಭಿವೃದ್ಧಿಗೆ ಹಣಕಾಸು ಇಲ್ಲದೆ ಮಾರಕವಾಗುತ್ತಿದೆ. ಕೇಂದ್ರ ಸರ್ಕಾರ ಹಣ ನೀಡದೆ, ರಾಜ್ಯ ಸರ್ಕಾರ ನಡೆಯುತ್ತಿದೆಯೇ ಎಂದು ಪತ್ರಿಕಾಗೋಷ್ಠಿಯಲ್ಲಿ ಖಾರವಾಗಿ ನುಡಿದ ಅವರು, ಕೇಂದ್ರದ ಯೋಜನೆ ಗಳಿಗೆ ರಾಜ್ಯದ ಪಾಲು ನೀಡಲೂ ನಿಮ್ಮಬಳಿ ಹಣವಿಲ್ಲ. ಇಲ್ಲದ, ಅಂಕಿ-ಅಂಶಗಳನ್ನು ಜನರ ಮುಂದಿಟ್ಟು ಕೊಂಡು ರಾಜಕೀಯ ಮಾಡಲು ಹೊರಟಿದ್ದೀರಿ, ಮೊದಲು ಜನರ ಸಮಸ್ಯೆ ಪರಿಹರಿಸಲು ಮುಂದಾಗಿ. ಕಡು ಬೇಸಿಗೆ ಎದುರಾಗಿದೆ, ಕುಡಿಯುವ ನೀರಿನ ಸಮಸ್ಯೆ ಅಗಾಧವಾಗುತ್ತಿದೆ, ಸಮರ್ಪಕ ವಿದ್ಯುತ್ ಪೂರೈಕೆ ಇಲ್ಲವಾಗಿದೆ. ಮಳೆಗಾಲಕ್ಕೂ ಮುನ್ನವೇ ಕನಿಷ್ಟ ರಸ್ತೆ ಗುಂಡಿಗಳನ್ನಾದರೂ ಮುಚ್ಚಿ ಎಂದು ಸಲಹೆ ನೀಡಿದರು.

ಈ ನಡುವೆ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ, ರಾಜಾರೋಷವಾಗಿ ಗಲಭೆಗಳು ನಡೆಯುತ್ತಿವೆ, ತಪ್ಪಿತಸ್ಥರ ವಿರುದ್ಧ ಕ್ರಮಗಳಾಗುತ್ತಿಲ್ಲ.

ಜಾತಿಗಣತಿ ಹೆಸರಿನಲ್ಲಿ ಸಮಾಜ ಒಡೆಯುವ ಕೆಲಸ ಮಾಡುತ್ತಿದ್ದಾರೆಯೇ ಹೊರತು, ಅದರ ಅನುಷ್ಠಾನಕ್ಕೆ ಮನಸ್ಸು ಇಲ್ಲ, ಬರೀ ರಾಜಕೀಯ ದಾಳವಾಗಿ ಬಳಸಿಕೊಳ್ಳಲು ಯತ್ನಿಸುತ್ತಿದ್ದೀರಿ.

ಜಾತಿ ಗಣತಿ ಸಮೀಕ್ಷೆ ಸರಿಯಾಗಿ ಆಗಿಲ್ಲ ಎಂಬುದಾಗಿ ಆಡಳಿತಾರೂಢ ಪಕ್ಷದ ಶಾಸಕರೇ ಹೇಳುತ್ತಿದ್ದಾರೆ, ಅವೈಜ್ಞಾನಿಕ ವರದಿ ಇಟ್ಟುಕೊಂಡು ಯಾವ ತೋರಿಕೆಗಾಗಿ ಅನುಷ್ಠಾನದ ಮಾತನ್ನಾಡು ತ್ತಿದ್ದೀರಿ ? ಎಂದು ಪ್ರಶ್ನಿಸಿದರು. ಇನ್ನೊಂದೆಡೆ ಕರ್ನಾಟಕ ಲೋಕಸೇವಾ ಆಯೋಗದ ಕೆಲಸವನ್ನೂ ಹಾಳುಗೆಡವಿದ್ದೀರಿ, ನಿರುದ್ಯೋಗಿ ಯುವಜನರ ಬಾಳು ಹಾಳು ಮಾಡುತ್ತಿದ್ದೀರಿ ಎಂದು ಟೀಕಿಸಿದರು. ಖಾಸಗಿ ಲೇವಾದೇವಿದಾರ (ಮೈಕ್ರೊ ಫೈನಾನ್ಸ್) ಸಂಸ್ಥೆಗಳಿಂದ ಸಾಲ ಪಡೆದವರಿಗೆ ಕಿರುಕುಳ ತಪ್ಪಿಸಲು ಸುಗ್ರೀವಾಜ್ಞೆ ತಂದಿದ್ದೀರಿ, ಕಿರುಕುಳ ನಿಂತಿದೆಯೇ ? ಎಂದು ಪ್ರಶ್ನಿಸಿದರು.

## ಸುಧಾ ಮೂರ್ತಿ ನೇಮಿಸಿದ ಪ್ರಧಾನಿ

(1ನೇ ಪುಟದಿಂದ) ನಟ ಮೋಹನ್‌ಲಾಲ್ ಅವರು ಸೇರಿದ್ದಾರೆ. ಭೋಜಪುರಿ ನಟ ಹಾಗೂ ಗಾಯಕ ನಿರಾಹವಾ, ಶೂಟಿಂಗ್ ಚಾಂಪಿಯನ್ ಮನು ಭಾಕರ್, ವೇಟ್ ಲಿಫ್ಟರ್ ಮೀರಾಬಾಯಿ ಚಾನು, ಇನ್ಫೋಸಿಸ್ ಸಹ ಸ್ಥಾಪಕ ನಂದನ್ ನಿಲೇಕಣಿ, ನಟ ಆರ್.ಮಾಧವನ್ ಹಾಗೂ ಗಾಯಕಿ ಶ್ರೇಯ ಗೋಶಾಲ್ ಅವರನ್ನು ಪ್ರಧಾನಿ ಈ ಅಭಿಯಾನಕ್ಕೆ ನೇಮಿಸಿದ್ದಾರೆ.

# ಪ್ರಯಾಗ್‌ರಾಜ್ ವಿಮಾನ ನಿಲ್ದಾಣದಲ್ಲಿ ಹೊಸ ದಾಖಲೆಗಳು

(1ನೇ ಪುಟದಿಂದ) ಸ್ಟೀವ್ ಜಾಬ್ಸ್ ಅವರ ಪತ್ನಿ ಲೌರೀನ್ ಪೋವೆಲ್ ಜಾಬ್ಸ್ ಅವರಿದ್ದ ವಿಮಾನ ಜನವರಿಯಲ್ಲಿ ಇಲ್ಲಿಗೆ ಬಂದಿಳಿದಿತ್ತು.

1932 ರಲ್ಲಿ ಲಂಡನ್‌ನಿಂದ ಅಲಹಾಬಾದ್‌ಗೆ ವಿಮಾನ ಬಂದಿದ್ದೇ ಕೊನೆಯ ಅಂತರರಾಷ್ಟ್ರೀಯ ವಿಮಾನವಾಗಿತ್ತು. ಇದಾದ 93 ವರ್ಷಗಳ ನಂತರ ಮೊದಲ ಬಾರಿಗೆ ಅಂತರರಾಷ್ಟ್ರೀಯ ವಿಮಾನ ಇಲ್ಲಿಗೆ ಬಂದಿದೆ ಎಂದು ಉತ್ತರ ಪ್ರದೇಶ ಸರ್ಕಾರದ ಅಧಿಕಾರಿಗಳು ಹೇಳಿದ್ದಾರೆ. ಪೋವೆಲ್ ಅವರ ವಿಮಾನ ಬಂದಿಳಿದ ನಂತರ ಇನ್ನೂ ನಾಲ್ಕು ಅಂತರರಾಷ್ಟ್ರೀಯ ವಿಮಾನಗಳು ಮಹಾಕುಂಭ ಮೇಳದ ಹಿನ್ನೆಲೆಯಲ್ಲಿ ಪ್ರಯಾಗ್‌ರಾಜ್‌ಗೆ ಬಂದಿವೆ. ಸೋಮವಾರ ಸಹ ಒಂದು ಅಂತರರಾಷ್ಟ್ರೀಯ ವಿಮಾನ ಬಂದಿಳಿದಿತ್ತು

ಈ ವಿಮಾನ ನಿಲ್ದಾಣ ಮತ್ತೊಂದು ಸುತ್ತಿನ ಉನ್ನತಿಕರಣ ಹಾಗೂ ವಿಸ್ತರಣೆ ಕಾಣುತ್ತಿದೆ. ಇದರ ಶೇಕಡ 20ರಷ್ಟು ಕಾಮಗಾರಿ ಮಾತ್ರ ಬಾಕಿ ಉಳಿದಿದೆ ಎಂದು ಅಧಿಕಾರಿ ಹೇಳಿದ್ದಾರೆ.

ಮುಂದಿನ ಕುಂಭಮೇಳದ ವೇಳೆಗೆ ಈ ಉನ್ನತಿಕರಣ ಪೂರ್ಣವಾಗಿರಲಿದೆ ಎಂದು ವಿಮಾನ ನಿಲ್ದಾಣದ ನಿರ್ದೇಶಕರು ಹೇಳಿದ್ದಾರೆ.

ಕುಂಭಮೇಳದ ನಂತರವೂ ಈ ವಿಮಾನ ನಿಲ್ದಾಣ ನಿರ್ವಹಣೆ ಕಾರ್ಯ ಸಾಧ್ಯವೇ? ಎಂಬ ಪ್ರಶ್ನೆಗೆ ಉತ್ತರಿಸಿರುವ ಉಪಾಧ್ಯಾಯ್, ಇಲ್ಲಿನ ವಿಮಾನ ನಿಲ್ದಾಣವನ್ನು ಕಾಶಿ ಹಾಗೂ ಅಯೋಧ್ಯೆಯ ವಿಮಾನ ನಿಲ್ದಾಣಗಳ ಜೊತೆ ಜೋಡಣೆ ಮಾಡಲು ಸರ್ಕಾರ ಉದ್ದೇಶಿಸಿದೆ ಎಂದಿದ್ದಾರೆ.

ಕೈಗಾರಿಕೆ, ಸಂಸ್ಕೃತಿ, ರಾಜಕೀಯ ಹಾಗೂ ಪ್ರವಾಸಗಳ ಕಾರಣದಿಂದಾಗಿ ವಿಮಾನ ನಿಲ್ದಾಣಗಳಿಗೆ ಜನರು ಆಗಮಿಸುತ್ತಾರೆ. ಇಲ್ಲಿಂದ ವಾರಾಣಸಿ ಕೇವಲ 120 ಕಿಲೋಮೀಟರ್ ಹಾಗೂ ಅಯೋಧ್ಯೆ 160 ಕಿಲೋಮೀಟರ್ ದೂರದಲ್ಲಿದೆ. ಹೀಗಾಗಿ ಪ್ರಯಾಗ್‌ರಾಜ್ ಈ ಎರಡೂ ಧಾರ್ಮಿಕ ನಗರಗಳ ಜೊತೆಗೆ ಪ್ರಮುಖ ಅಧ್ಯಾತ್ಮಿಕ ತಾಣವಾಗಲಿದೆ. ಈ ಮೂರು ನಗರಗಳನ್ನು ಒಳಗೊಳ್ಳುವ ರೀತಿಯಲ್ಲಿ ಸರ್ಕಾರ ಯೋಜನೆ ರೂಪಿಸುವ ನಿರೀಕ್ಷೆ ಇದೆ ಎಂದವರು ತಿಳಿಸಿದ್ದಾರೆ.

ಅಲ್ಲದೆ ಮಹಾಕುಂಭ ಮೇಳದ ಕಾರಣದಿಂದಾಗಿ ವಿಮಾನ ಯಾನದ ಬಗ್ಗೆ ಜನರು ಹೊಂದಿರುವ ಮನೋಭಾವದಲ್ಲೂ ಬದಲಾವಣೆ ಕಂಡು ಬಂದಿದೆ. ಅದರಲ್ಲೂ ಯುವಕರು ವಿಮಾನಯಾನ ಹಾಗೂ ತೀರ್ಥ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಹೊಂದಿರುವ ಮನೋಭಾವ ಬದಲಾಗಿರುವುದು ಕಂಡು ಬಂದಿದೆ ಎಂದು ಉಪಾಧ್ಯಾಯ್ ಹೇಳಿದ್ದಾರೆ.


**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆ ಪಶ್ಚಿಮ 30x40, 40x60 ಅಕ್ಕ-ಪಕ್ಕ, ಬನಶಂಕರಿ ಬಡಾವಣೆ ಪೂರ್ವ 30x50 ಅಕ್ಕ-ಪಕ್ಕ ಜೆ.ಹೆಚ್. ಪಟೇಲ್ ಬಡಾವಣೆ ದಕ್ಷಿಣ 40x60 ಪೂರ್ವ 20x30.
ಐಗೂರು ವಿಜಯಕುಮಾರ
99457 02495

**ಕಮರ್ಷಿಯಲ್ ಸೈಟುಗಳು ಮಾರಾಟಕ್ಕಿವೆ**
ವಿದ್ಯಾನಗರ ಮುಖ್ಯ ರಸ್ತೆ 90x60 ಪೂರ್ವ+ದಕ್ಷಿಣ, ಅರುಣಾ ಟಾಕೀಸ್ ಹತ್ತಿರ ದಕ್ಷಿಣ 50x150 ಎಂಸಿಸಿ 'ಎ' ಬ್ಲಾಕ್ ಪೂರ್ವ+ಉತ್ತರ 60x130 ಸೈಟುಗಳು ಮಾರಾಟಕ್ಕಿವೆ. ಬನಶಂಕರಿ ಬಡಾವಣೆ, ಪೂರ್ವ 50x80
ಐಗೂರು ವಿಜಯಕುಮಾರ್
99457 02495

**ಸೈಟುಗಳು ಮಾರಾಟಕ್ಕಿವೆ**
ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ 40x60 ಪಶ್ಚಿಮ, 30x50 ಪೂರ್ವ, 30x50 ಪಶ್ಚಿಮ. ವಿನಾಯಕ ಬಡಾವಣೆ ಆನಂದ ಅಕಾಡೆಮಿ ಹಿಂಭಾಗ 40x50 ಪೂರ್ವ, 30x57 ಉತ್ತರ ಅಕ್ಕಪಕ್ಕ. ಆಂಜನೇಯ ಬಡಾವಣೆ 25x40 ಉತ್ತರ, 30x57 ದಕ್ಷಿಣ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಮಾರಾಟಕ್ಕಿದೆ**
ಬನಶಂಕರಿ ಬಡಾವಣೆ, ಶಿವ ಪಾರ್ವತಿ, ಡಾಲರ್ಸ್ ಕಾಲೋನಿ, ಕುಂದುವಾಡ, ಹೂಡಿಕೆ ಸೈಟುಗಳು ಮತ್ತು ಯರಗುಂಟೆಯಲ್ಲಿ ಹೂಡಿಕೆ ಸೈಟುಗಳು 30x40, 30x50, 40x60 ಎಲ್ಲಾ ಫ್ಲಾಟುಗಳು ದಾವಣಗೆರೆಯಲ್ಲಿವೆ.
097315 12365

**ಬೇಕಾಗಿದ್ದಾರೆ**
ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗೆ ಪೋಷಕರಿಗೆ/ ವಿದ್ಯಾರ್ಥಿಗಳಿಗೆ ಶಾಲೆಯ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಲು ಯುವಕ/ ಯುವತಿಯರು ಬೇಕಾಗಿದ್ದಾರೆ.
96064 83579
73386 04513, 73386 04512

**ಬೇಕಾಗಿದ್ದಾರೆ**
ಅಶೋಕ್ ಲೇಲ್ಯಾಂಡ್ ಓಡಿಸಬಲ್ಲ ಬ್ಯಾಡ್ಜ್ ವುಳ್ಳ ಅನುಭವವಿರುವ ಡ್ರೈವರ್ ಬೇಕಾಗಿದ್ದಾರೆ. ಸಂಪರ್ಕಿಸಿ :
ಮಣಿಕಂಠ ಏಜೆನ್ಸೀಸ್
ಜಯದೇವ ಪ್ರೆಸ್ ಹಿಂಭಾಗ, ಚೌಕಿಪೇಟೆ, ದಾವಣಗೆರೆ.
94482 33326, 78991 35660

**ಅಡಿಕೆ ತೋಟ ಮಾರಾಟಕ್ಕಿದೆ**
2 ಎಕರೆ 7 ಗುಂಟೆ ಇರುವ ಅಡಿಕೆ ತೋಟ ಮಾರಾಟಕ್ಕಿದೆ. ಜಗಳೂರು ರೋಡ್, ದಾವಣಗೆರೆಯಿಂದ 10 ಕಿ.ಮೀ ಹತ್ತಿರದಲ್ಲಿದೆ.
95130 15544

**ಬೇಕಾಗಿದ್ದಾರೆ**
ಹೋಟೇಲ್ ಉದ್ಯಮದಲ್ಲಿ ಅನುಭವ ಇರುವ ಮ್ಯಾನೇಜರ್ ಮತ್ತು ರೊಟ್ಟಿ ಮಾಡುವ ಮಹಿಳೆಯರು ಕ್ಲೀನಿಂಗ್ ಮಾಡಲು, ಸಪ್ಲೈ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ
63635 43487

**STAFF NEED TO WORK MODULAR FACTORY**
for modular factory work. Minimum experience 2-3 year. Salary 20k +
Aakar Modular
Davangere
99803 39333

**ಹಾಸ್ಪಿಟಲ್ ಸ್ಟಾಫ್ ಬೇಕಾಗಿದ್ದಾರೆ**
ಲೇಡಿ ಫಾರ್ಮಾಸಿಸ್ಟ್ - 2, ಅಕೌಂಟೆಂಟ್ - 1
ಯಾವುದೇ ಪದವೀಧರರು
ದೊಡ್ಡಮನೆ ಮೆಡಿಕಲ್ಸ್
2ನೇ ಕ್ರಾಸ್, ಸಿದ್ದವೀರಪ್ಪ ಬಡಾವಣೆ, ಶಾಮನೂರು ರಸ್ತೆ,
78298 08443, 97427 62462

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಮನೆ ಕೆಲಸ ಮಾಡಿಕೊಂಡು ಇರುವ ಲಿಂಗಾಯತ ಮಹಿಳೆ ಬೇಕಾಗಿದ್ದಾರೆ.
ಸಂಪರ್ಕಿಸಿ :
98448 61197
99647 43661

**ಕೆಲಸಕ್ಕೆ ಬೇಕಾಗಿದ್ದಾರೆ**
ಡಿಜಿಟಲ್ ಆ್ಯಡ್ ಏಜೆನ್ಸಿಯಲ್ಲಿ ಫೀಲ್ಡ್ ವರ್ಕ್ ನಿರ್ವಹಿಸಲು MBA, BBM ಅಥವಾ B.Com ವಿದ್ಯಾರ್ಹತೆ ವುಳ್ಳವರು ಕನ್ನಡ ಮತ್ತು ಇಂಗ್ಲಿಷ್ ಭಾಷೆ ಸುಲಲಿತವಾಗಿ ಮಾತನಾಡುವಂತವರು ಸಂಪರ್ಕಿಸಿ :
94498 30566

**ಬೇಕಾಗಿದ್ದಾರೆ**
ಸಿಸ್ಟಮ್ ವರ್ಕ್ ಮಾಡಲು ಬೇಕಾಗಿದ್ದಾರೆ.
ಕೆಲಸದ ಸಮಯ : ಬೆಳಿಗ್ಗೆ 9:30ರಿಂದ 3ರವರೆಗೆ ಶನಿವಾರ ಮತ್ತು ಭಾನುವಾರ ರಜೆ.
ಸಂಬಳ 8000
ಮೊ. 70198 14363

**REQUIRED**
Cashier and Manager for Cafe
Age under 30,
1 year Experience
74117 22272

**ಸೈಟು ಮತ್ತು ಮನೆ ಮಾರಾಟಕ್ಕಿದೆ**
40x60 ಪೂರ್ವ ಎಂಸಿಸಿ 'ಬಿ' ಸೈಟ್
40x50 ಉತ್ತರ ಎಂಸಿಸಿ 'ಬಿ' ಮನೆ
40x60 ಪಶ್ಚಿಮ ಎಂಸಿಸಿ 'ಬಿ' ಮನೆ
30x70 ಪೂರ್ವ ಎಸ್.ಎಸ್. ಲೇಔಟ್
ಏಜೆಂಟರು : 81231 15137

**ಬೇಕಾಗಿದ್ದಾರೆ**
1) ಆರ್ಡರ್ ಬುಕ್ಕಿಂಗ್ - ಪಿಯುಸಿ / SSLC
ಸ್ವವಿವರದೊಂದಿಗೆ ಸಂಪರ್ಕಿಸಿ
ಎ.ಕೆ. ಟ್ರೇಡರ್ಸ್
ಬಾಪೂಜಿ ಆಸ್ಪತ್ರೆ ರಸ್ತೆ, ಪಿ.ಜೆ.ಬಡಾವಣೆ, ದಾವಣಗೆರೆ.

**ಮನೆ ಬಾಡಿಗೆಗೆ**
ವಿನಾಯಕ ಬಡಾವಣೆ 2ನೇ ಕ್ರಾಸ್‌ನಲ್ಲಿ ಮೊದಲನೆ ಮಹಡಿಯಲ್ಲಿ 2BHK ಸುಸಜ್ಜಿತವಾದ ಮನೆ ಬಾಡಿಗೆ ಇದೆ. (Apartment)
94498 30566

**ಮನೆ ಮಾರಾಟಕ್ಕಿದೆ**
ನಗರದ SS ಲೇಔಟ್, ಎ ಬ್ಲಾಕ್, ಅಥಣಿ ಕಾಲೇಜ್ ಹತ್ತಿರ, 8ನೇ ಕ್ರಾಸ್, ಉತ್ತರ ದಿಕ್ಕಿನ 25x40ರ ಮನೆ ನೆಲಮಹಡಿ 2 BHK ಮತ್ತು ಮೇಲಿನ 1ನೇ ಮಹಡಿ ಮನೆ 1 BHK ಇರುತ್ತದೆ.
86606 14450

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**FOR RENT**
Independent duplex house with four bed rooms attached bath & house with 2 bed rooms having all facilities 2nd floor at MCC B Block, 3rd main, 6th cross behind gundi School.
M : 99008 33644

**ಹೋಮ್ ನರ್ಸಿಂಗ್ ಸರ್ವೀಸ್**
ವಯೋವೃದ್ಧರು ಬೆಡ್ ರಿಡನ್ ಪೇಷೆಂಟ್‌ಗಳಿಗೆ ಬೆಳಿಗ್ಗೆ ಮತ್ತು ಸಂಜೆ ಬಂದು ಡೈಪರ್ ಚೇಂಜ್ ಮಾಡುವುದು. ಸ್ಪಾಂಜ್ ಬಾತ್ (ಸ್ನಾನ) ಆಯಿಲ್ ಮಸಾಜ್ ಮಾಡಲಾಗುತ್ತದೆ.
85508 36642

**ಮಹಡಿ ಮನೆ ಮಾರಾಟಕ್ಕಿದೆ**
ಹರಿಹರ ನಗರದ ಹರ್ಲಾಪುರ ಬಡಾವಣೆ, 1ನೇ ಮುಖ್ಯ ರಸ್ತೆ, 2ನೇ ಕ್ರಾಸ್‌ನಲ್ಲಿ 20x60 ಅಳತೆಯ ಆರ್‌ಸಿಸಿ ಕಟ್ಟಡದ ಮಹಡಿ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ :
89704 95290, 99862 04090

**REQUIRED SUPERVISOR**
MALE - Minimum Age 30-40 years.
Degree Pass / Fail
Walkin : (Working hours 9.45 AM to 7.45 PM)
SMS STEEL TRADERS
K.R. Road, Davanagere.
98800 64464, 96636 68784

**ಶ್ರೀ ಸಾಯಿಬಾಬ ಬೋರ್‌ವೆಲ್**
ಮನೆ ಒಳಗಡೆ ಹಾಗೂ ಹೊರಗಡೆ ಸ್ಟ್ಯಾಂಡ್ ಬೋರ್ 300 ಅಡಿಯಿಂದ 450 ಅಡಿ ವರೆಗೂ ಕೊರೆಯಲಾಗುವುದು.
99640 78484
95906 15776



**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು



**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ**
ಆಕರ್ಷಕ ಸಂಬಳವಿರುತ್ತದೆ.
81056 99985
89715 04492

**ಹೊಸ ಲೇಔಟ್ ಸೈಟ್‌ಗಳು**
1950 Rs. Sqft ರಿಂದ 2500 ರ ವರೆಗೂ
ದೊಡ್ಡ ಬಾತಿ ಹತ್ತಿರ
ಮಧ್ಯವರ್ತಿಗಳಿಗೆ ಅವಕಾಶವಿಲ್ಲ
81235 29544

**ಸೈಟ್ ಮಾರಾಟಕ್ಕಿದೆ**
50x80 KHB ಲೇಔಟ್
2ನೇ ಸ್ಟೇಜ್
ಪೂರ್ವ ಮುಖವಾಗಿರುವ ಸೈಟ್ ಮಾರಾಟಕ್ಕಿದೆ.
78296 06346

**WANTED**
ITI Passed (E/e) Male or Female Candidates
Required Fluent in English
Contact :
98806 86882

**WANTED**
Required candidate for office work ( Male or Female) Also wanted Worker for sales and service (MALE AGE 18 to 35) in Computer shop.
NEEMS DISTRIBUTORS
574/1 6th Main Road, P.J. Extension

**RENT**
Shop For Rent For Commercial Purpoce In P.J.Ext, Chetana Hotel Road, # 431/1, 4th Main, 7th Cross, Davanagere.
Size 12 X10 feet.
Contact. 94485 90794

**TUITIONS**
Class 1-10
(State/CBSE / ICSE / IGCSE / Olympiad
PU 1-2 (PCMB)
Supplementary
98444 92888

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**AdBlue / DEF**
available with Best Quality & Price for All BS6 Diesel
Commercial & Passanger Vehicles
Visit: Best Lubricants
Opp. to New Pvt Bus Stand PB Road, Davangere.
73380 33337

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

**ಅಧಿಕೃತ ಚೀಟಿ ಸಂಸ್ಥೆ**
ರೂ. 5 ಲಕ್ಷ ಚೀಟಿ ಪ್ರಾರಂಭ 50 ಸದಸ್ಯರು 6,500/- ರಿಂದ 10,000 /- ರೂ ವರೆಗೆ,
ಸ್ಕಂದ ಚಿಟ್ ಫಂಡ್ಸ್- (ರಿ)
ದಾವಣಗೆರೆ.
78997 75159

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಸಾಯಿ ಎಗ್ ಸೆಂಟರ್‌ನಲ್ಲಿ ಆಟೋ ಡ್ರೈವರ್, ಟಾಟಾ ACE ಡ್ರೈವರ್ ಮತ್ತು ಅಂಗಡಿಯ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಉತ್ತೀರ್ಣ
ಶಿವಪ್ಪ ಸರ್ಕಲ್, ದಾವಣಗೆರೆ.
96860 22969

# ಬಾಳಿಕೆ, ಗುಣಮಟ್ಟದ ರಸ್ತೆ ದುರಸ್ತಿ ಕಾಮಗಾರಿಗೆ ಒತ್ತು ಕೊಡಿ



**ಗುತ್ತಿಗೆದಾರನಿಗೆ ಶಾಸಕ ಬಸವಂತಪ್ಪ ತಾಕೀತು**

ದಾವಣಗೆರೆ, ಫೆ. 24- ರಸ್ತೆ ದುರಸ್ತಿ ಮಾಡಿ ತಿಂಗಳು ಕಳೆಯುವುದರೊಳಗೆ ಕಿತ್ತು ಹೋಗಬಾರದು. ತಾತ್ಕಾಲಿಕ ದುರಸ್ತಿ ಮಾಡಿದರೂ ದೀರ್ಘ ಕಾಲ ಬಾಳಿಕೆ ಬರುವಂತಿರಬೇಕೆಂದು ಗುತ್ತಿಗೆದಾರನಿಗೆ ಶಾಸಕ ಕೆ.ಎಸ್. ಬಸವಂತಪ್ಪ ತಾಕೀತು ಮಾಡಿದರು.

ತಾಲ್ಲೂಕಿನ ಗುಡಾಳು-ಹಾಲುವರ್ತಿ-ಕೆಂಚಮ್ಮನಹಳ್ಳಿ ಮಾರ್ಗದ ಲೋಕೋಪಯೋಗಿ ಇಲಾಖೆಗೆ ಒಳಪಡುವ ರಸ್ತೆಗೆ ತಾತ್ಕಾಲಿಕ ಡಾಂಬರೀಕರಣ ದುರಸ್ತಿ ಕಾಮಗಾರಿ ಸ್ಥಳಕ್ಕೆ ಸೋಮವಾರ ಭೇಟಿ ನೀಡಿ, ನಡೆಯುತ್ತಿದ್ದ ದುರಸ್ತಿ ಕಾಮಗಾರಿ ಪರಿಶೀಲನೆ ನಡೆಸಿದರು.

ಗುಡಾಳು-ಕೆಂಚಮ್ಮನಹಳ್ಳಿ ಗ್ರಾಮಗಳ ಸಂಪರ್ಕ ಮಾಡುವ ರಸ್ತೆಯ ಮಧ್ಯೆ ಕೆಲವೆಡೆ ಗುಂಡಿಗಳು ಬಿದ್ದು ಹದಗೆಟ್ಟಿದ್ದು, ತಾತ್ಕಾಲಿಕ ರಸ್ತೆ ದುರಸ್ತಿ ಡಾಂಬರೀಕರಣ ಕಾಮಗಾರಿ ನಡೆಯುತ್ತಿದ್ದು, ಖುದ್ದು ಸ್ಥಳಕ್ಕೆ ಭೇಟಿ ನೀಡಿ ಗುಣಮಟ್ಟ ಪರಿಶೀಲಿಸಿದರು.

ತಾತ್ಕಾಲಿಕ ರಸ್ತೆ ದುರಸ್ತಿ ಕಾಮಗಾರಿಯೂ ನೂರಾರು ವಾಹನಗಳು ಓಡಾಡಿದ ಮೇಲೆ ಕಿತ್ತು ಹೋಗಿರುತ್ತದೆ. ಇದು ಆಗಬಾರದು. ಶಾಶ್ವತ ಕಾಮಗಾರಿ ಕೈಗೊಳ್ಳುವವರೆಗೆ ದುರಸ್ತಿ ಮಾಡಿದ ಕಾಮಗಾರಿಯು ಸುಸ್ಥಿತಿಯಲ್ಲಿರಬೇಕು. ಪದೇ ಪದೇ ದುರಸ್ತಿ ಮಾಡುವಂತಿರಬಾರದು.ಪದೇ ಪದೇ ಕಾಮಗಾರಿ ನಡೆಸುವುದರಿಂದ ಸರ್ಕಾರದ ಹಣ ಪೋಲಾಗುತ್ತದೆ. ಅದನ್ನು ತಡೆಯುವ ಕೆಲಸ ಆಗಬೇಕೆಂದು ಗುತ್ತಿಗೆದಾರನಿಗೆ ಸೂಚನೆ ನೀಡಿದರು.

ರಸ್ತೆಗೆ ನೆಪಕ್ಕೆ ಒಂದಿಷ್ಟು ಜಲ್ಲಿ ಚೆಲ್ಲಿ ಡಾಂಬರು ಹರಡಿ ದುರಸ್ತಿ ಮಾಡಬೇಡಿ. ಕೆಲವೆಡೆ ತಾತ್ಕಾಲಿಕ ರಸ್ತೆ ದುರಸ್ತಿ ಕಾಮಗಾರಿ ಪರಿಶೀಲನೆ ನಡೆಸಿದ ಸಂದರ್ಭದಲ್ಲಿ ಡಾಂಬರು ರಸ್ತೆಯನ್ನು ಉಜ್ಜಿದರೆ ಡಾಂಬರು ಪುಡಿ, ಮಣ್ಣು ಬರುತ್ತಿದೆ. ಸಣ್ಣ ವಾಹನ ಓಡಾಡಿದರೂ ರಸ್ತೆ ಗುಂಡಿ ಬೀಳುವಂತಾಗಿರುತ್ತದೆ. ಹೀಗಾಗಿ ತಾತ್ಕಾಲಿಕ ರಸ್ತೆ ದುರಸ್ತಿ ಕಾಮಗಾರಿಯೂ ಶಾಶ್ವತವಾಗಿ ಉಳಿಯುವಂತಹ ಕೆಲಸ ಆಗಬೇಕೆಂದರು.

## ಗ್ರಾಮೀಣ ಅಂಚೆ ಸೇವಕರ ನೇಮಕಾತಿಗೆ ಅರ್ಜಿ

ದಾವಣಗೆರೆ, ಫೆ.24- ಅಂಚೆ ಇಲಾಖೆಯಲ್ಲಿ ಗ್ರಾಮೀಣ ಅಂಚೆ ಸೇವಕರ ನೇಮಕಾತಿ ಸಂಬಂಧ ಇಲಾಖೆಯಲ್ಲಿ ಖಾಲಿ ಇರುವ ಶಾಖಾ ಅಂಚೆ ಪಾಲಕ, ಸಹಾಯಕ ಶಾಖಾ ಅಂಚೆ ಪಾಲಕ ಮತ್ತು ಡಾಕ್ ಸೇವಕ್ ಹುದ್ದೆಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ವೆಬ್‌ಸೈಟ್ www.indiapostgdsonline.gov.in ನಲ್ಲಿ ಮಾರ್ಚ್ 3 ರೊಳಗಾಗಿ ಅರ್ಜಿ ಸಲ್ಲಿಸಬೇಕು.

ಎಲ್ಲಾ ಹುದ್ದೆಗಳಿಗೆ 10ನೇ ತರಗತಿ ತೇರ್ಗಡೆ ಕಡ್ಡಾಯ. ಇಂಗ್ಲಿಷ್ ಮತ್ತು ಗಣಿತದಲ್ಲಿ ಉತ್ತೀರ್ಣ ಅಂಕಗಳೊಂದಿಗೆ 10ನೇ ತರಗತಿಯಲ್ಲಿ, ಕನ್ನಡವನ್ನು ಒಂದು ಭಾಷೆಯಾಗಿ ಅಧ್ಯಯನ ಮಾಡಿರಬೇಕು. ಹೆಚ್ಚಿನ ಮಾಹಿಗಾಗಿ ಸಮೀಪದ ಯಾವುದೇ ಅಂಚೆ ಕಚೇರಿಯನ್ನು ಅಥವಾ ಮೇಲೆ ತಿಳಿಸಿದ ವೆಬ್‌ಸೈಟ್ ಲಿಂಕ್‌ನ್ನು ಸಂಪರ್ಕಿಸಲು ಅಂಚೆ ಅಧೀಕ್ಷಕರು ತಿಳಿಸಿದ್ದಾರೆ.

# ಮನೆ ಮದ್ದು ಮರೆತು ಹೆಚ್ಚುತ್ತಿರುವ ಆಸ್ಪತ್ರೆ ಅವಲಂಬನೆ

### ವಕೀಲರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಜಿಲ್ಲಾ ನ್ಯಾಯಾಧೀಶರಾದ ರಾಜೇಶ್ವರಿ ಎನ್.ಹೆಗಡೆ ವ್ಯಾಕುಲತೆ



ದಾವಣಗೆರೆ. ಫೆ. 24 - ಹಿಂದೆಲ್ಲಾ ಸಣ್ಣಪುಟ್ಟ ಆರೋಗ್ಯ ಸಮಸ್ಯೆಗಳ ಕಾರಣಕ್ಕೆ ಆಸ್ಪತ್ರೆಗೆ ಹೋಗುತ್ತಿರಲಿಲ್ಲ. ಈಗ ಮನೆಮದ್ದು ಮರೆತು ಆಸ್ಪತ್ರೆಗಳನ್ನು ಅವಲಂಬಿಸುವಂತಾಗಿದೆ ಎಂದು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎನ್.ಹೆಗಡೆ ಬೇಸರ ವ್ಯಕ್ತಪಡಿಸಿದರು.

ನಗರದ ಜಿಲ್ಲಾ ವಕೀಲರ ಭವನದಲ್ಲಿ ಆಯುಷ್ ಇಲಾಖೆ, ಜಿಲ್ಲಾ ವಕೀಲರ ಸಂಘ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಹಯೋಗದಲ್ಲಿ ವಕೀಲರು, ನ್ಯಾಯಾಧೀಶರು ಹಾಗೂ ನ್ಯಾಯಾಲಯ ಸಿಬ್ಬಂದಿಗೆ ಮೊನ್ನೆ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ತಪಾಸಣೆ ಮತ್ತು ಔಷಧ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಹಿಂದಿನ ಕಾಲದಲ್ಲಿ ಯಾರಿಗೇ ಸಮಸ್ಯೆಯಾದರೂ ಮನೆಮದ್ದು ಇರುತ್ತಿತ್ತು. ಆದರೆ ಇಂದು ನಾವು ಆಧುನೀಕತೆ ಭರಾಟೆಯಲ್ಲಿ ಅತ್ಯಮೂಲ್ಯವಾದ ಮನೆಮದ್ದು ಮರೆತಿದ್ದೇವೆ. ನಿಯಮಿತ ಆಹಾರ ಸೇವಿಸದ ಕಾರಣ ಶರೀರ ಸಮತೋಲನದಲ್ಲಿಲ್ಲ. ಆಯುಷ್ ಸೇರಿದಂತೆ ಆರೋಗ್ಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಇಲಾಖೆಗಳು ಸಾಕಷ್ಟು ಯೋಜನೆ, ಕಾರ್ಯಕ್ರಮ ಜಾರಿಗೊಳಿಸುತ್ತಿದ್ದರೂ ಜನರಿಗೆ ಅವುಗಳ ಲಾಭ ತಲುಪುತ್ತಿಲ್ಲ. ಮಾಧ್ಯಮಗಳಲ್ಲಿ ಬರುವ ಸುದ್ದಿಯ ನ್ನಾದರೂ ನೋಡಿ ಜನರು ಇದರ ಲಾಭ ಪಡೆದುಕೊಳ್ಳಬೇಕು ಎಂದು ಅವರು ಆಶಿಸಿದರು.

ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ.ಕರೆಣ್ಣವರ ಮಾತನಾಡಿ, ಕೋವಿಡ್ ವೇಳೆ ಗಿಡಮೂಲಿಕೆಯ ಮಹತ್ವವನ್ನು ಇಡೀ ಜಗತ್ತು ಅರಿತಿದೆ. ನಮ್ಮ ಋಷಿಮುನಿಗಳು ಪರಿಚಯಿಸಿದ ಯೋಗ ಮತ್ತು ಆಯುರ್ವೇದವು ಕಾಯಿಲೆ ಉಪಶಮನಕ್ಕೆ ಪರಿಹಾರವಾಗಿದೆ. ಪರಿಸರದ ಮೂಲಕ ಬಂದ ಆರೋಗ್ಯ ಪದ್ಧತಿಯನ್ನು ನಾವೆಲ್ಲರೂ ರೂಢಿಸಿಕೊಳ್ಳಬೇಕು. ಪ್ರಸ್ತುತ ವಕೀಲರು, ನ್ಯಾಯಾಧೀಶರು, ಸಿಬ್ಬಂದಿ ಸದಾ ಒತ್ತಡದ ಜೀವನ ನಡೆಸುತ್ತಾರೆ. ಹೀಗಾಗಿ ತಿಂಗಳಿಗೊಮ್ಮೆಯಾದರೂ ಮಧುಮೇಹ ಹಾಗೂ ರಕ್ತದೊತ್ತಡ ಪರೀಕ್ಷಿಸಿಕೊಳ್ಳಬೇಕು. ದಿನದ ಒಂದು ಗಂಟೆಯಾದರೂ ಯೋಗ ಮತ್ತು ಧ್ಯಾನಕ್ಕೆ ಸಮಯ ಮೀಸಲಿಡಬೇಕು. ಈ ಮೂಲಕ ವಕೀಲರು ಮತ್ತು ನ್ಯಾಯಾಂಗ ಸಿಬ್ಬಂದಿ ತಮ್ಮ ಆರೋಗ್ಯ ಸುಧಾರಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಮಂಜಪ್ಪ ಹನುಮಂತಪ್ಪ ಅಣ್ಣಯ್ಯನವರ್ ಮಾತನಾಡಿ, ಎಲ್ಲಾ ಭಾಗ್ಯಗಳ ಪೈಕಿ ಆರೋಗ್ಯ ಭಾಗ್ಯ ದೊಡ್ಡದು. 15 ದಶಲಕ್ಷ ವರ್ಷಗಳ ಹಿಂದೆ ಮನುಷ್ಯ ಜನಿಸಿದಾಗ ತನ್ನ ಆರೋಗ್ಯವನ್ನು ತಾನೇ ಕಾಪಾಡಿಕೊಳ್ಳುವಂತಿದ್ದ. ಆದರೆ, ಕಲುಷಿತ ಆಹಾರ ಸೇವನೆಯಿಂದಾಗಿ ಇಂದು ನಮ್ಮ ಆರೋಗ್ಯ ಹದಗೆಟ್ಟಿದೆ. ಜೀವವನ್ನು ನಿಯಂತ್ರಣದಲ್ಲಿಡುವ ಶಕ್ತಿ ಇಲ್ಲದಿದ್ದರೂ, ಜೀವನ ರೂಪಿಸಿಕೊಳ್ಳುವ ಶಕ್ತಿ ನಮಗಿದೆ. ಇದಕ್ಕಾಗಿ ಸರಿಯಾಗಿ ಊಟ ಮಾಡಿ, ಕುಟುಂಬದವರ ಜೊತೆಗೆ ಉತ್ತಮ ಬಾಂಧವ್ಯದಿಂದ ಇರಬೇಕು. ಚೆನ್ನಾಗಿ ನಿದ್ದೆ ಮಾಡಿ ಉತ್ತಮ ಆರೋಗ್ಯ ಹೊಂದಬೇಕು. ಆಹಾರ ಸೇವಿಸುವಲ್ಲಿ ಮುತುವರ್ಜಿ ವಹಿಸುವ ಜೊತೆಗೆ ಸದಾ ಆನಂದವಾಗಿರಬೇಕು. ಇದರಿಂದ ಆರೋಗ್ಯ ಚೆನ್ನಾಗಿರುತ್ತದೆ ಎಂದರು.

ಜಿಲ್ಲಾ ಆಯುಷ್ ಇಲಾಖೆ ಅಧಿಕಾರಿ ಡಾ.ಬಿ.ಯು.ಯೋಗೇಂದ್ರ ಕುಮಾರ್ ಮಾತನಾಡಿ, ಜನರನ್ನು ದೈಹಿಕ ಮತ್ತು ಮಾನಸಿಕವಾಗಿ ಸದೃಢಗೊಳಿಸುವುದೇ ಆಯುಷ್ ಇಲಾಖೆ ಧ್ಯೇಯವಾಗಿದೆ. ಈ ಹಿನ್ನೆಲೆಯಲ್ಲಿ ಸಾರ್ವ ಜನಿಕರಿಗೆ ಅನೇಕ ಆರೋಗ್ಯ ಶಿಬಿರ ಹಮ್ಮಿಕೊಂಡಿದ್ದೇವೆ ಎಂದು ತಿಳಿಸಿದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್. ಹೆಚ್.ಅರುಣ್ ಕುಮಾರ್ ಮಾತನಾಡಿ, ಸಮಾಜದ ಆರೋಗ್ಯ ಕಾಪಾಡುವ ವಕೀಲರ ಆರೋಗ್ಯಕ್ಕಾಗಿ ಆಯುಷ್ ಇಲಾಖೆಯವರು ತಪಾಸಣೆ ಮಾಡುತ್ತಿರುವುದು ಶ್ಲಾಘನೀಯ. ಜಿಲ್ಲಾಸ್ಪತ್ರೆ ಸೇರಿದಂತೆ ಬೇರೆ ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಕ್ಕೆ ಬೇರೆ ಕಡೆ ಚೀಟಿ ಬರೆಯುವುದು ಸರ್ವೇಸಾಮಾನ್ಯ ಆದರೆ, ಆಯುಷ್ ಆಸ್ಪತ್ರೆಯಲ್ಲಿ ಯಾವುದೇ ಚೀಟಿಯನ್ನು ಹೊರಗೆ ಬರೆದುಕೊಡುವುದಿಲ್ಲ. ಆಹಾರವೇ ಔಷಧ ಎಂಬಂತೆ ಆಯುಷ್ ಇಲಾಖೆಯ ಸಲಹೆ ಪಡೆದು ನಾವು ಬದಲಾಗಬೇಕಿದೆ ಎಂದರು.

ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಆರ್.ಎನ್.ಪ್ರವೀಣ್ ಕುಮಾರ್, ಎಸ್.ಟಿ.ಎಫ್.ಸಿ ನ್ಯಾಯಾಧೀಶ ಶ್ರೀರಾಮ ನಾರಾಯಣ ಹೆಗಡೆ, ನ್ಯಾಯಾಧೀಶರಾದ ಶಿವಪ್ಪ ಗಂಗಪ್ಪ ಸಲಗರೆ, ನ್ಯಾಯಾಧೀಶರಾದ ಟಿ.ಎಂ.ನಿವೇದಿತ, ವಕೀಲರ ಸಂಘದ ಉಪಾಧ್ಯಕ್ಷ ಜಿ.ಕೆ.ಬಸವರಾಜ್ ಗೋಪನಾಳ್, ಕಾರ್ಯದರ್ಶಿ ಎಸ್. ಬಸವರಾಜ್, ಸಹ ಕಾರ್ಯದರ್ಶಿ ಎ.ಎಸ್. ಮಂಜುನಾಥ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಆತ್ಮವಿಶ್ವಾಸವೇ ಶಿಕ್ಷಣದ ಮೊದಲ ಮೆಟ್ಟಿಲು : ಇಸ್ಮಾಯಿಲ್ ಯಲಿಗಾರ



**ಹರಪನಹಳ್ಳಿ**

ಹರಪನಹಳ್ಳಿ, ಫೆ. 24- ಆತ್ಮವಿಶ್ವಾಸವೇ ಶಿಕ್ಷಣದ ಮೊದಲ ಮೆಟ್ಟಿಲು ಎಂದು ಸಂಪನ್ಮೂಲ ವ್ಯಕ್ತಿ ಇಸ್ಮಾಯಿಲ್ ಯಲಿಗಾರ ಹೇಳಿದರು.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲೆಯ ಎಸ್ಸೆಸ್ಸೆಲ್ಸಿ ಮಕ್ಕಳಿಗೆ ಪರೀಕ್ಷೆ ಒಂದು ಹಬ್ಬ ಕುರಿತಂತೆ ವ್ಯಕ್ತಿತ್ವ ವಿಕಸನ ಹಾಗೂ ಯಶಸ್ಸು ಎಂದರೇನು ಎಂಬ ವಿಷಯ ಕುರಿತು ಅವರು ಮಾತನಾಡುತ್ತಿದ್ದರು.

ಸೋಲನ್ನೇ ಮೆಟ್ಟಿಲು ಮಾಡಿಕೊಂಡು ಸಾಧನೆ ಮಾಡಬೇಕು. ತಂದೆ-ತಾಯಿಯರ ಶ್ರಮದಾಯಕ ಬದುಕು, ಗುರುಗಳ ಪಾಠ, ಬೋಧನೆಯನ್ನು ನೆನಪಿಸಿಕೊಂಡು, ಜೀವನದಲ್ಲಿ ಯಶಸ್ಸು ಕಾಣಬೇಕು. ಸತತ ಪರಿಶ್ರಮ, ಬುದ್ಧಿವಂತಿಕೆ ಹಾಗೂ ಸೃಜನಶೀಲತೆಯಿಂದ ಓದು, ಬರವಣಿಗೆಯನ್ನು ದಕ್ಕಿಸಿಕೊಂಡರೆ, ನಿಜವಾದ ಫಲಿತಾಂಶ ದೊರೆಯುತ್ತದೆ.

ಭಾರತದ ಸಾಧನೀಯ ರಾಷ್ಟ್ರಪತಿಗಳಾದ ಎಪಿಜೆ ಅಬ್ದುಲ್ ಕಲಾಂ, ಕೆ.ಆರ್. ನಾರಾಯಣ್, ಅಮೆರಿಕಾ ಕಂಡ ಶ್ರೇಷ್ಠ ಅಧ್ಯಕ್ಷ ಅಬ್ರಹಾಂ ಲಿಂಕನ್, ಭಾರತದ ಪ್ರಧಾನಿ ಮನಮೋಹನ್ ಸಿಂಗ್ ಇವರೆಲ್ಲ ಓದಿದ್ದು ಸರ್ಕಾರಿ ಶಾಲೆಗಳಲ್ಲಿ. ಇವರೆಲ್ಲರೂ ಸಾಧನೆಯ ಬದುಕು ಕಂಡವರು. ಸಂವಿಧಾನ ಕೊಟ್ಟ ಅಂಬೇಡ್ಕರ್ ಅವರ ಬದುಕು ನಮಗೆ ದಾರಿದೀಪವಾಗಬೇಕು.

ಬುದ್ಧ, ಬಸವಣ್ಣ, ಗಾಂಧಿ ಅಲ್ಲದೆ ಸೂಫಿ, ಸಂತರ ಜೀವನ ನಮಗೆ ಮಾರ್ಗದರ್ಶನವಾಗಲಿ. ನಮ್ಮ ಬಗ್ಗೆ ನಮಗೆಲ್ಲ ಆತ್ಮವಿಶ್ವಾಸ ಇರಲಿ ಎಂದರು.

ಈ ಸಭೆಯಲ್ಲಿ ಪ್ರೌಢಶಾಲೆಯ ಮುಖ್ಯಗುರು ಮಮ್ತಾಜ್ ಬೇಗಂ, ಶಿಕ್ಷಕರಾದ ಜಯ ಮಾಲತೇಶ್, ಲತಾ ರಾಥೋಡ್, ಪಂಪಾನಾಯ್ಕ್, ವಿಶ್ವನಾಥ್, ಶಬಾನಾ ಸೇರಿದಂತೆ ಇತರರು ಇದ್ದರು.

# ದೇವರಬೆಳಕೆರೆ : ವಿಜೃಂಭಣೆಯ ರಥೋತ್ಸವ, ಗಮನ ಸೆಳೆದ ಕಾಲಶಸ್ತ್ರ, ತ್ರಿಶೂಲ ಪವಾಡ





ಮಲೇಬೆನ್ನೂರು, ಫೆ.24- ದೇವರಬೆಳಕೆರೆ ಗ್ರಾಮದ ಆರಾಧ್ಯ ದೈವ ಶ್ರೀ ಮೈಲಾರ ಲಿಂಗೇಶ್ವರ ಸ್ವಾಮಿಯ ಮಹಾರಥೋತ್ಸವವು ಸೋಮವಾರ ಸಂಜೆ ಅಪಾರ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರುಗಿತು.

ರಥೋತ್ಸವದ ಅಂಗವಾಗಿ ಮಂಗಳವಾರ ಸಂಜೆ ನಡೆದ ಕಾಲಶಸ್ತ್ರ, ತ್ರಿಶೂಲ ಮತ್ತು ಸರಪಳಿ ಪವಾಡಗಳು ಎಲ್ಲರ ಗಮನ ಸೆಳೆದವು. ಸಂಜೆ ಓಕುಳಿಯೊಂದಿಗೆ ಜಾತ್ರೆಗೆ ತೆರೆ ಬಿದ್ದಿತು.

## ಪದ್ಮಸಾಲಿ ಸಮಾಜದಿಂದ ನಾಳೆ ಶಿವರಾತ್ರಿ ಕಾರ್ಯಕ್ರಮ, ರಥೋತ್ಸವ

ದಾವಣಗೆರೆ, ಫೆ. 24- ನಗರದ ಶ್ರೀ ಮಾರ್ಕಂಡೇಶ್ವರ ಪದ್ಮಶಾಲಿ ಸಮಾಜದ ವತಿಯಿಂದ ಮಹಾಶಿವರಾತ್ರಿ ಪ್ರಯುಕ್ತ ನಾಡಿದ್ದು ದಿನಾಂಕ 26 ಮತ್ತು 27 ರಂದು ಎರಡು ದಿನಗಳ ಕಾಲ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ಮಾರ್ಕಂಡೇಶ್ವರ ಪದ್ಮಶಾಲಿ ಸಮಾಜ ಸೇವಾ ಸಂಘದ ಪ್ರಧಾನ ಕಾರ್ಯದರ್ಶಿ ವಿ.ಎಸ್. ಪರಶುರಾಮ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಾಡಿದ್ದು ದಿನಾಂಕ 26 ರ ಬುಧವಾರ ಬೆಳಿಗ್ಗೆ 6.30 ರಿಂದ 7.30 ರವರೆಗೆ ಸ್ವಾಮಿಗೆ ಅಭಿಷೇಕ, ಸಂಜೆ 6.30 ರಿಂದ ವಿಶೇಷ ರುದ್ರಾಭಿಷೇಕ, ಕ್ಷೀರಾಭಿಷೇಕ, ಶಿವ ಅಷ್ಟೋತ್ತರ ನಾಮಾವಳಿ, ತಿಲಾರ್ಚನೆ, ಮಹಾಮಂಗಳಾರತಿ ನಡೆಯಲಿದೆ. ಇದೇ ಸಂದರ್ಭದಲ್ಲಿ ಸಾಂಸ್ಕೃತಿಕ ಸ್ಪರ್ಧೆ ನಡೆಸಲಾಗುವುದು.

ದಿನಾಂಕ 27 ರ ಗುರುವಾರ ಬೆಳಿಗ್ಗೆ 9.30 ಕ್ಕೆ ಶ್ರೀ ಸ್ವಾಮಿಯ ಬೆಳ್ಳಿ ರಥೋತ್ಸವ ಜರುಗಲಿದ್ದು, ತುಮ್ಮಿನಕಟ್ಟೆಯ ಶ್ರೀ ಪ್ರಭುಲಿಂಗ ಸ್ವಾಮೀಜಿ ಪೂಜೆ ನೆರವೇರಿಸಲಿದ್ದಾರೆ. ಎಸ್‌ಕೆಪಿ ರಸ್ತೆಯಿಂದ ಪ್ರಾರಂಭವಾಗುವ ರಥೋತ್ಸವ ದೊಡ್ಡಪೇಟೆ, ಬಿ.ಎಸ್. ಚನ್ನಬಸಪ್ಪ ಬಟ್ಟೆ ಅಂಗಡಿ ರಸ್ತೆ, ಹಾಸಬಾವಿ ಸರ್ಕಲ್, ಗಡಿಯಾರ ಕಂಬದ ರಸ್ತೆ, ಕಾಯಿಪೇಟೆ, ಹೊಂಡದ ಸರ್ಕಲ್ ಮೂಲಕ ದೇವವಸ್ಥಾನ ತಲುಪಲಿದೆ. ನಂತರ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ಬೊಮ್ಮ ತಿಪ್ಪೇಸ್ವಾಮಿ, ಸತ್ಯನಾರಾಯಣ ಶೇಪೂರ್, ನಿಂಗಪ್ಪ ಅರಣಿ, ಬಿ.ಎಸ್.ಕೆ. ಪರಶುರಾಮ್, ಟಿ.ಎಸ್. ರವಿಕುಮಾರ್, ಮಂಜುನಾಥ್, ಸಂಗಪ್ಪ ಮತ್ತಿತರರು ಭಾಗವಹಿಸಿದ್ದರು.

## ಹೆಲ್ಮೆಟ್ ಕಾರ್ಯಾಚರಣೆ

(1ನೇ ಪುಟದಿಂದ) ವೇಳೆ ನಗರ ಡಿವೈಎಸ್ಪಿ ಶರಣಬಸವೇಶ್ವರ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ, ನಿವೃತ್ತ ಪೊಲೀಸ್ ಅಧಿಕಾರಿ ಪ್ರಹ್ಲಾದ್, ಸಂಚಾರ ಠಾಣೆಯ ಇನ್‌ಸ್ಪೆಕ್ಟರ್ ಮಂಜುನಾಥ ನಲವಾಗಲು, ಪಿಎಸ್‌ಐಗಳಾದ ಜಯಶೀಲ, ಕೆ. ಎನ್. ಶೈಲಜಾ, ಇತರೆ ಸಿಬ್ಬಂದಿಗಳಿದ್ದರು.

## ನಗರದಲ್ಲಿಂದು ಕುರಿ, ಮೇಕೆ ಸಾಕಾಣಿಕೆ

ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿಯು ಇಂದು ನಡೆಯಲಿದೆ. ವಿವರಕ್ಕೆ ಸಂಪರ್ಕಿಸುವ ದೂರವಾಣಿ : 08192-233787.

## ಇಂದು ಶರಣ ಚಿಂತನ ಆನ್‌ಲೈನ್ ಗೋಷ್ಠಿ

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದಿಂದ ಆನ್‌ಲೈನ್‌ನಲ್ಲಿ ಶರಣ ಚಿಂತನ ಗೋಷ್ಠಿ ಇಂದು ಸಂಜೆ 7 ರಿಂದ ಸಂಜೆ 9ರವರೆಗೆ ನಡೆಯಲಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಹೆಳವರಹುಂಡಿ ಸಿದ್ದಪ್ಪ ವಹಿಸಲಿದ್ದು, ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ ಪ್ರಾಸ್ತಾವಿಕ ನುಡಿಗಳಾನ್ನಾಡುವರು.

ಡಾ. ಕೆ. ರವೀಂದ್ರನಾಥ ಅವರು 'ವಚನಕಾರರ ವಚನೇತರ ಸಾಹಿತ್ಯ' ವಿಷಯದ ಬಗ್ಗೆ ಮಾತನಾಡುವರು.

ಜಿ.ಎಂ. ಕುಮಾರಪ್ಪ, ಭರಮಪ್ಪ ಮೈಸೂರು ನಿರೂಪಣೆ ಮತ್ತು ಕಾರ್ಯ ನಿರ್ವಹಿಸುವರು.



## ಭಾವಸಾರ ಕ್ಷತ್ರಿಯ ತರುಣ ಮಂಡಳಿಯಿಂದ ಶಿವಾಜಿ ಜಯಂತಿ

ದಾವಣಗೆರೆ, ಫೆ. 24 - ನಗರದ ಮಹಾರಾಜಪೇಟೆಯ ಶ್ರೀ ವಿಠಲ ರುಕುಮಾಯಿ ದೇವಸ್ಥಾನದಲ್ಲಿ ಶ್ರೀ ಭಾವಸಾರ ಕ್ಷತ್ರಿಯ ತರುಣ ಮಂಡಳಿಯ ವತಿಯಿಂದ ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಉತ್ಸವವು ವಿಜೃಂಭಣೆಯಿಂದ ಜರುಗಿತು.

ದೈವ ಮಂಡಳಿಯ ಅಧ್ಯಕ್ಷ ರಘು ಮೊಸಳೆ, ಭಜನಾ ಮಂಡಳಿಯ ಅಧ್ಯಕ್ಷ ನಿಂಗುಸ್ವಾಮಿ ಖಿಮಿತ್ಕರ್ ಮತ್ತು ತರುಣ ಮಂಡಳಿ ಅಧ್ಯಕ್ಷ ವಿನಾಯಕ್ ಟಿಕಾರೆ ಹಾಗೂ ಇತರೆ ಎಲ್ಲಾ ಅಂಗ ಸಂಸ್ಥೆಗಳ ಮುಖ್ಯಸ್ಥರಿಂದ ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಮೂರ್ತಿಗೆ ಪೂಜೆ ಸಲ್ಲಿಸಲಾಯಿತು.

ವಿಶೇಷ ಆಹ್ವಾನಿತರಾಗಿ ಭಾವಸಾರ ವಿಜನ್ ಅಧ್ಯಕ್ಷ ಮಂಜುನಾಥ ಪುಟಾಣ್ಕರ್ ಮತ್ತು ನಿಂಗುಸ್ವಾಮಿ ಖಿಮಿತ್ಕರ್, ಚಂದ್ರಕಾಂತ್ ವಾದೋನಿ ಅವರುಗಳು ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಬಗ್ಗೆ ಮಾತನಾಡಿದರು.

# ಜಿ.ಎಂ.ಚಾರಿಟಿ ಫೌಂಡೇಶನ್ ಸಹಯೋಗದಲ್ಲಿ ಉದ್ಯೋಗ ಮೇಳ



ಹರಿಹರ, ಫೆ.24- ಸ್ನೇಹ ಸಂಭ್ರಮ ಗೆಳೆಯರ ಬಳಗದ ವತಿಯಿಂದ ತಾಲ್ಲೂಕಿನ ಭಾನುವಳ್ಳಿ ಗ್ರಾಮದಲ್ಲಿ ಜಿ. ಮಲ್ಲಿಕಾರ್ಜುನಪ್ಪ ಮತ್ತು ಹಾಲಮ್ಮ ಚಾರಿಟಿ ಫೌಂಡೇಶನ್ ಸಹಯೋಗದಲ್ಲಿ ಉದ್ಯೋಗ ಮೇಳ ಯಶಸ್ವಿಯಾಗಿ ನಡೆಯಿತು.

ಭಾನುವಳ್ಳಿ ಸುತ್ತಮುತ್ತಲಿನ 25ಕ್ಕೂ ಅಧಿಕ ಗ್ರಾಮದ 856 ಉದ್ಯೋಗಾಕಾಂಕ್ಷಿಗಳು ಪಾಲ್ಗೊಂಡಿದ್ದರು. ಈ ವೇಳೆ 511 ಯುವಕರಿಗೆ ಉದ್ಯೋಗ ನೇಮಕಾತಿ ಪತ್ರ ನೀಡಲಾಯಿತು.

ಹಳ್ಳಿಗಳಲ್ಲಿ ಉದ್ಯೋಗ ಮೇಳ ಮಾಡುವುದು ಅತಿ ವಿರಳ. ಇಂತಹ ಸಾಮಾಜಿಕ ಕಾರ್ಯಕ್ಕೆ ಮುಂದಾದ ಸ್ನೇಹ ಸಂಭ್ರಮ ಗೆಳೆಯರ ಬಳಗದ ಕಾರ್ಯ ಶ್ಲಾಘನೀಯ. ಜಿ.ಮಲ್ಲಿಕಾರ್ಜುನಪ್ಪ ಮತ್ತು ಹಾಲಮ್ಮ ಚಾರಿಟಿ ಫೌಂಡೇಶನ್ ವತಿಯಿಂದ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಉದ್ಯೋಗಾವಕಾಶ, ಆರೋಗ್ಯ ಸುಧಾರಣೆ ಹಾಗೂ ಶಿಕ್ಷಣದ ಗುಣಮಟ್ಟ ಹೆಚ್ಚಿಸುವ ಕಾರ್ಯಕ್ರಮ ನೀಡಲಿದೆ ಎಂದು ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದರು.

ಈ ವೇಳೆ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ಮಾಜಿ ಸಂಸದ ಬಿ.ವಿ ನಾಯಕ್, ಶಾಸಕ ಬಿ.ಪಿ ಹರೀಶ್, ಮಾಜಿ ಶಾಸಕ ಹೆಚ್. ಎಸ್. ಶಿವಶಂಕರ್, ವೀರೇಶ್ ಹನಗವಾಡಿ, ಟಿ. ಆರ್. ತೇಜಸ್ವಿ ಕಟ್ಟಿಮನಿ, ಗ್ರಾಮದ ಮುಖಂಡ ಶಂಕರ ಗೌಡ್ರು, ಸ್ನೇಹ ಸಂಭ್ರಮ ಗೆಳೆಯರ ಬಳಗದ ಪದಾಧಿಕಾರಿಗಳು ಇದ್ದರು.

## ಜಿ. ಆರ್. ಮಂಜುನಾಥ್ ಚಾಂಪಿಯನ್



ದಾವಣಗೆರೆ, ಫೆ.24- ಶಿವಮೊಗ್ಗದಲ್ಲಿ ನಿನ್ನೆ ಮುಕ್ತಾಯಗೊಂಡ ರಾಜ್ಯ ಮಟ್ಟದ ಟೆನಿಸ್ ಪಂದ್ಯಾವಳಿಯಲ್ಲಿ ನಗರದ ಆಫೀಸರ್ ಕ್ಲಬ್‌ನ ಸದಸ್ಯರೂ, ಕರ್ನಾಟಕ ಗ್ರಾಮೀಣ ಬ್ಯಾಂಕಿನ ನಿವೃತ್ತ ಎಜಿಎಂ ಹಾಗೂ ವಕೀಲರೂ ಆದ ಜಿ.ಆರ್.ಮಂಜುನಾಥ್ ಅವರು 65 ವಯಸ್ಸಿನ ವಿಭಾಗದಲ್ಲಿ ಡಬಲ್ಸ್‌ನಲ್ಲಿ ಪ್ರಥಮ ಸ್ಥಾನ ಪಡೆದು ಚಾಂಪಿಯನ್ ಆಗಿದ್ದಾರೆ.


AVAILABLE FOR RENT

1st Floor Building (2715 Sqft.)

N.R. Road, Davangere.

Contact Us :


M/S R. HANUMANTHAPPA & SON

Hanumanthappa Buildings,

Poona-Bangalore Road, Davangere - 577 002.

Ph : 258834, Mob : 94498 28834





ವಿಶ್ವಕರ್ಮ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,

ಮುಖ್ಯ ಕಛೇರಿ : ನಂ. 75/1, ತುಳಸಿ ಕಾಂಪ್ಲೆಕ್ಸ್, 1ನೇ ಮಹಡಿ, ವಸಂತ ರಸ್ತೆ, ದಾವಣಗೆರೆ-01. ಫೋನ್ ನಂ. 08192 271472

ವಿಶ್ವಕರ್ಮ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ವಸಂತ ರಸ್ತೆ, ದಾವಣಗೆರೆ. ಇದರ ಐದು ವರ್ಷಗಳ ಅವಧಿಗೆ ನಿರ್ದೇಶಕರಾಗಿ ಈ ಕೆಳಕಂಡ ಸದಸ್ಯರುಗಳು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ ಎಂದು ಚುನಾವಣಾಧಿಕಾರಿಯಾದ ಶ್ರೀಮತಿ ಶೃತಿ ಹೆಚ್. ಪ್ರ.ದ.ಸ. ಉಪನಿಬಂಧಕರ ಕಛೇರಿ ದಾವಣಗೆರೆ ಇವರು ಘೋಷಿಸಿದ್ದಾರೆ.

ಅವಿರೋಧವಾಗಿ ಆಯ್ಕೆಯಾಗಿರುವ ಅಭ್ಯರ್ಥಿಗಳು



ಬಿ.ವಿ. ಶಿವಾನಂದ · ಆರ್. ವಿಜಯ್‌ಕುಮಾರ್ · ಬಿ. ನಾಗೇಂದ್ರಚಾರಿ · ಎ.ಬಿ. ರವಿ · ಹೆಚ್.ಎನ್. ಜಯಾಚಾರ್ · ಬಿ. ಸಿದ್ದಾಚಾರ್



ಎಂ.ಪಿ. ನಾಗರಾಜಾಚಾರ್ · ವಿ.ಎಂ. ಕೊಟ್ರೇಶಾಚಾರ್ · ಕೆ. ಸೋಮಶೇಖರಾಚಾರ್ · ಜಿ. ಕಾಳಾಚಾರ್ · ಆರ್. ರೇಖಾ ರಮೇಶ್ · ಜಯಶ್ರೀ ಆರ್. ಆಚಾರ್ · ಭಾಗ್ಯಮ್ಮ ಮಂಜುನಾಥ

ಸ್ಥಳ: ದಾವಣಗೆರೆ

ದಿನಾಂಕ: 24.02.2025

ಕಾರ್ಯದರ್ಶಿ

(ಸಿ.ಆರ್. ಬಡಿಗೇರ್) ಸಹಾಯಕ ರಿಟರ್ನಿಂಗ್ ಅಧಿಕಾರಿ

# ಅನ್ನದಾನ ಹಿಂದೂ ಧರ್ಮದ ಸದ್ಗುಣ



### ಸೋಮೇಶ್ವರ ವಿದ್ಯಾಲಯದಿಂದ ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಅಕ್ಕಿ ಸಮರ್ಪಣೆಯಲ್ಲಿ ಕೆ.ಎಂ. ಸುರೇಶ್

ದಾವಣಗೆರೆ. ಫೆ. 24 - ದಾನಗಳಲ್ಲಿ ಶ್ರೇಷ್ಠ ಅನ್ನದಾನ ಕೂಡ ಒಂದು. ಅನ್ನದಾನ ಮಾಡುವುದು ಹಿಂದೂ ಧರ್ಮದ ಅತ್ಯಗತ್ಯ ಸದ್ಗುಣವಾಗಿದೆ ಎಂದು ನಗರದ ಶ್ರೀ ಸೋಮೇಶ್ವರ ವಿದ್ಯಾಲಯದ ಗೌರವ ಕಾರ್ಯದರ್ಶಿ ಕೆ. ಎಂ ಸುರೇಶ್ ತಿಳಿಸಿದರು.

ನಗರದಲ್ಲಿ ಮೂರನೇ ಬಾರಿಗೆ ಹಮ್ಮಿಕೊಂಡಿದ್ದ ಶ್ರೀಕ್ಷೇತ್ರ ಧರ್ಮಸ್ಥಳಕ್ಕೆ ಅಕ್ಕಿ ಸಮರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶ್ರೀ ಸೋಮೇಶ್ವರ ವಿದ್ಯಾಲಯ ಕೇವಲ ಅಕ್ಷರ ಕಲಿಸುವ ಕೆಲಸ ಮಾಡುತ್ತಿಲ್ಲ, ಜೊತೆಗೆ ಮಕ್ಕಳಲ್ಲಿ ದಾನದ ಶ್ರೇಷ್ಠತೆಯನ್ನು ಮೈಗೂಡಿಸಿಕೊಳ್ಳುವಂತಹ ಮನೋಭಾವ ಬೆಳೆಸುತ್ತಿದೆ. ಈ ಕಾರಣ ಶಾಲಾ ಮಕ್ಕಳೂ ಸಹ ಒಂದು ಹಿಡಿ ಅಕ್ಕಿ ನೀಡುವ ಮೂಲಕ ಸೇವೆಯಲ್ಲಿ ಭಾಗಿಯಾಗಿದ್ದಾರೆ ಎಂದರು.

ಇದರ ಉದ್ದೇಶ ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ಪ್ರಾಥಮಿಕ ಹಂತದಲ್ಲಿಯೇ ಸಮಾಜ ಸೇವೆ ದಾನ ಧರ್ಮದಂತ ಕಾರ್ಯಕ್ರಮಗಳ ಬಗ್ಗೆ ಮಕ್ಕಳಿಗೆ ತಿಳಿಸಿಕೊಡಬೇಕು. ಈ ಕಾರಣ ನಮ್ಮ ವಿದ್ಯಾಲಯ ವಿದ್ಯೆ ಜೊತೆಗೆ ಅನ್ನದಾನದ ಮಹತ್ವವನ್ನು ಈ ಮೂಲಕ ತಿಳಿಸುತ್ತಿದೆ ಎಂದರು.

ಬಳಿಕ ಮಾತನಾಡಿದ ಮಹಾನಗರ ಪಾಲಿಕೆ ಸದಸ್ಯ ಪ್ರಸನ್ನ ಕುಮಾರ್, ಅನ್ನದಾನ, ಅಥವಾ ಆಹಾರವನ್ನು ದಾನ ಮಾಡುವ ಕ್ರಿಯೆಯು ಭಾರತೀಯ ಸಂಸ್ಕೃತಿಯಲ್ಲಿ ಮಹತ್ತರವಾದ ಮಹತ್ವವನ್ನು ಹೊಂದಿದೆ. ಇದು ದಾನಿಗೆ ಆಶೀರ್ವಾದ ಮತ್ತು ಅಧ್ಯಾತ್ಮಿಕ ಅರ್ಹತೆಯನ್ನು ತರುತ್ತದೆ ಎಂದು ತಿಳಿಸಿದರು.

ನೀವು ಅಕ್ಷಯ ಚೈತನ್ಯದ ಮೂಲಕ ಆಹಾರವನ್ನು ದಾನ ಮಾಡಿದಾಗ, ನೀವು ನಿಮ್ಮ ಧಾರ್ಮಿಕ ಜವಾಬ್ದಾರಿಗಳನ್ನು ಪೂರೈಸುವುದು ಮಾತ್ರವಲ್ಲದೆ ಹಸಿವನ್ನು ನಿವಾರಣೆ ಮಾಡುವಲ್ಲಿಯೂ ಪಾತ್ರ ವಹಿಸುತ್ತದೆ, ಹೀಗಾಗಿ ಸುರೇಶ್ ಅವರು ಮಕ್ಕಳನ್ನು ದಾನದ ಸೇವೆಯಲ್ಲಿ ತೊಡಗಿಸಿಕೊಂಡಿರುವುದು ನಿಜಕ್ಕೂ ಉತ್ತಮ ಸೇವೆ ಎಂದರು.

ಈ ವೇಳೆ ಯುವ ಮೋರ್ಚಾ ನಿಕಟಪೂರ್ವ ಕಾರ್ಯದರ್ಶಿ ವೀರಣ್ಣ, ಶಾಲೆಯ ಪ್ರಾಚಾರ್ಯರು, ಆಡಳಿತಾಧಿಕಾರಿಗಳು, ಶೈಕ್ಷಣಿಕ ನಿರ್ದೇಶಕರು, ಮುಖ್ಯೋಪಾಧ್ಯಾಯರು, ಶಿಕ್ಷಕ-ಶಿಕ್ಷಕೇತರ ವರ್ಗ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ನಿರಾಶ್ರಿತರ ಕಷ್ಟಕ್ಕೆ ತಕ್ಷಣ ಸ್ಪಂದಿಸಿದ ಜಿಲ್ಲಾಧಿಕಾರಿ



ದಾವಣಗೆರೆ, ಫೆ.24- ಮೈಕ್ರೋ ಫೈನಾನ್ಸ್, ಮತ್ತಿತರೆ ಕಡೆ ಸಾಲ ಮಾಡಿ, ಮನೆ ಬಿಟ್ಟು, ಹಿರಿಯ ನಾಗರಿಕರ ಉದ್ಯಾನವನದಲ್ಲಿ ನಾಲ್ಕೈದು ದಿನಗಳಿಂದ ಕಾಲ ಕಳೆಯುತ್ತಿದ್ದ ನಿರಾಶ್ರಿತರಿಗೆ ತಕ್ಷಣ ಪರಿಹಾರ ಒದಗಿಸುವುದರ ಮೂಲಕ ಸ್ಪಂದಿಸಿದ ಜಿಲ್ಲಾಧಿಕಾರಿಗಳ ಕ್ರಮವನ್ನು ಸರ್ವೋದಯ ಸಮುದಾಯದ ಶಿವನಕೆರೆ ಬಸವಲಿಂಗಪ್ಪ ಶ್ಲಾಘಿಸಿದ್ದಾರೆ.

ನಗರದ ಎಂ.ಸಿ.ಸಿ. 'ಬಿ' ಬ್ಲಾಕ್ ನಲ್ಲಿರುವ ಹಿರಿಯ ನಾಗರಿಕರ ಉದ್ಯಾನವನದಲ್ಲಿ ಇಂದು ಮುಂಜಾನೆ ತಾನು ವಾಯುವಿಹಾರ ಮಾಡುತ್ತಿದ್ದ ವೇಳೆ ಅಲ್ಲಿ ನಿರಾಶ್ರಿತರಾಗಿ ಬೀಡು ಬಿಟ್ಟಿದ್ದ ಹುಲಿಗೆಮ್ಮನ ಕುಟುಂಬದ ಐದು ಜನರನ್ನು ಕಂಡು, ಅವರನ್ನು ವಿಚಾರಿಸಿದೆ. ಅವರು ಎಸ್.ಜೆ. ಎಂ ನಗರ ನಿವಾಸಿಗಳಾಗಿದ್ದು, ಚಿಂದಿ ಆಯುವವರು ಎಂಬುದು ತಿಳಿಯಿತು ಎಂದು ಬಸವಲಿಂಗಪ್ಪ ತಿಳಿಸಿದ್ದಾರೆ.

ಈ ಸಂಬಂಧ ತಕ್ಷಣ ತಾನು ವಾಟ್ಸಾಪ್ ಸಂದೇಶದಲ್ಲಿ ವಿಷಯ ತಿಳಿಸಿದಾಗ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಅವರು ಸ್ಪಂದಿಸಿದ್ದಾರೆ. ಈ ಕುಟುಂಬಕ್ಕೆ ತಮ್ಮಿಂದ ಯಾವ ಸಹಾಯ ಸಾಧ್ಯವಾಗಬಹುದು. ಅದನ್ನು ದಯವಿಟ್ಟು ಮಾಡಿ ಎಂದು ಕೇಳಿಕೊಂಡೆ. ಜಿಲ್ಲಾಧಿಕಾರಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ, ಆ ಬಡ ಕುಟುಂಬವನ್ನು ಭೇಟಿ ಮಾಡಿ ಅವರ ಕಷ್ಟಕ್ಕೆ ಸೂಕ್ತ ಪರಿಹಾರ ಒದಗಿಸುವಂತೆ ಕ್ರಮ ಕೈಗೊಂಡಿರುವುದಾಗಿ ತನಗೆ ತಿಳಿಸಿದರು. ತಮ್ಮ ಅಪಾರ ಕೆಲಸಗಳ ಒತ್ತಡದಲ್ಲಿ, ದಕ್ಷ ಅಧಿಕಾರಿಯಾಗಿ, ಬಡವರ ನೋವಿಗೆ ಸ್ಪಂದಿಸುವ ಅಧಿಕಾರಿಯಾಗಿ ತಕ್ಷಣ ಸೂಕ್ತ ಕ್ರಮ ಕೈಗೊಂಡು ಪರಿಹಾರ ಸೂಚಿಸಿರುವುದು. ಸಾರ್ವಜನಿಕ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸುವ ಗುಣ, ಇವರ ಸಜ್ಜನಿಕೆ, ಆದರ್ಶ ಗುಣಗಳು ನಮಗೆಲ್ಲರಿಗೂ ಆದರ್ಶಪ್ರಾಯ ಎಂದು ಬಸವಲಿಂಗಪ್ಪ ತಿಳಿಸಿದ್ದಾರೆ.

# ದೇವದಾಸಿಯರ ಪಿಂಚಣಿ ಹೆಚ್ಚಳಕ್ಕೆ ಆಗ್ರಹಿಸಿ ಪ್ರತಿಭಟನೆ



ದಾವಣಗೆರೆ, ಫೆ.24- ಬಜೆಟ್‌ನಲ್ಲಿ ದೇವದಾಸಿ ಮಹಿಳೆಯರ ಪಿಂಚಣಿಯನ್ನು ಕನಿಷ್ಠ 3 ಸಾವಿರ ರೂ.ಗಳಿಗೆ ಹೆಚ್ಚಿಸಬೇಕೆಂದು ಆಗ್ರಹಿಸಿ ನಗರದ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘವು ಶುಕ್ರವಾರ ಪ್ರತಿಭಟನೆ ನಡೆಸಿತು.

ಜಿಲ್ಲೆಯ ಎಲ್ಲ ದೇವದಾಸಿ ಮಹಿಳೆಯರು ಪ್ರತಿಭಟನಾ ಮೆರವಣಿಗೆ ಮೂಲಕ ಜಿಲ್ಲಾಧಿಕಾರಿ ಕಚೇರಿ ಮುಂಭಾಗಕ್ಕೆ ಆಗಮಿಸಿ, ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒಕ್ಕೊರಲಿನಿಂದ ಘೋಷಣೆ ಕೂಗಿದರು.

ಈ ವೇಳೆ ಸಂಘದ ರಾಜ್ಯ ಉಪಾಧ್ಯಕ್ಷರಾದ ಟಿ.ವಿ. ರೇಣುಕಮ್ಮ ಮಾತನಾಡಿ, ಸರ್ವೆ ಪಟ್ಟಿಯಲ್ಲಿ ಕೈಬಿಟ್ಟಂತಹ ದೇವದಾಸಿ ಮಹಿಳೆಯರ ಸರ್ವೆ ಕಾರ್ಯ ಆರಂಭಿಸಬೇಕು. ದೇವದಾಸಿ ಮಹಿಳೆಯರ ಕುಟುಂಬದ ಎಲ್ಲಾ ಸದಸ್ಯರ ಗಣತಿಯನ್ನು ಆನ್‌ಲೈನ್‌ನಲ್ಲಿ ತುಂಬಲು ತಿಳಿಸಿದ್ದು, ಇದನ್ನು ತಡೆದು ಈ ಹಿಂದಿನಂತೆ ಅಂಗನವಾಡಿ ಕೇಂದ್ರ ಮತ್ತು ಕಾರ್ಯಕರ್ತೆಯರ ಮೂಲಕ ಗಣತಿಗೆ ಕ್ರಮ ವಹಿಸಲು ಶಿಫಾರಸ್ಸು ಮಾಡಬೇಕು ಎಂದರು.

ಸ್ವಯಂ ಉದ್ಯೋಗದ ನೆರವಿಗೆ ಈ ಹಿಂದೆ ಕೊಡಲಾಗುತ್ತಿದ್ದ 1 ಲಕ್ಷ ರೂ.ಗಳ ಸಹಾಯ ಧನವನ್ನು ಕೋವಿಡ್ ನೆಪದಲ್ಲಿ ಕಳೆದ 3 ವರ್ಷಗಳಿಂದ ನಿಲ್ಲಿಸಲಾಗಿದೆ.

ಇದನ್ನು ಮರು ಪ್ರಾರಂಭಿಸುವ ಜೊತೆಗೆ ಪ್ರಸ್ತುತ ಬೆಲೆ ಏರಿಕೆಯ ದಿನಮಾನಗಳಿಗೆ ತಕ್ಕಂತೆ 1.50 ಲಕ್ಷ ರೂ.ಗಳಿಗೆ ಹೆಚ್ಚಿಸಬೇಕೆಂದು ಒತ್ತಾಯಿಸಿದರು.

ದೇವದಾಸಿ ಮಹಿಳೆಯರ ವಸತಿಗಾಗಿ ಉಚಿತ ನಿವೇಶನ ಬಿಡುಗಡೆಗೊಳಿಸಿ, ರಾಜೀವ್ ಗಾಂಧಿ ವಸತಿ ಯೋಜನೆಯಲ್ಲಿ ಪಕ್ಕಾ ಮನೆ ಕಟ್ಟಿಕೊಡಬೇಕು. ಈ ವಸತಿ ನಿಗಮವು ಈ ದುರ್ಬಲ ಮಹಿಳೆಯರಿಂದ ವಂತಿಗೆಯನ್ನು ಕೇಳುತ್ತಿದೆ. ಹಾಗಾಗಿ ಸರ್ಕಾರವೇ ಈ ಮಹಿಳೆಯರ ಪರವಾಗಿ ವಂತಿಗೆ ನೀಡಲು ಅಗತ್ಯ ಕ್ರಮ ವಹಿಸಬೇಕು ಎಂದು ಆಗ್ರಹಿಸಿದರು.

ದೇವದಾಸಿ ಮಹಿಳೆಯರು ಹಾಗೂ ಅವರ ಕುಟುಂಬದ ಸದಸ್ಯರಿಗೆ ತಲಾ 5 ಎಕರೆ ಜಮೀನು ಒದಗಿಸಬೇಕು ಮತ್ತು ಜಿಲ್ಲೆಯ ಸರ್ಕಾರಿ ಭೂಮಿಯಲ್ಲಿ ಅವರಿಗೆ ಖಾಲಿ ನಿವೇಶನ ಕಲ್ಪಿಸಬೇಕೆಂದು ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದರು.

ಈ ವೇಳೆ ಸಂಘದ ಜಿಲ್ಲಾಧ್ಯಕ್ಷರಾದ ಚನ್ನಮ್ಮ, ಕಾರ್ಯದರ್ಶಿ ಮಂಜುಳಾ, ಸಿಐಟಿಯು ಕಾರ್ಯದರ್ಶಿ ಆನಂದರಾಜು, ದೇವರಮ್ಮ, ಹೊನ್ನಮ್ಮ, ಮೈಲಮ್ಮ, ಹುಚ್ಚಮ್ಮ, ಶಾಂತಮ್ಮ ಇತರರು ಇದ್ದರು.

## ಕೋಡಿ ಕ್ಯಾಂಪ್ ಕೊಟ್ಟೂರೇಶ್ವರ ಸ್ವಾಮಿ ಮಠದಲ್ಲಿ ನಾಡಿದ್ದು ಮಹಾಶಿವರಾತ್ರಿ



ದಾವಣಗೆರೆ, ಫೆ. 24 - ದಾವಣಗೆರೆಯ ಕೊಟ್ಟೂರು ಶ್ರೀ ಗುರುಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ ಇವರಿಂದ ಮಾಗಾನಹಳ್ಳಿ ಕೋಡಿ ಕ್ಯಾಂಪ್ ಬಳಿ ಇರುವ ಶ್ರೀ ಕೊಟ್ಟೂರೇಶ್ವರ ಮಹಾಸ್ವಾಮಿ ಪಾದಗಳಿಗೆ ಮಹಾಶಿವರಾತ್ರಿ ಪ್ರಯುಕ್ತ ನಾಡಿದ್ದು ದಿನಾಂಕ 26ರ ಬುಧವಾರ ಬೆಳಿಗ್ಗೆ 6.30ಕ್ಕೆ ಅಭಿಷೇಕ - ಪೂಜೆ ನಡೆಯಲಿದೆ.

ನಂತರ ಬೆಳಿಗ್ಗೆ 8 ರಿಂದ ಪ್ರಸಾದ ದಾಸೋಹ ಏರ್ಪಡಿಸಲಾಗಿದೆ. ಪಾದಯಾತ್ರೆ ಟ್ರಸ್ಟ್ ಇವರು ಸೇವಾಕರ್ತರಾಗಿದ್ದಾರೆ ಎಂದು ಕಣಕುಪ್ಪಿ ಮುರುಗೇಶಪ್ಪ (96118 89151), ಟಿ.ಜಿ. ಬಕ್ಕೇಶಪ್ಪ (91089 88898), ಬಿ. ಚಿದಾನಂದಪ್ಪ (98455 28449), ಮಲ್ಲಾಬಾದಿ ಗುರು ಬಸವರಾಜ್ (79757 97079) ತಿಳಿಸಿದ್ದಾರೆ. ದಾಸೋಹ ಮನೆ ಮತ್ತು ಸಭಾಂಗಣ ಕಟ್ಟಡವು ಪ್ರಗತಿ ಹಂತದಲ್ಲಿದೆ. ಭಕ್ತಾದಿಗಳು ದೇಣಿಗೆ ಸಲ್ಲಿಸಬಹುದು.

## ಲಿಂಗೇಶ್ವರ ದೇವಸ್ಥಾನದಲ್ಲಿ ನಾಳೆ ಶಿವರಾತ್ರಿ



ದಾವಣಗೆರೆ,ಫೆ.24- ನಗರದ ಅಶೋಕ ಚಿತ್ರಮಂದಿರದ ಬಳಿ ಇರುವ ಶ್ರೀ ಲಿಂಗೇಶ್ವರ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 26ರ ಬುಧವಾರ ಮಹಾಶಿವರಾತ್ರಿ ಪ್ರಯುಕ್ತ ಶ್ರೀ ಸ್ವಾಮಿಗೆ ವಿಶೇಷ ಹೂವಿನ ಅಲಂಕಾರ ರುದ್ರಾಭಿಷೇಕ ಮತ್ತು ಪೂಜಾ ಕಾರ್ಯಕ್ರಮಗಳು ನಡೆಯಲಿವೆ ಎಂದು ದೇವಸ್ಥಾನ ಸಮಿತಿ ತಿಳಿಸಿದೆ.

## ಗ್ರಾಮಾಂತರಲ್ಲಿ ಇಂದು ವಿದ್ಯುತ್ ವ್ಯತ್ಯಯ

ದಾವಣಗೆರೆ ತಾಲ್ಲೂಕಿನ ಆಲೂರು, ಬಿ.ಜಿ ಹಳ್ಳಿ, ಸಿದ್ದನೂರು, ಮಲ್ಲಾಪುರ, ಗುಡಾಳು, ಅಣಜಿ, ಕಿತ್ತೂರು, ಕಂದನಕೋವಿ, ಮೆಳ್ಳೇಕಟ್ಟೆ, ರೆಡ್ಡಿಕ್ಯಾಂಪ್, ಪುಟಗನಾಳು, ಶ್ರೀರಾಮ ನಗರ, ಕಾಡಜ್ಜಿ, ಬಸವನಾಳು, ನಾಗರಕಟ್ಟೆ ಗ್ರಾಮ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಸೂರ್ಯನಿಂದಲೇ ಸಕಲ ಜೀವಂತಿಕೆ



### ಹಿರಿಯ ಪ್ರವಚನಕಾರ ಗೋಪಾಲಚಾರ್ ಮಣ್ಣೂರ್

ದಾವಣಗೆರೆ, ಫೆ.24- ಜಗತ್ತನ್ನು ಬೆಳಗುವ ಸೂರ್ಯ, ಸಕಲ ಜೀವರಾಶಿಗಳ ಜೀವಂತಿಕೆಗೆ ಮೂಲ ಕಾರಣನಾಗಿದ್ದಾನೆ ಎಂದು ಹಿರಿಯ ಪ್ರವಚನಕಾರ ಗೋಪಾಲಚಾರ್ ಮಣ್ಣೂರ್ ಹೇಳಿದರು.

ನಗರದ ಆದರ್ಶ ಯೋಗ ಪ್ರತಿಷ್ಠಾನದ ವತಿಯಿಂದ ಯೋಗ ಚಿಕಿತ್ಸಾ ಕೇಂದ್ರದಲ್ಲಿ ಈಚೆಗೆ ಹಮ್ಮಿಕೊಂಡಿದ್ದ ರಥಸಪ್ತಮಿ ಹಾಗೂ ಮಹಾಕುಂಭಮೇಳದ ಅಮೃತ ತೀರ್ಥ ಪ್ರಸಾದ ವಿತರಣಾ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ದೇಶದ ಅನೇಕ ಹಬ್ಬಗಳಲ್ಲಿ ರಥಸಪ್ತಮಿಯು ಸಹ ವಿಶೇಷ ಆಚರಣೆಯಾಗಿದೆ. ಇದನ್ನು ಸೂರ್ಯ ಜಯಂತಿ ಎಂತಲೂ ಹೇಳುತ್ತಾರೆ. ಈ ದಿನದಂದು ಸೂರ್ಯ ಅರುಣ ಎಂಬ ಸಾರಥಿಯೊಂದಿಗೆ ತನ್ನ ಏಳು ಕುದುರೆಗಳುಳ್ಳ ವಿಶೇಷ ರಥದಲ್ಲಿ ಕುಳಿತು ದಕ್ಷಿಣಾಯಣದಿಂದ ಉತ್ತರಾಯಣಕ್ಕೆ ಪ್ರಪಂಚದ ಪರ್ಯಟನೆ ಪ್ರಾರಂಭಿಸುತ್ತಾನೆ ಎಂದು ಅವರು ವಿವರಿಸಿದರು.

ಪರ್ಯಟನೆ ವೇಳೆ ಸೂರ್ಯನು ಭೂಮಿಗೆ ಸ್ವಲ್ಪ ಹತ್ತಿರ ಬರುವನು ಎಂಬ ನಂಬಿಕೆಯೂ ಇದೆ. ಆದ್ದರಿಂದ ರಥಸಪ್ತಮಿ ಎಂಬ ಹೆಸರು ಪ್ರತೀತವಾಯಿತು ಎಂದು ಹೇಳಿದರು.

ಒಂದು ವೇಳೆ 15 ದಿವಸ ಸೂರ್ಯೋದಯ ಆಗದಿದ್ದಲ್ಲಿ ನಾವುಗಳಾರೂ ಬದುಕಿರಲು ಸಾಧ್ಯವಿಲ್ಲ. ಆದ್ದರಿಂದ ಅವಶ್ಯವಾಗಿ ಎಲ್ಲರೂ ಪ್ರತಿನಿತ್ಯ ಕೃತಜ್ಞತಾ ಭಾವದಿಂದ ಸೂರ್ಯ ನಮಸ್ಕಾರ, ಸೂರ್ಯ ಮಂತ್ರ, ಸ್ತೋತ್ರ, ಜಪ ಮಾಡಿ ಪೂಜಿಸಿ ವಂದಿಸಬೇಕು ಎಂದು ಮಾಹಿತಿ ನೀಡಿದರು.

ಈ ವೇಳೆ ಯೋಗ ಗುರು ರಾಘವೇಂದ್ರ ಗುರೂಜಿ, ಎನ್.ವಿ. ಸುನೀಲ್ ಕುಮಾರ್, ವೀರಭದ್ರಸ್ವಾಮಿ, ಯೋಗ ಶಿಕ್ಷಕ ಪ್ರಭುಸ್ವಾಮಿ ಹಿರೇಮಠ್, ಅಂಜಲಿದೇವಿ, ಕೆ.ಇ.ಬಿ.ಯ ನರಸಿಂಹಮೂರ್ತಿ, ಡಿ.ಹೆಚ್.ಎಂ. ವೇದಾವತಿ, ಹೆಚ್. ಸಂತೋಷ್, ರೇಖಾ ಕಲ್ಲೇಶ್, ಶಾಂತಮ್ಮ ಗಾಣಿಗೇರ್ ಇತರರು ಇದ್ದರು.

## ನಗರದಲ್ಲಿ ನಾಳೆ ಕುರುವತ್ತಿಗೆ ಪಾದಯಾತ್ರೆ

ದಾವಣಗೆರೆ, ಫೆ. 24- ನಗರದ ಚೌಕಿಪೇಟೆಯ ಕುರುವತ್ತಿ ಶ್ರೀ ಬಸವೇಶ್ವರ ಸ್ವಾಮಿ ಪಾದಯಾತ್ರೆ ಸೇವಾ ಸಮಿತಿ ವತಿಯಿಂದ ಬಳ್ಳಾರಿ ಜಿಲ್ಲೆ ಹೂವಿನಹಡಗಲಿ ತಾಲ್ಲೂಕಿನ ಕುರುವತ್ತಿಯಲ್ಲಿ ಇದೇ ದಿನಾಂಕ 28 ರಂದು ಸಂಜೆ 4.30 ಕ್ಕೆ ಜರುಗುವ ಶ್ರೀ ಮಲ್ಲಿಕಾರ್ಜುನ ಸ್ವಾಮಿ ಹಾಗೂ ಶ್ರೀ ಬಸವೇಶ್ವರ ಸ್ವಾಮಿ ರಥೋತ್ಸವದ ಅಂಗವಾಗಿ ಇದೇ ದಿನಾಂಕ 26 ರಂದು ರಾತ್ರಿ 8 ಗಂಟೆಗೆ 21 ನೇ ವರ್ಷದ ಪಾದಯಾತ್ರಿಗಳಿಗೆ ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ದೇವಸ್ಥಾನದ ಆವರಣದಲ್ಲಿ ಬೀಳ್ಕೊಡುಗೆ ಸಮಾರಂಭ ಏರ್ಪಡಿಸಲಾಗಿದೆ ಎಂದು ಸಮಿತಿ ಸಹ ಸಂಚಾಲಕ ಶಿವಾನಂದಪ್ಪ ಬೆನ್ನೂರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಕೋಡಿಯಾಲ ಹೋಸಪೇಟೆಯ ಅವಿಮುಕ್ತ ತಪೋಕ್ಷೇತ್ರ ಪುಣ್ಯಕೋಟಿ ಮಠದ ಬಾಲಯೋಗಿ ಶ್ರೀ ಜಗದೀಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಶ್ರೀ ಕುರುವತ್ತಿ ಬಸವೇಶ್ವರ ಪಾದಯಾತ್ರೆ ಸೇವಾ ಸಮಿತಿ ಅಧ್ಯಕ್ಷ ಎನ್.ಬಕ್ಕೇಶ್ ಅಭಿಕಾಟನ್ ಇವರು ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಮಾಜಿ ಉಪಮೇಯರ್ ಸೋಗಿ ಶಾಂತಕುಮಾರ್, ಮಾಜಿ ಮೇಯರ್ ಬಿ.ಜಿ. ಅಜಯ್ ಕುಮಾರ್, ದೂಡಾ ಸದಸ್ಯ ಎಂ.ಆರ್. ವಾಣಿ, ಮಾಳಗೇರ ಎಂ.ಕೆ. ಬಸವರಾಜಪ್ಪ, ಕುರುವತ್ತಿ ಶ್ರೀ ಬಸವೇಶ್ವರ ಪಾದಯಾತ್ರೆ ಸೇವಾ ಸಮಿಯ ಅಧ್ಯಕ್ಷ ಕೆ.ಎ. ಸತ್ಯನಾರಾಯಣ, ಉಪಾಧ್ಯಕ್ಷ ಮಹಾಂತೇಶ್ ಒಣರೊಟ್ಟಿ ಸೇರಿದಂತೆ ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಬಿ.ಆರ್. ಗಿರೀಶ್, ಕೆ.ಎಂ.ಲೋಕೇಶ್ವರಯ್ಯ, ಕೆ.ಬಿ. ಶಿವಕುಮಾರ್, ಹೆಚ್. ಚನ್ನಬಸಪ್ಪ, ಬಿ.ಎಸ್. ಚೇತನ್ ಮತ್ತಿತರರು ಉಪಸ್ಥಿತರಿದ್ದರು.

## ಕೆಟಿಜೆ ನಗರದಲ್ಲಿ ನಾಳೆ ಮಹಾಶಿವರಾತ್ರಿ ಪೂಜೆ

ದಾವಣಗೆರೆ, ಫೆ. 24- ಇಲ್ಲಿನ ಕೆಟಿಜೆ ನಗರ 10 ನೇ ಕ್ರಾಸ್‌ನಲ್ಲಿರುವ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ಇದೇ ದಿನಾಂಕ 26 ರ ಬುಧವಾರ ಸಂಜೆ 7 ಗಂಟೆಗೆ ವಿಶೇಷ ಪೂಜೆ, ಜಾಗರಣೆ, ಫಲಹಾರ ಇರುತ್ತದೆ ಎಂದು ಗಾಂಧೀಜಿ ಹರಿಜನ ಯುವಕ ಸಂಘದ ಪ್ರಧಾನ ಕಾರ್ಯದರ್ಶಿ ಹಾಗೂ ಕೆಪಿಸಿಸಿ ಎಸ್ಸಿ ವಿಭಾಗದ ಕಾರ್ಯದರ್ಶಿ ಸೋಮಲಾಪುರದ ಹನುಮಂತಪ್ಪ ತಿಳಿಸಿದ್ದಾರೆ.

# ಶಿವರಾತ್ರಿ : ನಗರದಲ್ಲಿ ಇಂದು 108 ಜ್ಯೋತಿರ್ಲಿಂಗಗಳ ಮೋಟಾರ್ ಬೈಕ್ ರ್‍ಯಾಲಿ, ನಾಳೆ ಸದ್ಭಾವನಾ ಶಾಂತಿಯಾತ್ರೆ



### ದ್ವಾದಶ ಜ್ಯೋತಿರ್ಲಿಂಗಗಳ ದರ್ಶನ

### ರಾಜಯೋಗ ಶಿಬಿರ

ಭಾರತದಲ್ಲಿ ಆಚರಿಸಲ್ಪಡುವ ಅನೇಕ ಹಬ್ಬಗಳಲ್ಲೊಂದಾಗಿರುವ ಮಹಾ ಶಿವರಾತ್ರಿಯು ವಿಶೇಷ ಮಹತ್ವವನ್ನು ಹೊಂದಿದ್ದು, ಇದರ ಬಗ್ಗೆ ಜನರನ್ನು ಜಾಗೃತಗೊಳಿಸುವ ನಿಟ್ಟಿನಲ್ಲಿ ಅಂತರರಾಷ್ಟ್ರೀಯ ಅಧ್ಯಾತ್ಮಿಕ ಸೇವಾ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವತಿಯಿಂದ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.

ಶಿವರಾತ್ರಿಯಲ್ಲಿನ 'ರಾತ್ರಿ' ಎಂಬ ಪದವು ಅಜ್ಞಾನದ ಅಂಧಕಾರ ಮತ್ತು ಅಧರ್ಮದಿಂದ ತುಂಬಿದ ಕತ್ತಲನ್ನು ಸೂಚಿಸುತ್ತದೆ. ವರ್ತಮಾನ ಸಮಯದಲ್ಲಿ ನೈತಿಕ, ಮಾನವೀಯ ಹಾಗೂ ಅಧ್ಯಾತ್ಮಿಕ ಮೌಲ್ಯಗಳ ಘೋರ ಅವಹೇಳನವಾಗುತ್ತಿದೆ. ಮನಸ್ಸು ವಿಕಾರಗಳಿಂದ ದೂಷಿತವಾಗಿದ್ದು, ಇದರ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ದೆಸೆಯಲ್ಲಿ ಅರ್ಥಪೂರ್ಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಈ ಹಿನ್ನೆಲೆಯಲ್ಲಿ ಬ್ರಹ್ಮಾಕುಮಾರೀಸ್ ಸಂಸ್ಥೆಯು ಪ್ರಪಂಚದಾದ್ಯಂತ ಶಿವರಾತ್ರಿ ಹಬ್ಬವನ್ನು ಒಂದು ತಿಂಗಳು ಕಾಲ ನಡೆಸುತ್ತಿದ್ದು, ಸಂಸ್ಥೆಯ ದಾವಣಗೆರೆ ಶಾಖೆಯಿಂದಲೂ ದಾವಣಗೆರೆ ನಗರ ಮಾತ್ರವಲ್ಲದೇ, ಶಾಮನೂರು, ಮಾಯಕೊಂಡ, ಶಿರಮಗೊಂಡನಹಳ್ಳಿ, ಬಸಾಪುರ, ದೊಡ್ಡಬಾತಿ ಸೇರಿದಂತೆ, ತಾಲ್ಲೂಕಿನ ಬಹುತೇಕ ಹಳ್ಳಿಗಳಲ್ಲಿ 89ನೇ ಮಹಾಶಿವರಾತ್ರಿ ಹಬ್ಬವನ್ನು ಆಚರಿಸುತ್ತಿದೆ.

ಶಿವರಾತ್ರಿಯ ಸಂದೇಶವನ್ನು ಅರಿತು ನಮ್ಮಲ್ಲಿ ಧಾರಣೆ ಮಾಡಿಕೊಂಡಾಗ ಮಾದರಿ ಜೀವನ ನಡೆಸಬಹುದು ಎಂದು ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ಪ್ರತಿಪಾದಿಸಿದ್ದಾರೆ.

ಸ್ಥಳೀಯ ಶ್ರೀ ಡಿ. ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್‌ನಲ್ಲಿರುವ ಬ್ರಹ್ಮಾಕುಮಾರೀಸ್ ಸಂಸ್ಥೆಯ ಶಿವಧ್ಯಾನ ಮಂದಿರದಲ್ಲಿ ದ್ವಾದಶ ಜ್ಯೋತಿರ್ಲಿಂಗಗಳ ದರ್ಶನ ಕಾರ್ಯಕ್ರಮವನ್ನು ಈಗಾಗಲೇ ಆರಂಭಿಸಲಾಗಿದ್ದು, ಇದೇ ದಿನಾಂಕ 28 ರವರೆಗೆ ಪ್ರತಿದಿನ ಬೆಳಿಗ್ಗೆ 10 ರಿಂದ ರಾತ್ರಿ 8 ರವರೆಗೆ ಸಾರ್ವಜನಿಕರು ಉಚಿತವಾಗಿ ವೀಕ್ಷಿಸಬಹುದು.

ಇಂದು ಬೆಳಿಗ್ಗೆ 10 ಗಂಟೆಗೆ 108 ಶಿವಲಿಂಗಗಳ ಮೋಟಾರ್ ಬೈಕ್ ರ್‍ಯಾಲಿಯನ್ನು ಹಮ್ಮಿಕೊಳ್ಳಲಾಗಿದ್ದು, ಶಿವಧ್ಯಾನ ಮಂದಿರದಿಂದ ಆರಂಭಗೊಳ್ಳುವ ಈ ರ್‍ಯಾಲಿಯು ನಗರದಾದ್ಯಂತ ಸಂಚರಿಸಲಿದೆ.

ನಾಳೆ ಬುಧವಾರ ಶಿವರಾತ್ರಿಯಂದು 108 ಶಿವಲಿಂಗಗಳೊಂದಿಗೆ ಸದ್ಭಾವನಾ ಶಾಂತಿಯಾತ್ರೆ ಏರ್ಪಡಾಗಿದೆ. ಅಂದು ಸಂಜೆ 4 ಗಂಟೆಗೆ ಮೋತಿ ವೀರಪ್ಪ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಮೈದಾನದಿಂದ ಆರಂಭಗೊಳ್ಳುವ ಸದ್ಭಾವನಾ ಶಾಂತಿಯಾತ್ರೆಯು ರಾಜಬೀದಿಗಳಲ್ಲಿ ಸಂಚರಿಸಲಿದೆ.

ನಂತರ ಸಂಜೆ 6.30ಕ್ಕೆ ಶಿವಧ್ಯಾನ ಮಂದಿರದಲ್ಲಿ ಶಿವ ಧ್ವಜಾರೋಹಣ ಮತ್ತು ಶಿವಧ್ಯಾನ ಕಾರ್ಯಕ್ರಮಗಳು ನಡೆಯಲಿವೆ ಎಂದು ಲೀಲಾಜಿ ವಿವರಿಸಿದ್ದಾರೆ.

**ರಾಜಯೋಗ ಶಿಬಿರ :** ಶಿವರಾತ್ರಿ ಪ್ರಯುಕ್ತ ಇದೇ ದಿನಾಂಕ 27ರಿಂದ ಮಾರ್ಚ್ 1ರವರೆಗೆ ಮೂರು ದಿನಗಳ ಕಾಲ ರಾಜಯೋಗ ಶಿಬಿರವನ್ನು ಆಯೋಜಿಸಲಾಗಿದ್ದು, ಶಿವಧ್ಯಾನ ಮಂದಿರ ಮತ್ತು ಪಿ.ಜೆ. ಬಡಾವಣೆ 8ನೇ ಮುಖ್ಯರಸ್ತೆ - ಬ್ರಹ್ಮಾಕುಮಾರೀಸ್ ರಸ್ತೆಯಲ್ಲಿರುವ ಬ್ರಹ್ಮಾಕುಮಾರೀಸ್ ಸಂಸ್ಥೆಯಲ್ಲಿ ಪ್ರತಿದಿನ ಬೆಳಿಗ್ಗೆ 7.30 ರಿಂದ 8.30, ಸಂಜೆ 7 ರಿಂದ 8ರವರೆಗೆ ಒಂದು ಗಂಟೆ ಕಾಲ ಶಿಬಿರ ನಡೆಯಲಿದೆ.

## ದಾವಣಗೆರೆ ವಿವಿ ತಂಡಕ್ಕೆ ಆಯ್ಕೆ



ಚಿತ್ರದುರ್ಗ, ಫೆ. 24- ನಗರದ ಚಂದ್ರವಳ್ಳಿಯ ಎಸ್‌ಜೆಎಂ ಪದವಿ ಕಾಲೇಜಿನ ಬಿ.ಎ. ವಿದ್ಯಾರ್ಥಿ ವಿ. ಶ್ರೀನಿವಾಸ್ ದಾವಣಗೆರೆ ವಿವಿ ಪುರುಷರ ಹ್ಯಾಂಡ್‌ಬಾಲ್ ತಂಡಕ್ಕೆ ಆಯ್ಕೆಯಾಗಿದ್ದು, ಇದೇ ದಿನಾಂಕ 28 ರಂದು ತಮಿಳುನಾಡಿನ ಸೇಲಂನ ಪೆರಿಯಾರ್ ಯೂನಿವರ್ಸಿಟಿಯಲ್ಲಿ ನಡೆಯಲಿರುವ ದಕ್ಷಿಣ ವಲಯ ಅಂತರ್ ವಿವಿ ಮಟ್ಟದ ಪಂದ್ಯದಲ್ಲಿ ಭಾಗವಹಿಸಲಿದ್ದಾರೆ.

## ಸೊಕ್ಕೆ : ಇಂದು ವಿದ್ಯುತ್ ವ್ಯತ್ಯಯ

ನಿಂಬಳಗೆರೆ-ಸೊಕ್ಕೆ 66ಕೆವಿ ಮಾರ್ಗದಲ್ಲಿ ತುರ್ತು ಕಾಮಗಾರಿ ಹಮ್ಮಿಕೊಂಡಿರುವುದರಿಂದ ಇಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 2 ರವರೆಗೆ ಎಲ್ಲಾ ಎನ್.ಜೆ.ವೈ, ಐ.ಪಿ ಮಾರ್ಗಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

# ಜರ್ಮನ್ ಚುನಾವಣೆಯಲ್ಲಿ ಮೆರ್ಜ್ ಮುನ್ನಡೆ : ಮೈತ್ರಿ ಸರ್ಕಾರ ರಚನೆ ಹಾದಿ ಸುಲಭ

ಬರ್ಲಿನ್, ಫೆ. 24 - ಜರ್ಮನ್ ಚುನಾವಣೆಯಲ್ಲಿ ಫ್ರೆಡ್ರಿಕ್ ಮೆರ್ಜ್ ನೇತೃತ್ವದ ಕನ್ಸರ್ವೇಟಿವ್ ಕೂಟಕ್ಕೆ ಮುನ್ನಡೆ ದೊರೆತಿದೆ. ಈ ಪಕ್ಷದ ನೇತೃತ್ವದಲ್ಲಿ ಮುಂದಿನ ಸರ್ಕಾರ ರಚನೆಯಾಗಲಿದೆ. ಇದರಿಂದಾಗಿ ಉಕ್ರೇನ್‌ಗೆ ಇನ್ನಷ್ಟು ಬೆಂಬಲ ಹಾಗೂ ಜರ್ಮನ್ ಆರ್ಥಿಕತೆಗೆ ಉತ್ತೇಜನ ಸಿಗುವ ನಿರೀಕ್ಷೆ ಇದೆ.

ವಲಸೆ ವಿರೋಧಿ ಧೋರಣೆ ಹೊಂದಿದ್ದ ಆಲ್ಟರ್ನೇಟಿವ್ ಫಾರ್ ಜರ್ಮನಿ (ಎಎಫ್‌ಡಿ) ಪಕ್ಷ ದೇಶದ ಎರಡನೇ ಅತಿ ದೊಡ್ಡ ರಾಜಕೀಯ ಶಕ್ತಿಯಾಗಿ ಹೊರಹೊಮ್ಮಿದೆ.

ಅಮೆರಿಕದ ಜೊತೆ ಉತ್ತಮ ಸಂಬಂಧ ಹೊಂದಲಾಗುವುದು. ಅಮೆರಿಕ ಮೊದಲು ಎಂಬುದಷ್ಟೇ ಅಲ್ಲದೆ, ಅಮೆರಿಕ ಒಂದೇ ಎಂದು ಭಾವಿಸುವುದಾದರೆ ಸಂಬಂಧ ಸುಧಾರಿಸುವುದು ಕಷ್ಟವಾಗಲಿದೆ. ಆದರೆ, ಸಂಬಂಧಗಳನ್ನು ರೂಪಾಂತರಣಗೊಳಿಸುವಲ್ಲಿ ಯಶಸ್ಸು ದೊರೆಯುವ ನಿರೀಕ್ಷೆ ಇದೆ ಎಂದು ಮೆರ್ಜ್ ಹೇಳಿದ್ದಾರೆ.

ಚುನಾವಣೆಯಲ್ಲಿ ಮೆರ್ಜ್ ಅವರ ಕ್ರಿಶ್ಚಿಯನ್ ಡೆಮಾಕ್ರಾಟ್ ಪಕ್ಷ ಉತ್ತಮ ಸಾಧನೆ ಮಾಡಿದೆ.

ಆದರೆ, ಜರ್ಮನ್ ಚುನಾವಣಾ ವ್ಯವಸ್ಥೆಯ ಕಾರಣದಿಂದಾಗಿ ಯಾವುದೇ ಪಕ್ಷ ಸ್ವತಂತ್ರವಾಗಿ ಅಧಿಕಾರ ನಡೆಸಲು ಸಾಧ್ಯವಾಗುವುದಿಲ್ಲ. ಸರ್ಕಾರ ರಚನೆಗೆ ಮೈತ್ರಿ ಅನಿವಾರ್ಯವಾಗಿದೆ.

ಕಳೆದ ಚುನಾವಣೆಯಲ್ಲಿ ತೀವ್ರ ಮುಖಭಂಗಕ್ಕೆ ಗುರಿಯಾಗಿರುವ ಸೋಶಿಯಲ್ ಡೆಮಾಕ್ರಾಟ್ ಪಕ್ಷದ ಜೊತೆಗೂಡಿ ಮೆರ್ಜ್ ಸರ್ಕಾರ ರಚಿಸಬೇಕಿದೆ

ಚುನಾವಣಾ ಅಧಿಕಾರಿಗಳು ಪ್ರಕಟಿಸಿರುವ ಫಲಿತಾಂಶದ ಪ್ರಕಾರ ಮೆರ್ಜ್ ಅವರ ಕ್ರಿಶ್ಚಿಯನ್ ಡೆಮಾಕ್ರಾಟ್ ಹಾಗೂ ಹಾಲಿ ಚಾನ್ಸಲರ್ ಓಲಾಫ್ ಸ್ಕೋಲ್ಜ್ ಅವರ ಸೋಶಿಯಲ್ ಡೆಮಾಕ್ರಾಟ್ ಪಕ್ಷಗಳು ಜೊತೆಯಾದಲ್ಲಿ ಬಹುಮತ ಪಡೆಯಲು ಸಾಧ್ಯವಾಗಲಿದೆ. ಸಣ್ಣ ಪಕ್ಷಗಳು ಹೆಚ್ಚು ಸಾಧನೆ ಮಾಡಲು ಸಾಧ್ಯವಾಗದ ಕಾರಣ ಮೈತ್ರಿ ಸರ್ಕಾರ ರಚನೆಯ ಹಾದಿ ಇನ್ನಷ್ಟು ಸುಗಮವಾಗಿದೆ.

ಬಲಪಂಥೀಯ ಪಕ್ಷವಾದ ಆಲ್ಟರ್ನೇಟಿ ವ್ ಫಾರ್ ಜರ್ಮನಿ (ಎಎಫ್‌ಡಿ) ಮುನ್ನಡೆ ಗಳಿಸಿದ್ದರೂ ಸಹ ಅದರ ಜೊತೆ ಕೈಜೋಡಿ ಸುವುದಿಲ್ಲ ಎಂದು ಮೆರ್ಜ್ ಹೇಳಿದ್ದಾರೆ.

ಮೆರ್ಜ್ ಅವರ ಕ್ರಿಶ್ಚಿಯನ್ ಡೆಮೊಕ್ರಾಟ್ ಪಕ್ಷ 630 ಸ್ಥಾನಗಳ ಪೈಕಿ 208ರಲ್ಲಿ ಗೆಲುವು ಸಾಧಿಸಿದೆ. ಎಎಫ್‌ಡಿ 152 ಸ್ಥಾನ ಪಡೆದಿದೆ. ಸೋಶಿಯಲ್ ಡೆಮಾಕ್ರಾಟ್ ಪಕ್ಷ 120 ಸ್ಥಾನಗಳಿಗೆ ಸೀಮಿತವಾಗಿದೆ.

ಎಎಫ್‌ಡಿ ಭಾನುವಾರ ರಾತ್ರಿ ಸಂಭ್ರಮಾಚರಣೆ ನಡೆಸಿದ್ದು, ಮುಂದಿನ ಚುನಾವಣೆ ವೇಳೆಗೆ ಮುಖ್ಯ ಪಕ್ಷವಾಗುವ ವಿಶ್ವಾಸ ವ್ಯಕ್ತಪಡಿಸಿದೆ. 12 ವರ್ಷಗಳ ಹಿಂದೆ ಆರಂಭವಾದ ಈ ಪಕ್ಷ ಗಣನೀಯ ಮುನ್ನಡೆ ಕಂಡಿದೆ. ಆದರೆ ರಾಜ್ಯ ಇಲ್ಲವೇ ರಾಷ್ಟ್ರ ಹಂತದಲ್ಲಿ ಯಾವುದೇ ಸರ್ಕಾರದ ಭಾಗವಾಗಿಲ್ಲ.

ಈ ಪಕ್ಷ ತೀವ್ರವಾದಿಗಳ ಜೊತೆ ಸಂಬಂಧ ಹೊಂದಿದೆ ಎಂದು ದೇಶಿಯ ಗುಪ್ತಚರ ಸಂಸ್ಥೆ ವರದಿ ನೀಡಿದೆ. ಈ ಹಿನ್ನೆಲೆಯಲ್ಲಿ ಬೇರೆ ಯಾವುದೇ ಪಕ್ಷ ಎಎಫ್‌ಡಿ ಜೊತೆ ಕೈಜೋಡಿಸುತ್ತಿಲ್ಲ.

### ಸಾಂಪ್ರದಾಯಿಕ ಪಕ್ಷಗಳಿಗೆ ಹಿನ್ನಡೆ

ಎರಡನೇ ಮಹಾ ಸಮರದ ನಂತರ ಜರ್ಮನಿಯಲ್ಲಿ ಸೋಶಿಯಲ್ ಡೆಮಾಕ್ರಾಟ್ ಹಾಗೂ ಕ್ರಿಶ್ಚಿಯನ್ ಡೆಮೊಕ್ರಾಟ್ ಪಕ್ಷಗಳು ಪ್ರಬಲವಾಗಿದ್ದವು. ಆದರೆ ಕಳೆದ ಎರಡು ದಶಕಗಳಲ್ಲಿ ಎರಡೂ ಪಕ್ಷಗಳು ಬೆಂಬಲ ಕಳೆದುಕೊಳ್ಳುತ್ತಿವೆ. ಇದರಿಂದಾಗಿ ಜರ್ಮನ್ ರಾಜಕೀಯ ಹೆಚ್ಚು ವಿಭಜಿತವಾಗಿದೆ.

ಸೋಶಿಯಲ್ ಡೆಮಾಕ್ರಾಟ್ ಪಕ್ಷ ಕೇವಲ ಶೇಕಡಾ 16.4 ರಷ್ಟು ಮತ ಪಡೆದಿದ್ದು, ಇದು ಎರಡನೇ ಮಹಾಸಮರದ ನಂತರ ಅತ್ಯಂತ ಕಳಪೆ ಸಾಧನೆಯಾಗಿದೆ.

ಕ್ರಿಶ್ಚಿಯನ್ ಡೆಮಾಕ್ರಾಟ್ ಪಕ್ಷ 28.5ರಷ್ಟು ಮತ ಪಡೆದಿದ್ದು, ಇದು ಎರಡನೇ ಅತ್ಯಂತ ಕಳಪೆ ಸಾಧನೆಯಾಗಿದೆ. 2021 ರಲ್ಲಿ ಪಕ್ಷ ಶೇಕಡ 30ರಷ್ಟು ಮತ ಪಡೆದಿತ್ತು.

ವಲಸೆ ವಿರೋಧಿ ನೀತಿ ಹೊಂದಿರುವ ಆಲ್ಟರ್ನೇಟಿವ್ ಫಾರ್ ಜರ್ಮನಿ (ಎಎಫ್‌ಡಿ) ಪಕ್ಷ ದೇಶದ ಪೂರ್ವ ಭಾಗದಲ್ಲಿ ಹೆಚ್ಚು ಪ್ರಬಲವಾಗಿದೆ. ಈ ಚುನಾವಣೆಯಲ್ಲಿ ಎಡಪಕ್ಷವು ಯುವಕರ ಗಣನೀಯ ಬೆಂಬಲ ಪಡೆಯುವಲ್ಲಿ ಯಶಸ್ಸು ಕಂಡಿದ್ದು, ಶೇಕಡ 8.8ರಷ್ಟು ಮತ ಗಳಿಸಿದೆ.

11ನೇ ವರ್ಷದ ಪುಣ್ಯಸ್ಮರಣೆ

ನಿನ್ನೊಲುಮೆ ನಮಗಿರಲಿ ತಂದೆ...



ದಿ|| ಶ್ರೀ ಬಳ್ಳಾರಿ ಎಂ. ಬಸವರಾಜಪ್ಪ

ನೀವು ನಮ್ಮನ್ನಗಲಿ ಇಂದಿಗೆ 11 ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ ಹಾಗೂ ನಿಮ್ಮ ಆತ್ಮಕ್ಕೆ ಶಾಂತಿ ಕೋರುವ,

ಶ್ರೀಮತಿ ದೇವೀರಮ್ಮ ಬಸವರಾಜಪ್ಪ ಮತ್ತು ಮಕ್ಕಳು ಹಾಗೂ ಸೊಸೆ, ಅಳಿಯಂದಿರು, ಮೊಮ್ಮಕ್ಕಳು, ಬಂಧು-ಮಿತ್ರರು, ಕಲ್ಲೆಬಾಳು.

ಮೊ. : 86603 15828

KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas